
Shankar Patil

ಸಂವಾದ

ಸಾಹಿತ್ಯಿಕ, ಸಾಂಸ್ಕೃತಿಕ ಸಂಕಲನ

- ನಮ್ಮ ಸಾಹಿತ್ಯ, ಸಾಂಸ್ಕೃತಿಕ ಬದುಕಿನ ಸ್ಪಂದನಕ್ಕೆ
- ವಸ್ತುನಿಷ್ಟ ಸತ್ಯದ ಆವಿಷ್ಕಾರಕ್ಕೆ

ಸಂಪಾದಕರು :

ಡಿ. ಎಸ್. ನಾಗಭೂಷಣ

ರಾಘವೇಂದ್ರ ಪಾಟೀಲ

ಸ. ಉಷಾ

ಮುಖ ಪುಟದ ಚಿತ್ರ:
ಶಂಕರ ಪಾಟೀಲ

- ಆಜೀವ ಸದಸ್ಯತ್ವ ರೂ. **300–00**
- ವಾರ್ಷಿಕ ಚಂದಾ ರೂ. **30–00**

(ಅಂಚೆ ಮೂಲಕ ಚಂದಾ ಕಳುಹಿಸುವವರು ಎಂ.ಓ. ಅಥವಾ ಡಿ.ಡಿ. ಮೂಲಕ ಮಾತ್ರ ಕಳುಹಿಸಬೇಕು)

ಮುದ್ರಣ, ಪ್ರಕಾಶನ ಹಾಗೂ ಸಂಪಾದನೆ:
ಸಂವಾದ ಪ್ರಕಾಶನ, ಮಲ್ಲಾಡಿಹಳ್ಳಿ ಅಂಚೆ–577 531, ಚಿತ್ರದುರ್ಗ ಜಿಲ್ಲೆ
–ಇವರಿಗಾಗಿ.

ಮುದ್ರಕರು:
ನ್ಯಾಷನಲ್ ಪ್ರೆಸ್, ಹಾಸನ

ಖಾಸಗಿ ಪ್ರಸಾರಕ್ಕಾಗಿ

ಸಂವಾದ

೧೪

ಸಂವಾದ ಪ್ರಕಾಶನ, ಮಲ್ಲಾಡಿಹಳ್ಳಿ, ಚಿತ್ರದುರ್ಗ ಜಿಲ್ಲೆ - 577 531

ಈ ಸಂಚಿಕೆಯ ಲೇಖಕರು;

❀ **ಸವಿತಾ ನಾಗಭೂಷಣ,**
C-4, ಆಕಾಶವಾಣಿ ಕ್ವಾರ್ಟರ್ಸ್, ಸಾಲಗಾಮೆ ರಸ್ತೆ, ಹಾಸನ-573 201

❀ **ಡಾ|| ಜಿ. ಎಸ್. ಶಿವರುದ್ರಪ್ಪ,**
'ಚೈತ್ರ', 867, 18ನೇ ಮುಖ್ಯ ರಸ್ತೆ, ಬನಶಂಕರಿ ಎರಡನೇ ಹಂತ,
ಬೆಂಗಳೂರು-560 070

❀ **ಹೆಚ್. ಎಸ್. ಶಿವಪ್ರಕಾಶ್,**
ಇಂಗ್ಲಿಷ್ ಉಪನ್ಯಾಸಕರು, ಸರ್ಕಾರಿ ಗೃಹ ವಿಜ್ಞಾನ ಕಾಲೇಜು,
ಪ್ಯಾಲೇಸ್ ರಸ್ತೆ, ಬೆಂಗಳೂರು-560 002

❀ **ಕೆ. ಬಿ. ಸಿದ್ಧಯ್ಯ,**
1115, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹಿಂಭಾಗ, ಉಪ್ಪಾರಹಳ್ಳಿ,
ತುಮಕೂರು-2

❀ **ಡಾ|| ಕೆ. ಶಿವರಾಮ ಕಾರಂತ,**
'ಸುಹಾಸ', ಸಾಲಿಗ್ರಾಮ, ದ.ಕ.

❀ **ಡಾ|| ಕೃಷ್ಣಾನಂದ ಕಾಮತ್,**
110, ಶಶಿಕಿರಣ, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-560 055

❀ **ದೇವನೂರ ಮಹಾದೇವ,**
53, 5ನೇ ಕ್ರಾಸ್, ನವಿಲು ರಸ್ತೆ, ಕುವೆಂಪು ನಗರ, ಮೈಸೂರು-570 023

❀ **ಆನಂದ ಕಂದ,**
(ದಿವಂಗತ ಬೆಟಗೇರಿ ಕೃಷ್ಣಶರ್ಮರು)

❀ **ಡಾ|| ಬಸವರಾಜ ಕಲ್ಗುಡಿ,**
ಅಧ್ಯಾಪಕರು, ಕನ್ನಡ ಅಧ್ಯಯನ ಕೇಂದ್ರ, ಜ್ಞಾನ ಭಾರತಿ,
ಬೆಂಗಳೂರು-560 056

❀ **ಡಿ. ಎಸ್. ನಾಗಭೂಷಣ,**
ಕಾರ್ಯಕ್ರಮ ನಿರ್ವಹಕರು, ಆಕಾಶವಾಣಿ ಎಫ್.ಎಂ. ಕೇಂದ್ರ,
ಹಾಸನ-573 201

ತಿದ್ದುಪಡಿ: ಈ ಸಂಚಿಕೆಯ 24ನೇ ಪುಟದಲ್ಲಿ ಛಂದಸ್ಸಿಗೆ ಸಂಬಂಧಿಸಿದ ಪ್ರಶ್ನೆಯಲ್ಲಿ **ಹಳೆಯ ಛಂದಸ್ಸಿನ ಚೌಕಟ್ಟನ್ನು** ನಂತರ **ಮುರಿದು ಹೊಸದೊಂದು ಚೌಕಟ್ಟನ್ನು** ಎಂದು ಸೇರಿಸಿ ಓದಿಕೊಳ್ಳಬೇಕಾಗಿ ಕೋರಿಕೆ.

ಐದು ಕವಿತೆಗಳು

⊕ ಸವಿತಾ ನಾಗಭೂಷಣ

1. ಮೌನದ ಗಂಟೆ

(ಭಾರತದಿಂದ ಗಡೀಪಾರು ಮಾಡಲ್ಪಟ್ಟ ಬೌದ್ಧಧರ್ಮ ಚೀನಾ, ಜಾಪಾನುಗಳಿಗೆ ವಲಸೆ ಹೋಗಿ ಕ್ರಮೇಣ ಅಲ್ಲಿ ಕವಲೊಡೆದ ಶಾಖೆಗಳಲ್ಲಿ ಪ್ರಮುಖವಾದ ಶಾಖೆಯೆ 'ಝೆನ್', ಶೊಯ್‌ಚಿ ಒಬ್ಬ ಝೆನ್ ಧರ್ಮಗುರು. ಆತ ತನ್ನ ಶಿಷ್ಯರಿಗೆ ಸೂತ್ರಗಳ ಪಠಣ ಕೈಬಿಟ್ಟು ಕೇವಲ ಧ್ಯಾನದಲ್ಲಿ ನಿರತರಾಗುವಂತೆ ಆದೇಶ ನೀಡುತ್ತಾನೆ. ದೇವಾಲಯ ಹಗಲು ರಾತ್ರಿಯ ಪರಿವೆಯಿಲ್ಲದೆ ಮೌನದಲ್ಲಿ ಮುಳುಗುತ್ತದೆ. ಅದೊಂದು ದಿನ ಇದ್ದಕ್ಕಿದ್ದ ಹಾಗೆ ದೇವಾಲಯದಿಂದ ಸೂತ್ರಗಳ ಪಠಣ ಕೇಳಿಬರುತ್ತದೆ. ಗುರುವಿನ ಮರಣವಾರ್ತೆ ಆ ಮೂಲಕ ಎಲ್ಲೆಡೆ ಬಿತ್ತರಗೊಳ್ಳುತ್ತದೆ).

ಅದೊಂದು ದಿನ ಶೊಯ್‌ಚಿ

ಗಂಟೆಗಳಿಗೆ ಮೊಳಗಿದ್ದು ಸಾಕು ಅಂದ
ತಾಳಗಳಿಗೆ ಕುಣಿದದ್ದು ಸಾಕು ಅಂದ
ಮಂತ್ರಗಳಿಗೆ ಪಠಿಸಿದ್ದು ಸಾಕು ಅಂದ.

ಗಂಟೆಗಳಿಗೆ ಒಂದು ಚಣ ಗಾಬರಿಯಾಯಿತು
ತಾಳಗಳು ಕುಣಿತದ ಮಧ್ಯೆ ಕೆರಳಿ ನಿಂತವು
ಮಂತ್ರಗಳು ಮುಖ ಊದಿಸಿಕೊಂಡವು
ಶಿಷ್ಯರು ತಳಮಳಿಸಿದರು

–2–

ಇದೀಗ ಶೊಯ್‌ಚಿ ಎಲ್ಲರಿಗೂ
ಧ್ಯಾನಿಸಲು ಹೇಳಿದ

ಇಷ್ಟಾನಿಷ್ಟವನೆಲ್ಲ ಮೆಟ್ಟಿ
ಗಂಟೆಗಳು ಗರಬಡಿದು ನಿಂತವು
ತಾಳಗಳು ತಲ್ಲೀನವಾದವು
ಮಂತ್ರಗಳು ಮಗ್ನವಾದವು
ದೇವಾಲಯ ಧ್ಯಾನಸ್ಥವಾಯಿತು.

ಶಿಷ್ಯರು–
ಬುದ್ಧನನೊಮ್ಮೆ ನೋಡಿದರು
ಮುಗುಳು ನಗೆಯನ್ನೂ ನೋಡಿದರು
ಧ್ಯಾನದಲ್ಲಿ ಮುಳುಗಿದರು.

–3–

'ಧ್ಯಾನಿಸಿ' ಅಂದದ್ದು
ಅಲ್ಲೇ ಭುಸುಗುಡುತ್ತಾ
ಅಡ್ಡಾಡುತ್ತಿದ್ದ ಸೂರ್ಯನ
ಕಿವಿಗೂ ಬಿತ್ತು.
ಅಗ್ನಿಪರ್ವತದೊಳಗೊಂದು
ಅಂತರ್ಗಾಮಿ ನದಿ
ತಣ್ಣಗೆ ಹರಿದು ಹೋಯಿತು.

'ಧ್ಯಾನಿಸಿ' ಅಂದದ್ದು
ಅಲ್ಲೇ ಚಿನ್ನಾಟವಾಡುತ್ತಿದ್ದ
ಮರಿಮೋಡಗಳ ಹಿಂಡಿಗೂ ತಟ್ಟಿತು
ಮಿಂಚಿನ ಸೆಳಕೊಂದು
ಮೆರೆದು ಮರೆಯಾಯಿತು.

ಹೀಚು, ಮೊಗ್ಗು, ಹೂವು, ಹಣ್ಣು
ಕೆಂಪೆಲೆ, ಹಸಿರೆಲೆ, ಹಣ್ಣೆಲೆಗಳ
ಲೆಕ್ಕಾಚಾರದಲ್ಲಿ ಮಗ್ನವಾಗಿದ್ದ
ಹೆಮ್ಮರಗಳಿಗೆ ಗಾಳಿಗಿವಿಯೂದಿ
'ಧ್ಯಾನಿಸಿ' ಅಂತು.
ಅತ್ತಿಂದಿತ್ತ ಹೊಯ್ದಾಡಿ
ಧ್ಯಾನಕ್ಕೆ ಶರಣಾಯಿತು.

ಧುಮುಧುಮು ಎಂದು
ಧುಮುಗುಡುತ್ತಾ ಧುಮ್ಮಿಕ್ಕಿ
ಹರಿಯುತ್ತಿದ್ದ ನದಿಯ
ಎದೆ ಸುಳಿಯೊಳಗೆ

ದನಿಯೊಂದು ಚಿಮ್ಮಿ
ತಡೆದು ನಿಲ್ಲಿಸಿತು.

ಚಂದ್ರ ಓಡೋಡಿ ಬಂದು
ಇರುಳ ಮನೆಗೆ ದೀಪ ಹಚ್ಚಿದ
ಬೆಳಕು ಸಾಲದು
ಎಂದು ಅವನಿಗೂ ಅನ್ನಿಸಿತು.

ದುಂಬಿಯು ಝೇಂಕಾರದ ಹಾಗೆ
ಹಕ್ಕಿಯು ಹಾಡಿನ ಹಾಗೆ
ಹೂವಿನ ಗಂಧದ ಹಾಗೆ
ಧ್ಯಾನ ಎಲ್ಲರನ್ನು ತಬ್ಬುತ್ತಿತ್ತು
ದಟ್ಟವಾಗುತ್ತಿತ್ತು.

-4-

ಅದೊಂದು ದಿನ ಶೊಯ್‌ಚಿ
ಇನ್ನಿಲ್ಲವಾದ.

ಸೂರ್ಯ ಬೆಂಕಿಯ ನಾಲಗೆ ತೆರೆದು
ನದಿ ಧುಮ್ಮಿಕ್ಕಿ ನಡೆದು
ಶೊಯ್‌ಚಿ ಇನ್ನಿಲ್ಲ ಎಂದು ಸಾರಿದವು.

ಮೋಡಗಳು ಓಡೋಡಿ
ಮರಗಳು ತೂಗಾಡಿ
ಶೊಯ್‌ಚಿ ಇನ್ನಿಲ್ಲ ಎಂದು ಸಾರಿದವು.

ಗಂಟೆಗಳು ಮೊಳಗತೊಡಗಿದವು
ತಾಳಗಳು ಕುಣಿಯತೊಡಗಿದವು
ಮಂತ್ರಗಳ ಗರ್ಜನೆ ಮುಗಿಲು ಮುಟ್ಟಿತು.

ಯಾರಿಗೊ ಗೊತ್ತಾಯಿತು
ಶೊಯ್‌ಚಿ ಇನ್ನಿಲ್ಲ
ಎಲ್ಲರಿಗೂ ಗೊತ್ತಾಯಿತು

ಶೊಯ್‌ಚಿ ಇನ್ನಿಲ್ಲ
ಜಗತ್ತೇ ನುಡಿಯಿತು
ಶೊಯ್‌ಚಿ ಇನ್ನಿಲ್ಲ

–5–

ಶಿಷ್ಯರು ನೋಡಿದರು :

ಸದ್ದುಗದ್ದಲ ಸಂಭ್ರಮದಲ್ಲಿ
ಕರಗುತ್ತಿದ್ದ
ಬುದ್ಧನನ್ನು ನೋಡಿದರು

ದುಂಬಿಯು ಝೇಂಕಾರದಲ್ಲಿ
ಹಕ್ಕಿಯು ಹಾಡಿನಲ್ಲಿ
ಹೂವಿನ ಪರಿಮಳದಲ್ಲಿ
ಕರಗುತ್ತಿದ್ದ
ಮುಗುಳು ನಗೆಯನ್ನು ನೋಡಿದರು,

ಧೂಪದ ಹೊಗೆ ಕಣ್ಣ
ಕವಿಯುವ ತನಕ ನೋಡಿದರು

2. ಚಂದ್ರನನ್ನು ಕರೆಯಿರಿ ಭೂಮಿಗೆ

ಪುಟ್ಟ ಮಕ್ಕಳು ಚಂದ್ರನನ್ನು
ಕರೆಯುತ್ತಿದ್ದಾರೆ ಭೂಮಿಗೆ

ನಾನೂ ಮಗುವಾಗಿದ್ದಾಗ
ಮೊಗ್ಗಿನಂತಹ ಬೆರಳುಗಳನ್ನು
ಮಡಿಸಿ ಅರಳಿಸಿ
ಚಂದ್ರನನ್ನು ಕರೆದಿದ್ದೆ ಭೂಮಿಗೆ

ನನ್ನ ತಮ್ಮಂದಿರು, ತಂಗಿ
ಗೆಳೆಯ ಗೆಳತಿಯರು

ಯಾರೆಲ್ಲ ಕರೆದಿದ್ದರು
ಚಂದ್ರನನ್ನು ಭೂಮಿಗೆ.

ಗೂಡಲ್ಲಿ ಕಣ್ಣರಳಿಸಿ
ಕೂತಿರುವ ಮರಿಹಕ್ಕಿ
ನದಿಯೊಳಗೆ ಈಸುತ್ತಿರುವ
ಮರಿ ಮೀನು, ಯಾರೆಲ್ಲ
ಕರೆದಿದ್ದರು ಚಂದ್ರನನ್ನು ಭೂಮಿಗೆ.

-2-

ಅಂದು ತೊದಲು ನುಡಿಯುತ್ತಿದ್ದ
ಮರಿಕೋಗಿಲೆ ಇಂದು
ಪಂಚಮದಲ್ಲಿ ಹಾಡಿದೆ.

ಅಂದು ನದಿಯೊಳಗೆ ಈಸುತ್ತಿದ್ದ
ಮರಿಮೀನು ಇಂದು
ಸಮುದ್ರವ ಸೇರಿದೆ.

ಅಂದು ಚಂದ್ರನನ್ನು ಕರೆಯುತ್ತಿದ್ದ
ನನ್ನ ಬೆರಳುಗಳು ಇಂದು
ಭೂಗೋಳ, ವಿಜ್ಞಾನ ಪುಸ್ತಕಗಳ
ಪುಟ ತಿರುವಿ ಒರಟಾಗಿವೆ

-3-

ಮುಗಿಲು ಮುಟ್ಟಿ ನಿಂತಿರುವ ಹೆಮ್ಮರ
ಮೊಳಕೆಯೊಡೆದ ದಿನಗಳನ್ನು
ಮೆಲುಕು ಹಾಕುವ ಹಾಗೆ
ನಾನೊಮ್ಮೆ ಹಿಂದಿರುಗಿ ನೋಡಲೆ ?

ಆಸೆ, ದುಃಖ, ಹರ್ಷ, ವಿಷಾದದ
ಎಲೆಗಳನ್ನು ಕಳಚಿಕೊಂಡು
ಧ್ಯಾನದಲ್ಲಿರುವಂತಿದೆ ಮರ
ನೋಡಿಯೂ ಸುಮ್ಮನಿರಲೆ ?

ಕಂದಮ್ಮಗಳೆ...
ಕೇಕೆ ಹಾಕಿ ಕುಣಿಕುಣಿದು
ಕರೆಯಿರಿ ಚಂದ್ರನನ್ನು ಭೂಮಿಗೆ
ಹೂವಿನ ಹಾಗೆ ಬೆರಳುಗಳನ್ನು
ಅರಳಿಸಿ ನೀವೇ
ಕರೆಯಿರಿ ಚಂದ್ರನನ್ನು ಭೂಮಿಗೆ

ನಾನು ನಾನಿರುವಂತೆಯೆ
ನೋಡುವೆ ಒಂದು ಘಳಿಗೆ.

3. ಕನ್ನಡಿ ನನ್ನನ್ನು ನೋಡಿತು

(ಝೆನ್ ಗುರು ಚುಅಂಗ್‌ತ್ಸು ಹೀಗೆ ಹೇಳುತ್ತಾನೆ: ಕನ್ನಡಿಯನ್ನು ನೋಡಿ. ಅದು ಏನನ್ನೂ ಸ್ವೀಕರಿಸುವುದಿಲ್ಲ. ಏನನ್ನೂ ತಿರಸ್ಕರಿಸುವುದಿಲ್ಲ. ಅದು ಏನಿದ್ದರೂ ಗ್ರಹಿಸುತ್ತದೆ.)

ಕನ್ನಡಿ ನನ್ನನ್ನು ನೋಡಿತು.

ನನ್ನ ಕಣ್ಣಂಚಿನ ನೀರನ್ನೂ
ನನ್ನ ತುಟಿಯುಂಚಿನ ನಗೆಯನ್ನೂ
ನನ್ನ ಕೆನ್ನೆಯಲ್ಲಿನ ಲಜ್ಜೆಯನ್ನೂ
ಕನ್ನಡಿ ನೋಡಿತು.

ನನ್ನ ಗಂಟಲೊಳಗಿನ ಮಾತನ್ನೂ
ನನ್ನ ನಾಲಗೆಯೊಳಗಿನ ರುಚಿಯನ್ನೂ
ನನ್ನ ಕಿವಿಯೊಳಗಿನ ದನಿಯನ್ನೂ
ಕನ್ನಡಿ ನೋಡಿತು.

ನನ್ನ ಚಿಂತೆಹಣೆ ಸುಕ್ಕುಗಳನ್ನೂ
ಮೋಡದಂತಹ ಮುಂಗುರುಳುಗಳನ್ನೂ
ಒಂದೆರಡು ಮಿಂಚಿನ ಗೆರೆಗಳನ್ನೂ
ಕನ್ನಡಿ ನೋಡಿತು.
ನನ್ನ ತೋಳುಗಳ ಅಕ್ಕರೆಯನ್ನೂ
ಬೆರಳುಗಳ ಹತವಾರಿತನವನ್ನೂ

ಕಾಲುಗಳ ಕ್ರೌರ್ಯವನ್ನೂ
ಉಗುರುಗಳ ಜಾಣತನವನ್ನೂ
ಕನ್ನಡಿ ನೋಡಿತು.

ಹರಿವ ನದಿರಕ್ತದಂಥ ನನ್ನ ಆಸೆಗಳನ್ನೂ
ಮೂಳೆಯಷ್ಟೆ ಗಟ್ಟಿಯಾದ ಅಹಂಕಾರವನ್ನೂ
ಮಾಂಸಲ ಮೃದು ಪ್ರೀತಿಯನ್ನೂ
ಕನ್ನಡಿ ನೋಡಿತು.

ನಾನು ಮೊಳಕೆಯೊಡೆದು ಸಸಿಯಾಗಿ
ಮರವಾಗಿ ಮೆರೆದದ್ದನ್ನು
ಕನ್ನಡಿ ನೋಡಿತು.
ಮೊಗ್ಗರಳಿ ಹೂವಾಗಿ
ಹಣ್ಣಾಗಿ ಫಲವಾಗಿ ಮರುಗಿದ
ನನ್ನನ್ನು ಕನ್ನಡಿ ನೋಡಿತು

ಕನ್ನಡಿ ನನ್ನನ್ನು ಪ್ರೀತಿಸಲಿಲ್ಲ
ಕನ್ನಡಿ ನನ್ನನ್ನು ತಿರಸ್ಕರಿಸಲಿಲ್ಲ
ಅದು ನನ್ನನ್ನು ಸುಮ್ಮನೆ ನೋಡಿತು.

4. ಗಾಯಗಳು

ನಿನ್ನೆಯ ದಿನ ಮೈಯೆಲ್ಲವನ್ನು
ಗೀರಿಕೊಂಡಿದ್ದವು ಗಾಯಗಳು
ನಿನ್ನೆಯ ದಿನ ಮನಸೆಲ್ಲವನ್ನು
ಹೀರಿಕೊಂಡಿದ್ದವು ಗಾಯಗಳು

ನಾನು ಅವುಗಳಿಗೆ ಪರಿಪರಿಯಾಗಿ
ತಿಳಿಯ ಹೇಳಿದೆ
ಪ್ರೀತಿಯ ಮಾತಿಂದ
ಸಂತೈಸಲು ನೋಡಿದೆ
ಅವು ನನ್ನನ್ನು ಧಿಕ್ಕರಿಸಿದವು

ಅಹಂಕಾರದ ಗಾಯಗಳವು
ಇನ್ನಷ್ಟು ಹೊತ್ತಿಕೊಂಡು ಉರಿದವು
ಅವಮಾನದ ಗಾಯಗಳವು
ಮತ್ತಷ್ಟು ಕೀವು ಸುರಿಸಿದವು

ಇವತ್ತು ನಿರ್ಧರಿಸಿದ್ದೇನೆ
ಆ ಸೂರ್ಯನನ್ನು ಕೇಳಿಯೇ ಬಿಡುತ್ತೇನೆ
ಅವನು ನನ್ನ ಗಾಯಗಳನ್ನು
ಒಣಗಿಸಬಹುದು

ನಾಳೆ ಚಂದ್ರನ ಮೊರೆಹೋಗುತ್ತೇನೆ
ಅವನು ಅಳಿದುಳಿದ
ಕಲೆಗಳನ್ನೂ ಅಳಿಸಿಹಾಕಬಹುದು

ರಾತ್ರಿಗಳು–ಹಗಲುಗಳು
ಹಗಲುಗಳು–ರಾತ್ರಿಗಳು
ಗಾಯಗಳು ಮಾಯಬಹುದು.

5. ಸ್ಥಿತಿ

ಹೂವಿನ ಗೋಣು ಮುರಿದು
ಹೂದಾನಿಯಲ್ಲಿ ಇರಿಸುತ್ತೇನೆ

ಗೆದ್ದಲು ಹುಳಗಳು ಗೋಡೆಯ
ಮೇಲೆ ಶಿಲ್ಪ ಕಡೆದಿದ್ದರೆ
ಭಗ್ನಗೊಳಿಸುತ್ತೇನೆ.

ಸಕ್ಕರೆಯ ಬೆಟ್ಟ ಹೊತ್ತು
ಹರಿವ ಸಾಲು ಇರುವೆಗಳನ್ನು
ಒತ್ತರಿಸಿ ಗುಡಿಸಿಹಾಕುತ್ತೇನೆ

ಸೂರಿನಡಿ ಗುಬ್ಬಿಗಳು
ಕಾಳು ಕಡ್ಡಿ ಹೆಕ್ಕಿ ಗೂಡು
ಹೆಣೆದಿದ್ದರೆ ಕಿತ್ತು ಬೀದಿಗೆಸೆಯುತ್ತೇನೆ.

ಗುಬ್ಬಿಯ ಸೂರನ್ನೂ
ಇರುವೆಯ ಅನ್ನವನ್ನೂ
ಹೂವಿನ ಬದುಕನ್ನೂ
ಕಸಿದುಕೊಳ್ಳುವ ಈ
ಕೊಲೆಪಾತಕ ಕೈಗಳಿಗೆ
ಯಾರ ಭಯವೂ ಇಲ್ಲ.

ಜಗತ್ತಿನ ಸಂಕಟಗಳಿಗೆ
ಕಿಟಕಿ ಮುಚ್ಚಿ ಕುಳಿತರೆ
ತೆರೆಯಲು ಯಾರೂ ಬರುವುದಿಲ್ಲ.
ನೋವು, ನಿಟ್ಟುಸಿರು
ಅಸಮತೆ ಅನ್ಯಾಯ
ಈ ಗಾಳಿಯಲ್ಲೇ ಇದೆ.
ನಾನೂ ಅದನ್ನು ನಿರ್ಲಜ್ಜೆಯಿಂದ
ಉಸಿರಾಡುತ್ತಿದ್ದೇನೆ.

ಎಲ್ಲರಿಗೆ ಅನಿಸುವಂತೆ
ನನಗೂ ಒಮ್ಮೊಮ್ಮೆ ಅನಿಸುತ್ತದೆ.
ನನ್ನೆದೆಯ ಸೂರ್ಯ
ಇನ್ನು ಹೆಚ್ಚು ದಿನ ಉರಿಯಲಾರ.
ಹಸಿವು, ದುಃಖ, ಕ್ರೌರ್ಯ
ಎಲ್ಲವನ್ನೂ ಇನ್ನಿಲ್ಲದಷ್ಟು
ಸಹಜವಾಗಿ ಚಿತ್ರಿಸಿ
ಜೀವ ತುಂಬಿದ ಕಲಾವಿದ
ಯಾರೋ ಎಂದು
ನನ್ನನ್ನೆ ಕೇಳಿಕೊಳ್ಳುತ್ತೇನೆ,
ಗಂಧವನ್ನೂ ವಿಷವನ್ನೂ
ಒಂದೇ ಎಂದು
ಉಸಿರಾಡುತ್ತಿರುವೆನಾದರೆ
ನನಗಿನ್ನೂ ಆಸೆ ಇದೆ.

ಮುಳ್ಳಿನದೊಂದು ಹೆಜ್ಜೆ
ಮಣ್ಣಿನದೊಂದು ಹೆಜ್ಜೆ
ದಾರಿ ದೂರವಿದೆ.

ಕಾವ್ಯ ಕಮ್ಮಟ

(ಆಕಾಶವಾಣಿ ಬೆಂಗಳೂರು ಕೇಂದ್ರ ಇತ್ತೀಚೆಗೆ ತನ್ನ ಸಾಹಿತ್ಯ ಕಾರ್ಯಕ್ರಮದಲ್ಲಿ ಭಾಷಾ ಕಮ್ಮಟ, ಕಥಾ ಕಮ್ಮಟ ಹಾಗೂ ಕಾವ್ಯ ಕಮ್ಮಟ-ಹೀಗೆ ಮೂರು ಕಮ್ಮಟಗಳನ್ನು ನಿಯೋಜಿಸಿ ಪ್ರಸಾರ ಮಾಡಿತು. ಇಲ್ಲಿ ನಾವು ಕಾವ್ಯ ಕಮ್ಮಟದ ಸಂಪಾದಿತ ರೂಪವನ್ನು ನಮ್ಮ ಓದುಗರಿಗಾಗಿ ನೀಡುತ್ತಿದ್ದೇವೆ. ಈ ಕಾರ್ಯಕ್ರಮವನ್ನು ಧ್ವನಿಮುದ್ರಿಸಿಕೊಂಡು ನಂತರ ಅದರ ಹಸ್ತಪ್ರತಿ ತಯಾರಿಸಿದ ಗೆಳೆಯ ಜಿ. ವಿ. ಆನಂದಮೂರ್ತಿ ಅವರಿಗೆ ಸಂವಾದ ಋಣಿಯಾಗಿದೆ. ಹಾಗೆಯೇ ಆಕಾಶವಾಣಿಗೆ ಕೂಡ. -ಸಂ.)

ಡಿ. ಎಸ್. ನಾಗಭೂಷಣ: ನಮ್ಮ ಈ ಕಮ್ಮಟದಲ್ಲಿ ಮುಖ್ಯವಾಗಿ ನಾವು ಕಾವ್ಯದ ಹುಟ್ಟಿನ ಹಿನ್ನೆಲೆ, ಅದಕ್ಕೆ ಸಂಬಂಧಿಸಿದಂತಿರುವ ಸ್ಫೂರ್ತಿಯ ಪ್ರಶ್ನೆ, ಅಭಿವ್ಯಕ್ತಿಯ ಕ್ರಮ ಹಾಗೂ ಸ್ವರೂಪ, ಅದರ ಅರ್ಥ ಹಾಗೂ ಸಾರ್ಥಕ್ಯ ಮತ್ತು ಅದರ ಸಾಮಾಜಿಕ ಆಯಾಮ–ಇವುಗಳ ಬಗ್ಗೆ ಚರ್ಚಿಸುವ ಆಶಯ ಇಟ್ಟುಕೊಂಡಿದ್ದೇವೆ. ಈ ಚರ್ಚೆಯಲ್ಲಿ ಪರಿಣತರಾಗಿ ಭಾಗವಹಿಸ್ತಾ ಇರೋರು ಅಂದ್ರೆ ಕನ್ನಡದ ಹಿರಿಯ ಕವಿ ಹಾಗೂ ವಿಮರ್ಶಕರಾದ ಡಾ॥ ಜಿ. ಎಸ್. ಶಿವರುದ್ರಪ್ಪನವರು, ಈಚಿನ ದಿನಗಳಲ್ಲಿ ಸಮರ್ಥ ಕವಿ ಅನ್ನಿಸಿಕೊಂಡಿರೋರಲ್ಲಿ ಒಬ್ಬರಾದ ಹೆಚ್. ಎಸ್. ಶಿವಪ್ರಕಾಶ್ ಹಾಗೂ ಇತ್ತೀಚೆಗೆ ತಮ್ಮ 'ಬಕಾಲ' ಅನ್ನುವ ಪ್ರಥಮ ಕವನ ಸಂಕಲನದ ಮೂಲಕವೇ ಬೆರಗು ಹಾಗೂ ಕುತೂಹಲ ಹುಟ್ಟಿಸಿರುವ ಕೆ.ಬಿ. ಸಿದ್ದಯ್ಯನವರು. ಕಾವ್ಯ ಪ್ರಯೋಗದ ಹಿನ್ನೆಲೆಯಲ್ಲಿ ನೋಡಿದಾಗ ಈ ಮೂವರೂ ಇವೊತ್ತಿನ ಕಾವ್ಯ ಸಂದರ್ಭದ ಮೂರು ಗಂಭೀರ ನೆಲೆಗಳನ್ನು ಪ್ರತಿನಿಧಿಸುವಂತಹವರು. ಹೀಗಾಗಿ ಇವೊತ್ತಿನ ಚರ್ಚೆ ಹೆಚ್ಚು ಅರ್ಥಪೂರ್ಣ ಮತ್ತು ಕುತೂಹಲಕಾರಿಯಾಗಿರುತ್ತೆ ಅನ್ನುವ ನಿರೀಕ್ಷೆ ನಮ್ಮದು. ಬಹುಶಃ ಇವೊತ್ತಿನ ಚರ್ಚೆಯನ್ನು ನಾವು, ಮನುಷ್ಯ ಸಂಸ್ಕೃತಿಯಲ್ಲಿ ಕಾವ್ಯ ಒಂದು ಅಭಿವ್ಯಕ್ತಿ ರೂಪವಾಗಿ ಮೂಡಿದುದರ ಹಿನ್ನೆಲೆಯನ್ನು ಹೇಗೆ ಗುರುತಿಸಬಹುದು ಅನ್ನೋ ಪ್ರಶ್ನೆಯಿಂದ ಆರಂಭಿಸಬಹುದೂಂತ ಕಾಣುತ್ತೆ. ಕೆ. ಬಿ. ಸಿದ್ಧಯ್ಯನವರು ಚರ್ಚೆಯನ್ನು ಶುರುಮಾಡಬಹುದು.

ಕೆ. ಬಿ. ಸಿದ್ಧಯ್ಯ: ಮನುಷ್ಯ ಸಂಸ್ಕೃತಿಯಲ್ಲಿ ಕಾವ್ಯ ಹೇಗೆ ಹುಟ್ಟಿತು ಅನ್ನೋದಕ್ಕಿಂತ ಮುಂಚಿತವಾಗಿ ನಾವು ತಿಳೀಬೇಕಾದ್ದೇನು ಅಂದರೆ, ಮನುಷ್ಯ

ಸಂಸ್ಕೃತಿಯನ್ನ ಗ್ರಹಿಸೋದಕ್ಕೆ ಇರೋ ಮಾರ್ಗಗಳು ಯಾವುವು, ಈ ಲೋಕಗ್ರಹಣ ಮಾರ್ಗಗಳೇನು ಅನ್ನೋದನ್ನ. ಈಗ ಲಭ್ಯವಿರುವ ಮಾರ್ಗಗಳು ಅಂದರೆ Rational ಆದ ಮಾರ್ಗ. ಅದನ್ನ ವೈಚಾರಿಕ ಮಾರ್ಗ ಅಂತ ಕರೀಬಹುದು. ಇನ್ನೊಂದು Intuitive ಆದ ಮಾರ್ಗ, ಅದನ್ನ ಅರಿವಿನ ಮಾರ್ಗ ಅಂತ ಕರೀ ಬಹುದು. ಈಗ ಈ ವೈಚಾರಿಕ ಮಾರ್ಗದಲ್ಲಿ ಮನುಷ್ಯ ಸಂಸ್ಕೃತಿಯನ್ನು ನಾವು ಅಧ್ಯಯನ ಮಾಡೋದಾದರೆ ಅದರ ಬೆನ್ನೆಲುಬಿಗೆ ತರ್ಕ ಇರುತ್ತದೆ. ಈ ತರ್ಕ ಮಂಡನೆಗೆ ಮಾಹಿತಿ ಮತ್ತು ವಿವರಗಳನ್ನು ಸಂಗ್ರಹಣೆ ಮಾಡಿ, ಒಂದು ಮಾನದಂಡ ವನ್ನು ಮಾಡಿ ಆ ಮೂಲಕ ಮನುಷ್ಯ ಸಂಸ್ಕೃತಿಯನ್ನು ಅಧ್ಯಯನ ಮಾಡಬೇಕಾಗು ತ್ತದೆ. ಹೀಗೆ ಮಾಡುವಾಗ ಮನುಷ್ಯ ಸಂಸ್ಕೃತಿಯ ವಿಭಾಗೀಯ ರೀತಿಯ ಒಂದು ಅಧ್ಯಯನವನ್ನು ಮಾಡಬಹುದಾದರೂ–ಈಗ ಮನುಷ್ಯನ ಸೈಕಾಲಜಿ, ಅವನ ಸೋಷಿಯಾಲಜಿ ಈ ತರ ವಿಭಾಗೀಯ ಹಂತದಲ್ಲಿ ಅಧ್ಯಯನ ಮಾಡಿಕೊಂಡು– ಒಟ್ಟಾರೆಯಾಗಿ ಈ Rational ಆದ ಮಾರ್ಗದಿಂದ Study ಮಾಡೋಕಾಗೋ ದಿಲ್ಲ ಅಂತ ನನಗನಿಸುತ್ತೆ. ಇದರ ವಿಫಲತೆಯಿಂದ ಏನಾಯಿತು ? ಮನುಷ್ಯ ಸಂಸ್ಕೃತಿಯನ್ನು ಅಧ್ಯಯನ ಮಾಡೋದಕ್ಕೆ ಅರಿವಿನ ಮಾರ್ಗವನ್ನು ಮನುಷ್ಯ ಅನಿ ವಾರ್ಯವಾಗಿ ಕಂಡುಕೊಳ್ಳಬೇಕಾಯಿತು. ಈ ಅರಿವಿನ ಮಾರ್ಗ ಅಂದರೆ? ಈ ಛಿದ್ರ ಗೊಂಡಿರುವ ಮನುಷ್ಯ – ನಾಗರೀಕತೆಯಿಂದಾಗಿರಬಹುದು, ರಾಗದ್ವೇಷಗಳಿಂದ ಆಗಿರಬಹುದು, ಪ್ರೇಮದ್ವೇಷಗಳಿಂದ ಆಗಿರಬಹುದು–ಇಂಥ ಭಾವನೆಗಳಿಂದ ಛಿದ್ರ ಗೊಂಡಿರತಕ್ಕಂತಹ, ಬದುಕಿನ ಕ್ರೌರ್ಯದಿಂದ ಛಿದ್ರಗೊಂಡಿರತಕ್ಕಂತಹ ವ್ಯಕ್ತಿತ್ವ ಈ ಸಂಸ್ಕೃತಿಯ ಕೇಂದ್ರ ಆಗಿರುತ್ತದೆ. ಈ ಕೇಂದ್ರ ವ್ಯಕ್ತಿಯ ಅಖಂಡ ಅನುಭವದ ಏಕತ್ವದಲ್ಲಿ ನಾವು ಮನುಷ್ಯನ ಇರುವಿಕೆಯನ್ನು ನೋಡಬೇಕಾಗುತ್ತದೆ. ಇದು ಅರಿವಿನ ಮಾರ್ಗ ಅಂತ ನಾವು ತಿಳಿಯೋದಾದರೆ, ಇಂಥ ಒಂದು ಮಾರ್ಗವೇ ಕಾವ್ಯ ಕೂಡ ಅಂತ ನನಗನಿಸುತ್ತೆ. ಈ ಕಾವ್ಯ ಅಭಿವ್ಯಕ್ತಿಯಾಗಿ ಬರೋದರ ಹಿನ್ನೆಲೆ ಎಂಥದ್ದಿರಬಹುದು ಅಂತ ನಾನು ಯೋಚನೆ ಮಾಡೋವಾಗ ಅನಿಸುತ್ತೆ: ಸರ್ವೇ ಸಾಮಾನ್ಯವಾಗಿ ಗೊತ್ತಿರೋ ಅಂಥ 'ಕಿಸಾಗೌತಮಿ' ಕತೆಯ ಮೂಲಕ ಕಾವ್ಯ ಅಭಿ ವ್ಯಕ್ತಿ ಪಡೆದಿದ್ದರ ಅರ್ಥ ಮಾಡಿಕೊಳ್ಳಬಹುದು ಅಂತ ಕಾಣುತ್ತೆ. ಸಾವಿನ ಬಾಯಿಗೆ ಮಗನನ್ನು ಒಪ್ಪಿಸಿದ ಕಿಸಾ ಗೌತಮಿಯ ಮಾನಸಿಕ ತೊಳಲಾಟ ಎಂಥದ್ದು ಅಂತ ಕೂಡ ನಾವು ಊಹಿಸೋಕ್ಕಾಗೋದಿಲ್ಲ. ಸಮುದ್ರದಂಥ ತಳಮಳಗಳಿಂದ ಇದ್ದ ಕಿಸಾಗೌತಮಿ ಎದುರಾಗಿದ್ದು ಯಾರನ್ನು ಅಂದರೆ ಬುದ್ಧನನ್ನು. ಅವಳ ಸಮುದ್ರ ದಂಥ ತಳಮಳಗಳನ್ನು ಕಂಡಂಥ ಬುದ್ಧ ಕಿಸಾಗೌತಮಿಗೆ ಕೊಟ್ಟ ಸಾಂತ್ವನದ ಮಾತು ಅತ್ಯಂತ ಸರಳವಾದದ್ದು. 'ಸಾವಿಲ್ಲದ ಮನೆಯಲ್ಲಿ ನೀನು ಸಾಸಿವೆಯನ್ನು ತರಬೇಕು' ಅಂತ ಬುದ್ಧ ಕಿಸಾಗೌತಮಿಗೆ ಹೇಳಿದಂತ ಮಾತು. ಆ ಅಭಿವ್ಯಕ್ತಿಯ ಹಿಂದೆ

ಏನಿದೆ ಅಂದರೆ, ಕಿಸಾ ಗೌತಮಿಯ ತಳಮಳವನ್ನು, ಹತಾಶೆಯನ್ನು ಸಂಕಟವನ್ನು ಪೂರ್ಣವಾಗಿ ತಿಳಿದಿರುವ ಒಂದು ಅರಿವು. ಅದನ್ನು ಜ್ಞಾನ ಅಂತ ಕರೀಬಹುದೇನೋ. ಇಂಥ ಅರಿವು ಕಿಸಾಗೌತಮಿಯಲ್ಲಿರತಕ್ಕಂತಹ ತಳಮಳ-ಅದನ್ನು ನೀವು ಅವಳ ಒಂದು ದುರಂತ ಕನಸು ಅಂತ ಕರೀಬಹುದು, ಒಂದು ನಂಬಿಕೆ ಅಂತ ತಿಳೀಬಹುದು. ಒಂದು ಪುರಾಣ ಅಂತ ನಾವು ಕರೀಬಹುದು—ಈ ಎಲ್ಲ ಭಾವನಾ ಲಯಗಳನ್ನು ಜ್ಞಾನದ ಕಣ್ಣಿಂದ ನೋಡಿ ಅದಕ್ಕೆ ಒಂದು ಅಭಿವ್ಯಕ್ತಿಯನ್ನು ಕೊಡುವಂತಹ ಸಾಮರ್ಥ್ಯ ಬುದ್ಧನಿಗೆ ಇದ್ದುದರ ಕಾರಣ, ಕೇವಲ ಒಂದು ಸರಳ ವಾಕ್ಯ ಕಿಸಾಗೌತಮಿಯ ಸಮುದ್ರದಂತ ತಳಮಳಗಳನ್ನ ಶಾಂತಗೊಳಿಸಿ ಅರಿವಿನ ಕಡೆಗೆ, ಸಾವಿಲ್ಲದ ಮನೆಯಿಲ್ಲ ಎಂಬ ಅರಿವಿನ ಕಡೆಗೆ ಅವಳನ್ನು ಕೊಂಡೊಯ್ತು. ಆದ್ದರಿಂದ ನನಗನ್ನಿಸುತ್ತಾ ಇದೆ, ಮಾನವ ಸಂಸ್ಕೃತಿಯ ಹಿನ್ನೆಲೆಯಲ್ಲಿ ಕಾವ್ಯಕ್ಕೆ ಕಿಸಾಗೌತಮಿಯಲ್ಲಿದ್ದಂತಹ ಒಂದು ತಳಮಳ, ಬುದ್ಧನ ಅಭಿವ್ಯಕ್ತಿಯಲ್ಲಿದಂತಹ ಒಂದು ಅರಿವು ಬೇಕಾಗುತ್ತದೆ. ಅಂಥ ಒಂದು ತಳಮಳ ಹಾಗೂ ಇಂಥ ಜ್ಞಾನಸ್ಪರ್ಶದಿಂದ ಕಾವ್ಯ ಅಭಿವ್ಯಕ್ತಿ ಪಡೆಯಬಹುದೇನೋ ಅಂತ ನನಗನ್ನಿಸುತ್ತಾ ಇದೆ.

ಡಿ. ಎಸ್. ನಾಗಭೂಷಣ: ಕಾವ್ಯ ಇಷ್ಟೆಲ್ಲ ಬೆಳೆದ ಮೇಲೆ ಯೋಚನೆ ಮಾಡಿದಾಗ ಇಷ್ಟೆಲ್ಲಾ ಅನಿಸಬಹುದೇನೋ ... ಆದರೆ ಒಬ್ಬ ಮೊದಲ ಮನುಷ್ಯ ಕಾವ್ಯ ಬರೆದಾಗ ಇಷ್ಟೆಲ್ಲ ಭಾರವಾದ ಒಂದು ಒತ್ತಡ ಅವನಿಗಿತ್ತ ?

ಶಿವಪ್ರಕಾಶ್: ಇದು ಕಾವ್ಯ ಯಾವ ರೀತಿ ಚಾರಿತ್ರಿಕವಾಗಿ ಶುರುವಾಯಿತು ಅನ್ನುವುದು ಬಹಳ Speculative ಆದ ಪ್ರಶ್ನೆ. ಇದರ ಬಗ್ಗೆ ಊಹಾಪೋಹ ಮಾಡಬಹುದು, guesswork ಮಾಡಬಹುದು. ಆದರೆ ನಾವು ಖಚಿತವಾಗಿ ಏನೋ ಹೇಳೋಕ್ಕೆ ಬರೋದಿಲ್ಲ. ಸಿದ್ಧಯ್ಯನವರು ಅದನ್ನು ಚಾರಿತ್ರಿಕವಾಗಿ ನೋಡದೆ ಇದ್ದರೂ ಕೂಡ ಒಂದು ಕಾವ್ಯ ಮತ್ತು ಕಲೆಗಳಿಗೆ ಸಂಬಂಧಿಸಿದ ಒಂದು ಗ್ರಹಣದ ಕ್ರಮ, ಇನ್ನೊಂದು ಕಾವ್ಯೇತರವಾದ ಚಟುವಟಿಕೆಗಳಿಗೆ ಸಂಬಂಧಿಸಿದ ಇನ್ನೊಂದು ಗ್ರಹಣ ಕ್ರಮ—ಈ ವ್ಯತ್ಯಾಸವನ್ನು ಬಹಳ ಚೆನ್ನಾಗಿ ಹೇಳಿದ್ದಾರೆ. ಒಂದು ತಾರ್ಕಿಕವಾಗಿ ಜಗತ್ತನ್ನು, ಅನುಭವವನ್ನು ನೋಡುವುದು, ಗ್ರಹಿಸುವುದು ಮತ್ತು ಅಭಿವ್ಯಕ್ತಿಗೊಳಿಸುವುದು. ಇನ್ನೊಂದು ಅರಿವಿನ ಮೂಲಕ ಅನುಭವವನ್ನು ಗ್ರಹಿಸುವುದು ಮತ್ತು ಅಭಿವ್ಯಕ್ತಿಗೊಳಿಸುವುದು. ಕಾವ್ಯ, ಚರಿತ್ರೆಯಲ್ಲಿ ಯಾವ ರೀತಿ ಹುಟ್ಟಿತು ? ಇದು ಬಹುಶಃ ಆಚರಣೆಗಳ ಸಂದರ್ಭದಲ್ಲಿ, ಪೂಜೆಗಳ ಸಂದರ್ಭದಲ್ಲಿ ಮನುಷ್ಯ ಅಗೋಚರ ಶಕ್ತಿಗಳನ್ನ ಆವಾಹನೆ ಮಾಡುವ ಸನ್ನಿವೇಶದಲ್ಲಿ ಹುಟ್ಟಿ ಬಂತು. ಈಗ ನಾವು ಜಗತ್ತಿನ ಜಾನಪದ ಕಾವ್ಯಗಳನ್ನು ಗಮನಿಸಿದಾಗ ಎರಡು ರೀತಿಯ ಅಭಿವ್ಯಕ್ತಿಯ ಕ್ರಮ ಕಾಣುತ್ತೀವಿ. ಒಂದು ಹಾಡಿನ ರೂಪ, ಇನ್ನೊಂದು

ಮಂತ್ರೋಚ್ಚಾರದ ರೂಪ, So, ಈ ಹಾಡು ಒಂದು ಸಂತೋಷ ಸಮಾರಂಭದಲ್ಲಿ, ಹಬ್ಬ ಹುಣ್ಣಿಮೆಗಳಲ್ಲಿ ಸಂತೋಷವನ್ನು ಇಡೀ Tribeನವರು ಹಂಚಿಕೊಳ್ಳೋದಕ್ಕೆ ಹಾಡ್ತಾ ಇದ್ದರು. ಇನ್ನೂ ಕೆಲವು ಸಲ ಅಗೋಚರ ಶಕ್ತಿಗಳನ್ನು ಆವಾಹನೆ ಮಾಡಿ ಕೊಳ್ಳೋದಕ್ಕೋಸ್ಕರ ಮಂತ್ರೋಚ್ಚಾರದ ಮೂಲಕ ಅದನ್ನು ಮಾಡ್ತಾ ಇದ್ದರು. ಆ ಮೇಲೆ ತಾರ್ಕಿಕ ಕ್ರಮ ಅಂತ ಸಿದ್ಧಯ್ಯನವರು ಹೇಳಿದರು. ಬಹುಶಃ ಇದು ಚರಿತ್ರೆಯಲ್ಲಿ ಬಹಳ ನಿಧಾನವಾಗಿ ಶುರುವಾಗಿದ್ದು. ಎಷ್ಟೋ ಶತಮಾನಗಳು ಈ ಮಾಟ ಮಂತ್ರ ಇದ್ದವು. ಅವು ಕ್ರಮೇಣ ವಿಜ್ಞಾನವಾಗಿ ಪರಿವರ್ತನೆಯಾಯಿತು. ಅದೇ ರೀತಿ ಈ ಅರಿವಿನ ಮಾರ್ಗ ಚರಿತ್ರೆಯಲ್ಲಿ ಮೊದಲು ಬಂದದ್ದು. ಮನುಷ್ಯನಿಗೆ ಅದು ಮೂಲಭೂತವಾದದ್ದು. ಈವೊತ್ತು ಕೂಡ ನಾವು ಈ ಚಾರಿತ್ರಿಕ ವಿವರಗಳು ಏನೇ ಇರಲಿ, ಮನುಷ್ಯರು ಬಹಳ ಭಾವುಕರಾದಾಗ ಅವರು ಗದ್ಯದ ರೀತಿಯಲ್ಲಿ ನಡೆದುಕೊಳ್ಳಲ್ಲ. ಈಗ ಬಹಳ ಸಂತೋಷವಾದಾಗ ಕುಣೀತಾರೆ, ಅವರು ಭಾವುಕ ರಾದಾಗ ವಿಚಿತ್ರವಾದ ಲಯ ಬಂದುಬಿಡುತ್ತದೆ. So, ಈ ಮೂಲಕ ಕಾವ್ಯ ಉಗಮವಾಯಿತು. ಆದರೆ ಕಾವ್ಯ ಅಲ್ಲೇ ನಿಂತಿಲ್ಲ. ಈ ಅರಿವಿನ ಉನ್ನತ ಹಂತ ಗಳನ್ನು ಬರ್‍ತಾ ಬರ್‍ತಾ ಕಾವ್ಯ ಶೋಧನೆ ಮಾಡ್ತಾ ಹೋಗುತ್ತದೆ. ಆದ್ದರಿಂದ ಯಾವುದನ್ನ ತರ್ಕದ ಮೂಲಕ ಹೇಳೋಕಾಗೋದಿಲ್ಲ, ವಿಚಾರಗಳ ಮೂಲಕ ಹೇಳೋಕಾಗೋದಿಲ್ಲ, ಪರಿಕಲ್ಪನೆಗಳ ಮೂಲಕ ಹೇಳೋಕಾಗೋದಿಲ್ಲ. ಯಾವುದನ್ನು ನಾವು ಅಭಿನಯಿಸಿ ತೋರಿಸಬಹುದು, ಅಭಿವ್ಯಕ್ತಿ ಮಾಡಿ ತೋರಿಸಬಹುದು-ಇದು ಭಾಷೆಯಲ್ಲಿ ಪ್ರಧಾನವಾಗಿ ಜರುಗಿದಾಗ ಅದು ಕಾವ್ಯವಾಗೋದು ಜಗತ್ತಿನ ಎಲ್ಲ ಸಂಸ್ಕೃತಿಗಳಲ್ಲಿ ಕಂಡು ಬರುತ್ತದೆ.

ಜಿ. ಎಸ್. ಶಿವರುದ್ರಪ್ಪ: ನನ್ನ ಇಬ್ಬರು ಸ್ನೇಹಿತರ ಮಾತಿಗೆ ನಾನು ಕಾವ್ಯಮೀಮಾಂಸೆಯ ಚೌಕಟ್ಟಿನೊಳಗೆ ಹೇಳೋದಕ್ಕೆ ಅಪೇಕ್ಷೆಪಡುತ್ತೇನೆ. ಸಿದ್ಧಯ್ಯ ನವರು ಹೇಳಿದರು-ಜಗತ್ತನ್ನು ಗ್ರಹಿಸುವ ಕ್ರಮಗಳು ಎರಡು, ಒಂದು ಬುದ್ಧಿ ಪೂರ್ವಕವಾಗಿ ಇನ್ನೊಂದು ಭಾವಪೂರ್ವಕವಾಗಿ ಅಂತ. ಮನುಷ್ಯ ಬುದ್ಧಿ ಪೂರ್ವಕವಾಗಿ ಗ್ರಹಿಸುವ ಕ್ರಮ ಸ್ವಲ್ಪ ನಿಧಾನವಾಗಿ ಬಂತು ಅಂತ ಶಿವಪ್ರಕಾಶ್ ಹೇಳಿದರು. ಮೂಲತಃ ಮನುಷ್ಯ ಭಾವನಾಜೀವಿ. ಹೀಗೆ ತೀವ್ರವಾದ ಲೋಕಾ ನುಭವಗಳನ್ನು ಗ್ರಹಿಸಿದಾಗ ಅವುಗಳಿಗೆ ತಕ್ಕ ಅಭಿವ್ಯಕ್ತಿಯನ್ನು ಕೊಡಬೇಕು ಅನ್ನೋ ತುಯ್ತಕ್ಕೆ ಸಿಕ್ಕಾಗ ಮೊದಲಿಗೆ ಕಾವ್ಯ ಹುಟ್ಟಿರಬಹುದು ಅಂತ ಕಾಣುತ್ತದೆ. ಹೀಗೆ ಕಾವ್ಯದ ಉಗಮವನ್ನು ಕುರಿತು ಹೇಳುವಾಗ ಧಾರ್ಮಿಕ ಆಚರಣೆಗಳ, ಧಾರ್ಮಿಕ ವಿಧಿಗಳ, ಹಬ್ಬ ಹರಿದಿನಗಳ ಪ್ರಸ್ತಾಪವನ್ನು ಮಾಡಿದರು. ಮುಖ್ಯವಾಗಿ ಮನುಷ್ಯನ ಮನಸ್ಸಿನ ಭಾವೋತ್ಕರ್ಷವನ್ನು ಹೆಚ್ಚು ಮಾಡುವ ಸಂದರ್ಭಗಳು ಇವು. ಹೀಗಾಗಿ ಮೊದಲಿಗೆ ಕಾವ್ಯ ಸಾಮೂಹಿಕವಾಗಿತ್ತು, ಒಂದು ಸಮೂಹ ಸೃಷ್ಟಿಯಾಗಿತ್ತು ಅಂತ

ಕೂಡ ಹೇಳುತ್ತಾರೆ. ಹೀಗೆ ಒಂದು ಜನದ ಮನಸ್ಸು ತನ್ನ ಸುತ್ತಣ ಪರಿಸರಕ್ಕೆ, ಅದರ ಅನುಭವಗಳಿಗೆ ತೀವ್ರವಾಗಿ ಸ್ಪಂದಿಸಿದಾಗ ಅದನ್ನ ಭಾವಪೂರ್ವಕವಾಗಿ ಗ್ರಹಿಸಿ ಅದಕ್ಕೆ ಅಭಿವ್ಯಕ್ತಿಯನ್ನು ಕೊಡಬೇಕೆಂದಾಗ ಅಲ್ಲಿ ಕಾವ್ಯ ಹುಟ್ಟಿರಬೇಕು ಅಂತ ಕಾಣುತ್ತದೆ. ಇದು ಎಲ್ಲ ಕಲೆಗಳಿಗೂ ಸಮಾನವಾದ ಅಂಶ ಅಂತ ನಾನು ಅಂದು ಕೊಂಡಿದ್ದೇನೆ. ಮೊದಮೊದಲಿಗೆ ಅವನು ತನ್ನ ಸುತ್ತ ಕಂಡ ಅನುಭವಗಳಿಗೆ ಒಂದು ಆಕಾರ ಕೊಡೋದಕ್ಕೆ ಪ್ರಯತ್ನಪಡುತ್ತಾನೆ. ಯಾಕೆಂದರೆ ಅನುಭವಗಳಿಗೆ ಆಕಾರ ಕೊಡೋದರೊಳಗೆ ಒಂದು ಸಂತೋಷ ಇದೆ. ಎರಡನೆಯದು ತಾನು ಕೊಟ್ಟ ಅಭಿ ವ್ಯಕ್ತಿಯನ್ನು ಇತರರೊಡನೆ ಹಂಚಿಕೊಂಡಾಗ ಇನ್ನೊಂದು ಸಂತೋಷ ಸಿಗುತ್ತದೆ. ಆದ್ದರಿಂದ ಮನುಷ್ಯನಿಗೆ ತಾನು ಅರಿವಿನ ಮೂಲಕ ಅಥವಾ ಭಾವದ ಮೂಲಕ ಯಾವಾವ ಅನುಭವಗಳನ್ನು ಗ್ರಹಿಸಿದನೋ ಅಂಥ ಗ್ರಹಿಕೆಗಳನ್ನು ಅರ್ಥಮಾಡಿ ಕೊಳ್ಳುವ ಪ್ರಯತ್ನದಲ್ಲಿ, ಶಬ್ದಾರ್ಥರೂಪದಲ್ಲಿ ಅವನು ಅಭಿವ್ಯಕ್ತಿಪಡಿಸಿದಾಗ ಅದನ್ನು ನಾನು ಕಾವ್ಯ ಅಂತ ಕರೀತೀನಿ. ಹೀಗಾಗಿ ಕಾವ್ಯ ಅನ್ನೋದು ಅತ್ಯಂತ ಪ್ರಾಚೀನ ಕಾಲದಿಂದ ಹಿಡಿದು ಇವತ್ತಿನವರೆಗೂ ಕೂಡ ಮನುಷ್ಯನ ಅತ್ಯಂತ ಒಂದು ಆಕರ್ಷಕವಾದ ಕಲಾಪ್ರಕಾರವಾಗಿದೆ. ಈ ಹಂತದೊಳಗೆ ಕಾವ್ಯಕ್ಕೂ ಮನುಷ್ಯನ ಸಂಸ್ಕೃತಿಗೂ ಇರುವ ಸಂಬಂಧ ಅತ್ಯಂತ ಭಿನ್ನವಾದದ್ದು. ಹಾಗೆ ನೋಡಿಕೊಂಡರೆ ಕಾವ್ಯವನ್ನೇ ಮನುಷ್ಯನ ನಿಜವಾದ ಅಭಿವ್ಯಕ್ತಿ ಸಂಸ್ಥೆ ಅಂತ ಹೇಳಬಹುದು.

ಯಾಕೆಂದರೆ ಅವನು ತನ್ನ ಅಂತರಂಗದ ಅನಿಸಿಕೆಗಳನ್ನು, ಭಾವಗಳನ್ನು, ಆಲೋಚನೆಗಳನ್ನು ಮತ್ತು ಬೇರೆಬೇರೆಯ ಸ್ತರಗಳನ್ನು ಮುಟ್ಟಿ ಪಡೆದಂತ ಸಂಗತಿ ಗಳನ್ನು ಕಾವ್ಯದ ಮೂಲಕ ಹೇಳೋದಕ್ಕೆ ಪ್ರಯತ್ನಪಟ್ಟಿದ್ದಾನೆ. ಹೀಗಾಗಿ ಎಲ್ಲ ಕಾಲದಲ್ಲೂ ಕೂಡ ಸಾಹಿತ್ಯ ಚರ್ಚೆಯ ಕೇಂದ್ರ ಯಾಕೆ ಕಾವ್ಯವಾಗಿದೆ ಅಂತ ಹೇಳಿದರೆ ಅದು ಮೂಲಭೂತವಾಗಿ ಮನುಷ್ಯನ ಅರಿವಿನ ಆಳವನ್ನು ಅಭಿವ್ಯಕ್ತಪಡಿಸುವ ಕಲಾತ್ಮಕ ಕ್ರಿಯೆ ಅನ್ನುವ ಅಭಿಪ್ರಾಯ ಇವತ್ತು ಹೆಚ್ಚು ಖಚಿತಗೊಳ್ಳುತ್ತಿದೆ ಅಂದ್ಕೊಂಡಿದ್ದೀನಿ.

ಡಿ. ಎಸ್. ನಾಗಭೂಷಣ: ಸಿದ್ಧಯ್ಯ ಮತ್ತು ಶಿವಪ್ರಕಾಶರು ಆಡಿದ ಮಾತಿನಿಂದ ಒಂದು ವಿಚಾರ ಏನು ಬರುತ್ತೆ ಅಂದರೆ ಕಾವ್ಯ ಸ್ವಯಂ ಅಭಿವ್ಯಕ್ತಿ ಅನ್ನೋ ಅರ್ಥ ಬರುತ್ತದೆ. ಆದರೆ ತಾವು ಇನ್ನೊಂದು ಅಂಶವನ್ನು ಇದಕ್ಕೆ ಸೇರಿಸಿದಿರಿ. ಇದು ಸಮೂಹ ಕ್ರಿಯೆ ಕೂಡ ಹೌದು, ಅವನು ತನ್ನ ಪರಿಸರಕ್ಕೆ ಸ್ಪಂದಿಸುತ್ತಾ ಇರುತ್ತಾನೆ ಮತ್ತು ಇನ್ನೊಬ್ಬರು ಅದನ್ನು ಕೇಳಿದಾಗ ಸಂತೋಷ ಪಡುವಂತ ಒಂದು ಅಂಶ ಕೂಡ ಅದರಲ್ಲಿದೆ ಅಂತ. ಅಂದರೆ ಕಾವ್ಯ ಸ್ವಯಂ ಅಭಿ ವ್ಯಕ್ತಿಯಾಗಿ ಹುಟ್ಟಿದರೂ ಅದು ಸಂಪರ್ಕ ಸಾಧ್ಯತೆಯನ್ನು ಕೂಡಾ ಪಡೆದಿದೆ

ಹಾಗಾದರೆ ಕಾವ್ಯದ ನಿಜವಾದ ಸಾರ್ಥಕ್ಯವೆಲ್ಲಿದೆ ? ಕೇವಲ ಸ್ವಯಂ ಅಭಿವ್ಯಕ್ತಿಯಲ್ಲೋ ಅಥವಾ .....

ಜಿ. ಎಸ್. ಶಿವರುದ್ರಪ್ಪ: ಎರಡರಲ್ಲಿ ಕೂಡ ....

ಶಿವಪ್ರಕಾಶ್: ಕಾವ್ಯಕ್ಕೆ ಎರಡು ಮುಖಗಳಿವೆ. ಒಂದು ಅದು ಅಭಿವ್ಯಕ್ತಿ expression. ಇನ್ನೊಂದು ಸಂವಹನ communication. ಈ ಎರಡೂ ಒಟ್ಟಾದಾಗ ಮಾತ್ರ ಕಾವ್ಯ ಯಶಸ್ವಿಯಾಗುತ್ತದೆ........

ಜಿ.ಎಸ್. ಶಿವರುದ್ರಪ್ಪ: ಯಾವುದೇ ಒಂದು ಅನುಭವ ರೂಪಗೊಳ್ಳುತ್ತದೆ ಅಂತ ಹೇಳಿದರೆ, ಅದು ಇನ್ನೊಬ್ಬರಿಗೆ ತಿಳಿಸಬೇಕೆನಿಸುವ ಒಂದು ಪೂರ್ವ ಸಿದ್ಧವಾದ ಒತ್ತಡದಲ್ಲೇ ರೂಪಗೊಳ್ಳುತ್ತದೆ. ಇಲ್ಲದೇ ಇದ್ದರೆ ಸಾಧ್ಯವೇ ಇಲ್ಲ. ಒಬ್ಬ ಮನುಷ್ಯನನ್ನು ನೀವು ಅತ್ಯಂತ ಏಕಾಂತವಾದ ಸ್ಥಿತಿಯಲ್ಲಿ ಕಲ್ಪಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಒಂದು ಸಮುದಾಯದ ಭಾಗವಾಗಿ ಕವಿ ಅಭಿವ್ಯಕ್ತಪಡಿಸುತ್ತಾನೆ ಅಂದ ಮೇಲೆ ಅವನಿಗೆ ಅಪ್ರಜ್ಞಾಪೂರ್ವಕವಾಗಿ ತನ್ನ ಅಭಿವ್ಯಕ್ತಿ ಆ ಸಮುದಾಯವನ್ನು ಮುಟ್ಟಬೇಕು ಅಂತ ಇರುತ್ತದೆ. ಆದ್ದರಿಂದ ಕಾವ್ಯ ಅನ್ನುವುದು ಒಂದು ರೀತಿಯಲ್ಲಿ ಕವಿ ಮೊದಲು ತನಗೆ ತಾನೆ ಮಾತಾಡಿಕೊಂಡ ಅಭಿವ್ಯಕ್ತಿಯಾದರೂ ಕೂಡ ಅನಂತರ ಅದು ಇನ್ನೊಬ್ಬರನ್ನು ಉದ್ದೇಶಿಸಿದ ಅಭಿವ್ಯಕ್ತಿ ಸಾಧ್ಯವಾದ ಕಾರಣದಿಂದ ಅದು ಸಂಪರ್ಕ ಸಾಧನವೂ ಹೌದು ಮತ್ತು ಅಭಿವ್ಯಕ್ತಿಯೂ ಹೌದು.

ಶಿವಪ್ರಕಾಶ್: ಆಮೇಲೆ ಅದರ ಉಗಮಕಾಲದಲ್ಲಿ ಕೂಡ ಈ ಪುರಾತನ ಸಮುದಾಯಗಳಲ್ಲಿ, ಬುಡಕಟ್ಟುಗಳಲ್ಲಿ ಯಾವುದೋ ದೈವವನ್ನು ಆವಾಹನೆ ಮಾಡಿಕೊಂಡ ಒಬ್ಬ ಪೂಜಾರಿ ಒಂದು ಹಾಡನ್ನು ಹಾಡಿದರೆ ಅಥವಾ ಮಂತ್ರೋಚ್ಚಾರ ಮಾಡಿದರೆ ಅದೂ ಕೂಡ ಸಂಪರ್ಕ. ಅದು ಯಾವುದೋ ಒಂದು ಶಕ್ತಿ ಜೊತೆ ಅವನು ಸಂಪರ್ಕ ಸಾಧಿಸ್ತಾ ಇದ್ದಾನೆ, ಆಮೇಲೆ ಸೃಷ್ಟಿಯ ಮೇಲೆ ಸಂಪರ್ಕ ಸಾಧಿಸ್ತಾ ಇರ್ತಾನೆ. ಆದ್ದರಿಂದ ಇದು ಮೊದಲಿನಿಂದ ಇದ್ದದ್ದು. ಒಂದು ಮಟ್ಟದಲ್ಲಿ ಅದು ಅಭಿವ್ಯಕ್ತಿ, ಇನ್ನೊಂದು ಮಟ್ಟದಲ್ಲಿ ಸಂವಹನ. ಸಂವಹನವನ್ನು ಬರೀ ಬೇರೆ ವ್ಯಕ್ತಿಗಳ ಜೊತೆ ಮಾಡುವ ಸಂವಹನ ಅಂತ Limit ಮಾಡಲೇಬಾರದು. ಯಾಕೆಂದರೆ ಒಬ್ಬ ಕವಿ ಇವತ್ತು ಬರಿತಾ ಇರೋನು ತನ್ನ ಹಿಂದಿನ ಕವಿಗಳ ಜೊತೆಯಲ್ಲಿ ಸಂವಹನವನ್ನು ಸಾಧಿಸ್ತಾ ಇರ್ತಾನೆ.

ಡಿ. ಎಸ್. ನಾಗಭೂಷಣ: ಕಾವ್ಯ ಹುಟ್ಟುವ ಕ್ರಿಯೆಯಲ್ಲೇ ಈ ಸಂವಹನದ ಅಂಶ ಕೂಡಾ ಸೇರ್ಕೊಂಡಿರುತ್ತಾ ?

ಶಿವಪ್ರಕಾಶ್ : ಹೌದು.

ಕೆ.ಬಿ. ಸಿದ್ಧಯ್ಯ : ಇಲ್ಲ. ಕಾವ್ಯ ಬಹಳಸಲ ಹುಟ್ಟುವಾಗ ಸ್ವಯಂ ಅಭಿವ್ಯಕ್ತಿಯೇ ಆಗಿ ಹುಟ್ಟುತ್ತೆ. ಈಗ ಅದು ಹೇಗೆ ಅಂದರೆ, ನಮ್ಮ ಉಸಿರಾಟಾನ ನಾನೇ ಅಧ್ಯಯನ ಮಾಡೋ ರೀತಿ, ಈಗ Sound ನಾವು ಹತ್ತಿರದಲ್ಲಿದ್ದರೆ ಅದು ನಮಗೆ ಜೋರಾಗಿ ಕೇಳುತ್ತೆ. ದೂರ ಹೋದ ಹಾಗೆ ಆ Sound ಕೇಳಿಸದ ಹಾಗೆ ಆಗುತ್ತೆ. ಈ ರೀತಿ ಕಾವ್ಯ ಅದು ಹುಟ್ಟುವಾಗ ಸ್ವಯಂ ಅಭಿವ್ಯಕ್ತಿಯಾಗಿ, ಅಂದರೆ ತನ್ನೊಡನೆ ತಾನೆ ಮಾತಾಡಿಕೊಳ್ಳೊ ರೀತಿನಲ್ಲಿ ಕಾವ್ಯ ಹುಟ್ಟುತ್ತೆ. ಆದರೆ ಹೀಗೆ ತನ್ನೊಡನೆ ತಾನು ಮಾತಾಡಿಕೊಳ್ಳುವಾಗ, ತನ್ನ ಉಸಿರಾಟವನ್ನು ತಾನೇ ಅಧ್ಯಯನ ಮಾಡುವಾಗ, ತಾನೇ ತಿಳಿವಾಗ ಆ ಉಸಿರಾಟದ ಹಂತಗಳನ್ನು ನಾವು ತಿಳೀಬೇಕಾಗುತ್ತೆ. ಅದನ್ನು ಆದಿ, ಮಧ್ಯ, ಅಂತ್ಯ ಅಂತ ಹೇಳಬಹುದು. ಆದೇ ರೀತಿ ಕಾವ್ಯ ಸ್ವಯಂ ಅಭಿವ್ಯಕ್ತಿಯಾಗಿದ್ದಾಗ, ತನ್ನೊಡನೆ ತಾನು ಮಾತಾಡಿಕೊಳ್ಳುವಾಗ ಅದರ ಪ್ರಾರಂಭವನ್ನ (Past) ನಾವು ತಿಳೀಬೇಕಾಗುತ್ತದೆ. ಅಂದರೆ ಈ Pastಗೆ ಇರುವ ಅರ್ಥ—ಅದು ಒಂದು ಜನಾಂಗದ ದನಿಯಾಗಿರಬಹುದು. ಒಂದು ಸಂಸ್ಕೃತಿಯ ವಾಹಕವಾಗಿರಬಹುದು ಒಂದು ವಿಚಾರದ ವಾಹಕವಾಗಿಯೂ ಕೂಡ—ಅಂತಹ ಒಂದು ಆದಿಯನ್ನ ನಾವು ತಿಳಿದು ಅದನ್ನು ವರ್ತಮಾನದಲ್ಲಿ ಅರ್ಥೈಸಬೇಕಾಗುತ್ತದೆ. ಆಮೇಲೆ ಅದರ ಮುಂದುವರಿಕೆನೂ ಕೂಡ ತಿಳೀಬೇಕಾಗುತ್ತದೆ. ಹೀಗೆ ತಿಳಿಯುವಾಗ ಈ ಸ್ವಯಂ ಅಭಿವ್ಯಕ್ತಿ ಅಂತಕ್ಕದ್ದು ಸಂವಹನ ಆಗಬೇಕಾದ ಒಂದು ಸ್ಥಿತಿಯನ್ನು ಕಂಡುಕೊಳ್ಳಬೇಕಾಗುತ್ತದೆ. ಏಕೆಂದರೆ ಕವಿ ಆದವನು ಅವನ ಅರಿವಿನ ಮಟ್ಟದಲ್ಲಿ ಅವನು ಸಾಧಕನೂ ಆಗಿರುತ್ತಾನೆ. ಆದ್ದರಿಂದ ಅದು ಸ್ವಯಂ ಅಭಿವ್ಯಕ್ತಿಯಾಗಿ ಹುಟ್ಟಿ ಸಂವಹನದ ಮೂಲಕ ಇದನ್ನೆಲ್ಲಾ ಗೆದ್ದಿರುತ್ತದೆ, ಅಂತ ನನಗನ್ನಿಸುತ್ತದೆ.

ಡಿ. ಎಸ್. ನಾಗಭೂಷಣ : ಶಿವಪ್ರಕಾಶ್ ಮಾತಾಡ್ತ ಭಾವೋತ್ಕರ್ಷದ ಗಳಿಗೆಯಲ್ಲಿ ಕಾವ್ಯ ಹುಟ್ಟುತ್ತೆ ಅಂತ ಹೇಳಿದರು. ಈ ಭಾವೋತ್ಕರ್ಷವನ್ನೇ ಹಿಂದೆ ಸ್ಫೂರ್ತಿ ಅಂತ ಕರೀತಾ ಇದ್ದರಾ ? ಇವತ್ತು ಜನ ಸ್ಫೂರ್ತಿಯ ಬಗ್ಗೆ ಹೆಚ್ಚು ಮಾತಾಡೋದಿಲ್ಲ. ಆದರೆ ಇವತ್ತು ಚರ್ಚೆಯಲ್ಲಿ ಕಾವ್ಯಕ್ಕೆ ಸ್ಫೂರ್ತಿ ಮೂಲ ಅನ್ನುವ ರೀತಿಯಲ್ಲಿ ಮಾತು ಮತ್ತೆ ಮತ್ತೆ ಬರ್‍ತಾಇದೆ. ಈ ಬಗ್ಗೆ ಏನು ಹೇಳ್ತೀರಿ? ಸ್ಫೂರ್ತಿಯನ್ನ ನೀವು ಇವೊತ್ತು ಯಾವ ರೀತಿ ನಿರೂಪಿಸುತ್ತೀರಾ ?

ಜಿ. ಎಸ್. ಶಿವರುದ್ರಪ್ಪ: ಸ್ಫೂರ್ತಿಗಿದ್ದ ಧಾರ್ಮಿಕ ಸಂಬಂಧವಾದ ಭಾವನೆ ಮಾಯವಾಗಿದೆಯೇ ಹೊರತಾಗಿ ಸ್ಫೂರ್ತಿಯ ಪರಿಕಲ್ಪನೆ ಹಾಗೆ ಇದೆ. ಯಾರೂ ಕೂಡ ಕಾವ್ಯವನ್ನು ತನ್ನ ಮನಸ್ಸು ಬಂದಾಗ ಬರಿತೀನಿ ಅಂತ ಹೇಳೋಕ್ಕಾಗೋಲ್ಲ.

ಅದಕ್ಕೊಂದು ವಿಶೇಷವಾದ ಮನಸ್ಥಿತಿ, ಸಂದರ್ಭ ಮತ್ತು ಅದಕ್ಕೆ ಅಗತ್ಯವಾದ ಯಾವುದೋ ಒಂದು ಒತ್ತಡ ಮತ್ತು ಉತ್ಸಾಹ ಇರಬೇಕು. ಈ ಸ್ಥಿತೀನೇ ನಾವು ಸ್ಫೂರ್ತಿ ಅಂತ ವರ್ಣಿಸುತ್ತೇವೆ. ಆದರೆ ಸ್ಫೂರ್ತಿ ಅಂತ ಹೇಳಿದರೆ, ಕವಿ, ಕಾವ್ಯಾಭಿವ್ಯಕ್ತಿಯ ಸಂದರ್ಭದಲ್ಲಿ ಇರುವಾಗಿನ ಒಂದು ಮನಸ್ಥಿತಿಯೊಂದನ್ನು ನಾನು ಸ್ಫೂರ್ತಿ ಅಂತ ಕರೀತಿನಿ. ಆದ್ದರಿಂದ ಈ ಸ್ಫೂರ್ತಿಯ ಸ್ಥಿತಿ ಅನ್ನೋದು ಪ್ರತಿಭೆಯೊಂದಿಗೆ ಹೋಗತಕ್ಕಂತದ್ದು. ಹೀಗಾಗಿ ಸ್ಫೂರ್ತಿ ಅನ್ನೋದು ಒಂದು ಮಾನಸಿಕ ಉತ್ಸಾಹ ಅಂತ ಮನಃಶಾಸ್ತ್ರಜ್ಞರು ವರ್ಣಿಸುತ್ತಾರೆ. ಕವಿಯ ಕಾವ್ಯರಚನೆಯ ಸಂದರ್ಭದಲ್ಲಿ ಅವನ ಕಾವ್ಯರಚನೆಯನ್ನು ಇನ್ನೂ ಹೆಚ್ಚು ಸುಗಮವಾಗಿ ಮೂಡುವಂತಹ ಉತ್ಸಾಹ ಆವೇಶ ಅಥವಾ ಸಾಮರ್ಥ್ಯ ಅಂತ ಹೇಳುತ್ತಾರೆ. ಈ ಸ್ಫೂರ್ತಿಯಲ್ಲಿ ಬರೆದಿದ್ದೆಲ್ಲ ಸರಿಯಾಗಿರುತ್ತದೆ ಅಂತ ಹೇಳೋಕ್ಕಾಗೋದಿಲ್ಲ. ಅನೇಕ ವೇಳೆ ಸ್ಫೂರ್ತಿ ಇರುತ್ತದೆ ನಿಜ, ಆದರೆ ಸ್ಫೂರ್ತಿ ಜೊತೆಗೇ ವಿವೇಚನೆ ಅನ್ನೋದು ಕೆಲಸ ಮಾಡುತ್ತದೆ. ಇದನ್ನ Critical Faculty ಅಂತಾನು ಕರೀತಾರೆ. ಆದ್ದರಿಂದ ಕವಿಯ ಕಾವ್ಯ ನಿರ್ಮಿತಿಯ ಸಂದರ್ಭದಲ್ಲಿ ಮೂರು ಶಕ್ತಿಗಳು ಕೆಲಸಮಾಡುತ್ತವೆ. ಒಂದು ಪ್ರತಿಭೆ, ಇನ್ನೊಂದು ಸ್ಫೂರ್ತಿ ಮತ್ತೊಂದು ವಿವೇಚನೆ. ಈ ಮೂರರೂ ಸೇರಿ ಒಂದು ಕೃತಿ ನಿರ್ಮಾಣ ಆಗೋದರಲ್ಲಿ ಸಹಕರಿಸುತ್ತದೆ. ಆದ್ದರಿಂದ ಸ್ಫೂರ್ತಿ ಅನ್ನೋ ವಿಚಾರನ ಕುರಿತು ಬಹಳ ಜನ ಇವತ್ತು ಲಘುವಾಗಿ ಮಾತಾಡ್ತಾ ಇದ್ದರೂ ಕೂಡ ಈ ಸ್ಫೂರ್ತಿ ಅನ್ನೋದು ಒಂದು ಮಾನಸಿಕ ಉತ್ಸಾಹ. ಕಾವ್ಯರಚನೆಯ ಮನಸ್ಥಿತಿ ಅನ್ನೋದನ್ನ ಬಹುಶಃ ಎಲ್ಲರೂ ಒಪ್ಪುತ್ತಾರೆ ಅಂತ ನಾನು ತಿಳಿದಿದ್ದೀನಿ.

ಡಿ.ಎಸ್. ನಾಗಭೂಷಣ: ಕಾವ್ಯವನ್ನ ಧ್ಯಾನದ ಪರಿಭಾಷೆಯಲ್ಲಿ ಹೇಳೋ ಸಿದ್ದಯ್ಯನವರು ಏನ್ ಹೇಳ್ತಾರೆ ಈ ಬಗ್ಗೆ ?

ಕೇಬಿ. ಸಿದ್ಧಯ್ಯ : ಈ ಸ್ಫೂರ್ತಿಗೆ ಒಂದು ಸಾಂಪ್ರದಾಯಿಕ ಅರ್ಥ ಕೂಡ ಇದೆ.

ಡಿ. ಎಸ್. ನಾಗಭೂಷಣ: ಸ್ಫೂರ್ತಿ ಅಂದರೆ ಭಾವಾವೇಶ ಅನ್ನೋ ಅರ್ಥ ಇದೆ.

ಜಿ. ಎಸ್. ಶಿವರುದ್ರಪ್ಪ: Inspiration ಅನ್ನೋ ಮಾತೇ ಮೂಲ ಭೂತವಾಗಿ Medical Scienceನಿಂದ ಬಂದದ್ದು. ಅದಕ್ಕೂ ಹಿಂದೆ ಶಿವ ಪ್ರಕಾಶ್ ಹೇಳಿದ ಹಾಗೆ ಜಾತ್ರೆ ಮತ್ತು ಹಬ್ಬಹರಿದಿನಗಳಲ್ಲಿ ದೇವರು ಮೈಮೇಲೆ ಬರುತ್ತಲ್ಲ ಆ ಕ್ರಮವನ್ನ ಗ್ರೀಕರಲ್ಲಿ ಸ್ಫೂರ್ತಿ ಅಂತ ಕರೀತಾ ಇದ್ದರು, ಅರಿಸ್ಟಾಟಲ್ ತನ್ನ ಕಾವ್ಯಮೀಮಾಂಸೆಯಲ್ಲಿ ಈ ಸ್ಫೂರ್ತಿ ಅಂತ ಅನ್ನೋದು ಕಾವ್ಯಮೀಮಾಂಸೆ

ವೈದ್ಯಶಾಸ್ತ್ರದಿಂದ ತೆಗೆದುಕೊಂಡಿದೆ. ಆದರೆ ಸ್ಫೂರ್ತಿ ಅಂದರೆ ಉಸಿರನ್ನ ಹೊರ ಬಿಡುವ ಒಂದು ಕ್ರಮ. ಉಚ್ಛ್ವಾಸ–ನಿಶ್ವಾಸಕ್ಕೆ ಸಂಬಂಧಪಟ್ಟ ಹಾಗೆ. ಆದ್ದರಿಂದ ಸ್ಫೂರ್ತಿ ಅಂದರೆ ಒಂದು ಉತ್ಸಾಹದ ಮನಸ್ಸಿಗೆ ಸ್ಫೂರ್ತಿ ಅಂತ ಹೇಳಬಹುದು. Taking the breath in ಅಂತ ಹೇಳ್ತಾರಲ್ಲ ಆ ಸ್ಥಿತಿಗೆ ಸ್ಫೂರ್ತಿ ಅಂತ ಕರೀತಾರೆ.

ಕೇಬಿ ಸಿದ್ಧಯ್ಯ : ಸ್ಫೂರ್ತಿ ಅಂದರೆ ಅದು ಎಲ್ಲಿಂದ ಬರ್ತದೆ, ಹೆಂಗೆ ಬರ್ತದೆ ಎಂದು. ಈಗ ಒಂದು ಹೂವನ್ನ ನೋಡಿದರೆ, ಅಥವಾ ಆ ಅರಳಿದ ಹೂವಿನ ಮೇಲೆ ದುಂಬಿ ಬಂದು ಕೂಡೋದನ್ನ ನೋಡಿದರೆ ಇದು ಭಾವುಕನಾಗಿರುವ ಕವಿಗೆ ಒಂದು ಸ್ಫೂರ್ತಿಯಾಗಿರಬಹುದು, ಆದರೆ ನನಗೆ ಹಾಗನಿಸೋದಿಲ್ಲ. ಆ ಹೂವಿನ ಪರಾಗ ನಳಿಕೆನಲ್ಲಿ ಕ್ಯಾಂಟಾಕರಸ್ ಅನ್ನೋ ಹುಳ ಇರುತ್ತೆ, ಅದು ದಳಗಳನ್ನ ಹೂವಿಗೆ ಗೊತ್ತಿಲ್ಲದೆನೆ ಕಡಿದು ಹಾಕುತ್ತೆ, ಅದರಿಂದ ದುಂಬಿ ಮಧುವಿನಿಂದ ವಂಚಿತ ವಾಗುತ್ತದೆ. ಸೌಂದರ್ಯ ನಾಶವಾಗುತ್ತದೆ. ಇದನ್ನ ನೋಡಿದಾಗ ಒಟ್ಟು ಹೂ ದುಂಬಿ ಮತ್ತು ಆ ಕ್ಯಾಂಟಾಕರಸ್ ಹುಳ ಇವುಗಳ ಪೂರ್ಣ ಚಕ್ರದಲ್ಲಿ ಅಡಗಿರುವ ನಿರ್ನಾಮ ಅಥವಾ ಇಲ್ಲದಿರುವಿಕೆ, ಅಲ್ಲಿ ನನಗೆ ಆಕರ್ಷಣೆ ಉಂಟಾಗುತ್ತದೆ. ಅದನ್ನ ಸ್ಫೂರ್ತಿ ಅಂತ ನಾನು ತಿಳೀತೀನಿ. ಅಷ್ಟೇ ಅಲ್ಲದೆ ಹೂವಿನಿಂದ ಹಿಡಿದು ನೆರೂಡನ ವರೆಗೆ ನೋಡೋದಾದರೆ, ತೋಟದ ಗುಲಾಬಿನಲ್ಲಿ ಕಾವ್ಯಕ್ಕೆ ಸ್ಫೂರ್ತಿ ಇದೆಯೋ ಬೀದಿಯಲ್ಲಿ ಚೆಲ್ಲಿರುವ ರಕ್ತದಿಂದ ಕಾವ್ಯಕ್ಕೆ ಸ್ಫೂರ್ತಿ ಇದೆಯೋ ಅಂತ ನಾವು ಕೇಳಿ ದರೆ, ನನಗೆ ಅವೆರಡೂ ಕೂಡ ಅಲ್ಲ ಅಂತ ಅನಿಸುತ್ತದೆ. ಈ ಎರಡರ ಪೂರ್ಣ ತಿಳುವಳಿಕೆ ಈ ಎರಡರ ಪೂರ್ಣ ಅರಿವು ಇರುತ್ತಲ್ಲ, ಅದೇ ಸ್ಫೂರ್ತಿ ಅಂತ ನನಗನಿಸುತ್ತದೆ. ಯಾವ ಅರ್ಥದಲ್ಲಿ ನಾನು ಹೇಳ್ತಾ ಇದ್ದೀನಿ ಅಂದರೆ ನಮ್ಮ ಜಾನಪ ದದಲ್ಲಿ ಅರಿವೇ ಗುರು ಅಂತ ಹೇಳ್ತಾರೆ. ಈ ಅರ್ಥದಲ್ಲಿ ಅರಿವು ಸ್ಫೂರ್ತಿಯಾಗಿರುತ್ತದೆ ಅಥವಾ ಪ್ರಭುದೇವರು ಹೇಳೋ ಮಾತಿನ ಅರ್ಥದಲ್ಲಿ 'ತನ್ನ ತಾನರಿತ ಶರಣಂಗೆ ಗುಹೇಶ್ವರನೆಂಬುದು ಒಂದು ಕಿಂಚಿತ್'' ಅನ್ನುವ ಈ ಅರಿವೇ ಗುರು ಎನ್ನುವ ಈ ಅರ್ಥದಲ್ಲಿ ಸ್ಫೂರ್ತಿ ಇರಬಹುದೇನೋ ಅಂತ ನನಗೆ ಅನಿಸ್ತಾ ಇದೆ.

ಶಿವಪ್ರಕಾಶ್ : ಸ್ಫೂರ್ತಿ ಅನ್ನೋದು ಇವತ್ತು ತಮಾಷೆ ಶಬ್ದ ವಾಗಿದೆ, ಕೆಲವು ಸಲ ಈತರ ಆಗೋದು ಅವಶ್ಯಕ ಅಂತ ಕಾಣುಸ್ತದೆ. ಯಾವ ರೀತಿ ದೇವರು ಅನ್ನೋ ಶಬ್ದ, ಧರ್ಮ ಅನ್ನೊ ಶಬ್ದ, ಸಮಾಜವಾದ ಅನ್ನೋ ಶಬ್ದ ಭ್ರಷ್ಟವಾಗ ಬಹುದೋ ಅದೇ ರೀತಿ ಸ್ಫೂರ್ತಿ ಅನ್ನೋ ಶಬ್ದ ಭ್ರಷ್ಟವಾದಾಗ ಅದು ಮೊದಲು ಯಾವ ಸ್ಥಿತಿಯನ್ನು ತೋರಿಸ್ತಾ ಇತ್ತು ಅದನ್ನ ತಿರುಗಿ ಪಡೆದು ಕೊಳ್ಳೋಕೋಸ್ಕರ ಆ ಶಬ್ದವನ್ನು ನಿರಾಕರಿಸಬೇಕಾಗುತ್ತದೆ, ಈಗ ನಮ್ಮ ನವೋದಯ ಕಾವ್ಯದಲ್ಲಿ ಬಹಳ

ಕವಿಗಳ ಶ್ರೇಷ್ಠ ರಚನೆಗಳನ್ನು ಬಿಟ್ಟರೆ, ಸ್ಫೂರ್ತಿ ಬಹಳ ಜನಕ್ಕೆ ಒಂದು pose ಆಗಿವೆ. ಒಂದು ಹುಣಸೆ ಮರ ನೋಡಿದರೆ thrill ಆಗೋದು, ಒಂದು ನಾಯಿ ಕರಕೊಂಡು ಹೋಗೋದು ನೋಡಿ thrill ಆಗೋದು ಈತರದ್ದೆಲ್ಲಾ ಶುರುವಾಗುತ್ತದೆ. ಹೀಗೆ ಸ್ಫೂರ್ತಿ ಅನ್ನೋದು pose ಆದಾಗ ಅದನ್ನ ನಿರಾಕರಿಸಬೇಕಾಗುತ್ತದೆ ಯಾವ ರೀತಿ ವಚನಕಾರರು ದೇವಸ್ಥಾನ ಒಂದು pose ಆದಾಗ ಆಚರಣೆಗಳು ಒಂದು pose ಆದಾಗ ಅದನ್ನ ನಿರಾಕರಿಸಿದರು, ಹಾಗೇ ನಾವೂ ನಿರಾಕರಿಸಬೇಕಾಗುತ್ತದೆ. ಆಮೇಲೆ ವಚನಕಾರರು ಸ್ಥಾಪಿಸಿದ ಧರ್ಮದಲ್ಲಿ ಅವರು ಬೋಧಿಸಿದ ವಿಧಿಗಳು ಒಂದು pose ಆದಾಗ ಅದನ್ನ ನಿರಾಕರಿಸಬೇಕಾಗುತ್ತದೆ. ಇನ್ನೊಂದು ಕಾರಣ ಏನೆಂದರೆ, ಆಧುನಿಕ ನಾಗರೀಕತೆಯಲ್ಲಿ ವೈಜ್ಞಾನಿಕ ಮಾದರಿಗಳ ಮೇಲೆ, ಲೌಕಿಕ ಮಾದರಿಗಳ ಮೇಲೆ ಹೆಚ್ಚು ಒತ್ತು ಇರುವುದರಿಂದ, ಕಾವ್ಯವನ್ನೂ ಲೌಕಿಕ ಮಾದರಿಗಳ ಮೂಲಕ ಅರ್ಥಮಾಡಿಕೊಳ್ಳುವ ಒಂದು ಕ್ರಮ ವಿಮರ್ಶೆಯಲ್ಲಿ ಕಾಣುತ್ತದೆ, ಕವಿಗಳು ಬರೆದಿರುವ ವಿಮರ್ಶೆಯಲ್ಲಿ ಹೆಚ್ಚು ಕಾಣುತ್ತದೆ ನನಗೆ ಅನ್ನಿಸೋದು ಏನೆಂದರೆ ಸ್ಫೂರ್ತಿ ಅನ್ನುವ ಶಬ್ದಕ್ಕಿಂತ, ಮೂಲತಃ ಆ ಶಬ್ಧ ಯಾವ ಸ್ಥಿತಿಯನ್ನು ತೋರಿಸ್ತಾ ಇತ್ತು, ನಿರ್ದೇಶಿಸುತ್ತಾ ಇತ್ತು, ಅದು ಮುಖ್ಯ. ಪ್ರೊಫೆಸರ್ ಅದರ ಬಗ್ಗೆ ಮಾತಾಡ್ತಾ, ಒಂದು ರೀತಿಯ ಮಾನಸಿಕ ತಯಾರಿ ಉತ್ಸಾಹ ಅಂತ ಅರ್ಥ ಕೊಟ್ಟರು. ಸಿದ್ಧಯ್ಯನವರು ಅರಿವಿನ ಉನ್ನತ ಸ್ಥಿತಿ ಅಂತ ಅರ್ಥ ಕೊಟ್ಟರು. ಬಹುಶಃ ನನಗನಿಸೋದು, ಒಂದು ಆಂತರಿಕ ಒತ್ತಡ ಇಲ್ಲದೆ ಯಾರೂ ಕವಿತೆ ಬರೆಯೋಕ್ಕಾಗೋದಿಲ್ಲ, ಈ ಆಂತರಿಕ ಒತ್ತಡವನ್ನು ನಾವು ಅರ್ಥಮಾಡಿಕೊಳ್ಳಬೇಕಾದರೆ, ಈ ಆಂತರಿಕ ಒತ್ತಡದ ಮುಂದೆ ನಾವು ನಮ್ರರಾಗಿರಬೇಕಾಗುತ್ತದೆ ಬಹಳ ಪ್ರಾಮಾಣಿಕರಾಗಿರಬೇಕಾಗುತ್ತದೆ. ಈ ಪ್ರಾಮಾಣಿಕತೆ ಯಾವಾಗ ಬರುತ್ತದೆ ಅಂದರೆ ನಮ್ಮ ಅರಿವಿನ ದ್ವಾರಗಳು ಬಹಳ ಶುದ್ಧವಾಗಿದ್ದಾಗ ಮಾತ್ರ ಬರುತ್ತದೆ. ಆದ್ದರಿಂದ ಸ್ಫೂರ್ತಿ ಅನ್ನೋ ಶಬ್ದ ಒಂದು pose ಆದಾಗ ಒಂದು ಸ್ಟಂಟ್ ಆದಾಗ ಅದು ಪ್ರಾಮಾಣಿಕತೆಯನ್ನ ತೆಗೆದುಹಾಕುತ್ತದೆ. ಇದು ಮುಖ್ಯವಾದ ಪ್ರಶ್ನೆ ಈ ಆಂತರಿಕ ಒತ್ತಡಕ್ಕೆ ಒಬ್ಬ ಕವಿ ತನ್ನ ಕವಿತೆಯಲ್ಲಿ ಅವನು ಬದ್ಧವಾಗಿದ್ದಾನಾ, ಪ್ರಾಮಾಣಿಕವಾಗಿದ್ದಾನಾ ಅನ್ನೋದು.

ಡಿ ಎಸ್. ನಾಗಭೂಷಣ : ಪ್ರಾಮಾಣಿಕತೆ ಪ್ರಶ್ನೆ ಬಂದಾಗ ಅದನ್ನ ಯಾರು ನಿರ್ಧರಿಸಬೇಕು ಅನ್ನೋದು ಗೊತ್ತಾಗದೇ ಇರೋದರಿಂದ........

ಜಿ. ಎಸ್. ಶಿವರುದ್ರಪ್ಪ : ನಾವೇ ನಿರ್ಧರಿಸಬೇಕಷ್ಟೇ ....

ಶಿವಪ್ರಕಾಶ್ : ಪ್ರಾಮಾಣಿಕತೆ, ಸ್ಫೂರ್ತಿ, ಕವಿತೆ ಚೆನ್ನಾಗಿದೆ, ಚೆನ್ನಾಗಿಲ್ಲ ಇವೆಲ್ಲ ಬಹುಮಟ್ಟಿಗೆ ಬಹಳ Subjective ಆದ feelings, ಅಂದರೆ ಅದು ಕವಿತೆ ಬರೆದೋನಿಗೆ ಗೊತ್ತಿರಬೇಕು. ಆ ಕವಿತೆ ಓದ್ದೋವರಿಗೆ ಅವನು ಪ್ರಾಮಾಣಿಕನೆ

ಅಲ್ಲದೆ ಅನ್ನೋದು Intuitive ಆಗಿ ಗೊತ್ತಾಗುತ್ತದೆ, ಅದನ್ನ ಯಾರೂ prove ಮಾಡೋದಕ್ಕಾಗೋದಿಲ್ಲ.

ಡಿ. ಎಸ್. ನಾಗಭೂಷಣ : ಒಟ್ಟಿನಲ್ಲಿ ಸ್ಫೂರ್ತಿಯ ಅರ್ಥ ಬದಲಾವಣೆ ಆಗಿದ್ದರೂ ಕೂಡ ಸ್ಫೂರ್ತಿ ಇದ್ದೇ ಇರುತ್ತದೆ ಪ್ರತಿಯೊಂದು ಕವನದ ಹಿಂದೆ ಹೇಳಬಹುದು.

ಶಿವಪ್ರಕಾಶ್ : ಒಂದು ಬಗೆಯ ಮಾನಸಿಕ ಸಿದ್ಧತೆ, ಮಾನಸಿಕ ಒತ್ತಡ ಇಲ್ಲದಿದ್ದರೆ ಕಾವ್ಯ ಬರೆಯೋದಕ್ಕೆ ಆಗೋಲ್ಲ.

ಡಿ. ಎಸ್. ನಾಗಭೂಷಣ : ಇಷ್ಟೆಲ್ಲ ಚರ್ಚೆ ಆದ ಮೇಲೆ ಒಂದು ಪ್ರಶ್ನೆ ಏಳುತ್ತದೆ, ಈ ಕಾವ್ಯ ಅರ್ಥಕ್ಕೆ ಸಿಗುತ್ತಾ ಅಂತ. ಮೊದಲು ಕಾವ್ಯವನ್ನು ಅದರ ಪ್ರತಿಪದಾರ್ಥದ ಮೂಲಕ ತಾತ್ಪರ್ಯ ಹೇಳೋ ಒಂದು ಪರಿಪಾಠ ಇತ್ತು. ಇವತ್ತಿನ ಕಾವ್ಯ ಆ ಥರದ ಅರ್ಥಕ್ಕೆ ಸಿಗುತ್ತಾ.

ಜಿ. ಎಸ್. ಶಿವರುದ್ರಪ್ಪ : ಕಾವ್ಯದಲ್ಲಿ ಅರ್ಥ ಉಂಟು. ಅದರಲ್ಲಿ ಎರಡು ಬಗೆ ಅಂತ ಹೇಳ್ತಾರೆ. ಒಂದು, ತಿಳಿಯುವ ಅರ್ಥ ಮತ್ತೊಂದು ಹೊಳೆಯುವ ಅರ್ಥ. ತಿಳಿಯುವ ಅರ್ಥ ಎಲ್ಲರಿಗೂ ಸಮಾನವಾದದ್ದು. ಕಾವ್ಯದಲ್ಲಿ ಇದೂ ಬಹಳ ಮುಖ್ಯವಾದದ್ದು. ಇಲ್ಲಿ ಕವಿ ಏನು ಹೇಳುತ್ತಿದ್ದಾನೆ ಅನ್ನೋದು ತಿಳಿಯುವ ಹಾಗೆ ಇರಬೇಕು ಅದರಾಚೆಗೆ ಹೊಳೆಯುವ ಅರ್ಥ ಇದೆ. ಅಂದರೆ ಯಾವುದೋ ವಿಶೇಷವಾದ ಅನುಭವವನ್ನು ಕಟ್ಟಿಕೊಡುವಾಗ ಅದರಾಚೆಗೆ ನಿಲ್ಲುವಂತ ಒಂದು ಅರ್ಥ ಇದೆಯಲ್ಲ ಅದೇ ನಿಜವಾದ ಕಾವ್ಯದ ಅರ್ಥ. ನಮ್ಮ ಕಾವ್ಯ ಮೀಮಾಂಸೆಯಲ್ಲಿ ಧ್ವನ್ಯಾರ್ಥ ಅಂತ ಕರೀತಾ ಇದ್ದರು. ತಿಳಿಯುವ ಅರ್ಥ ಎಲ್ಲರಿಗೂ ಸಮಾನವಾದದ್ದು. ಹೊಳೆಯುವ ಅರ್ಥ ಇದೆಯಲ್ಲ ಅದು ಓದುಗರಲ್ಲಿ ಮತ್ತೆ ಮತ್ತೆ ಬೆಳೆಯುವ ಅರ್ಥ ಕೂಡ ಹೌದು. ಈ ದೃಷ್ಟಿಯಿಂದ ಕಾವ್ಯಕ್ಕಿರುವ ಅರ್ಥ ಒಂದೇ ಅಲ್ಲ. ಮತ್ತು ಅದು ಓದುಗನ ಸಂಸ್ಕಾರಕ್ಕೆ ಅನುಗುಣವಾಗಿ ಕವಿಯ ಇಚ್ಛೆಗೆ ಸಂಗತವಾಗುವ ರೀತಿಯಲ್ಲಿ ಬೆಳಿತಲೇ ಹೋಗುತ್ತದೆ. ಆ ದೃಷ್ಟಿಯಿಂದ ಕಾವ್ಯಕ್ಕೆ ಒಂದೇ ಅರ್ಥ ಅಂತ ಹೇಳೋಕಾಗೋದಿಲ್ಲ. ಒಂದು ಪದ್ಯವನ್ನು ನಾವು ಚಿಕ್ಕಂದಿನಲ್ಲಿ ಓದಿದಾಗ ಆಗುವ ಅರ್ಥಕ್ಕೂ ನಾವು ಬೆಳೆದ ಮೇಲೆ ಆಗುವ ಅರ್ಥಕ್ಕೂ ವ್ಯತ್ಯಾಸ ಇದೆ. ಆದ್ದರಿಂದ ನಾವು ಬೆಳಿತಾ ಹೋದಹಾಗೆ ಕಾವ್ಯದ ಅರ್ಥವೂ ಬೆಳಿತಾ ಹೋಗುತ್ತದೆ. ಈ ಕಾವ್ಯದ ಅರ್ಥವಂತಿಕೆ ಇದೆಯಲ್ಲ ಇದೇ ಅದರ ನಿಜವಾದ ಸತ್ವ ಅಂತ ನಾನು ತಿಳಿದಿದ್ದೀನಿ.

ಶಿವಪ್ರಕಾಶ್: ಕಾವ್ಯಕ್ಕೆ ಅರ್ಥ ಇಲ್ಲ ಅಂತ ಹೇಳೋಕ್ಕಾಗೋಲ್ಲ. ಈ ಶತಮಾನದ ಕೆಲವು ಕಾವ್ಯಪಂಥಗಳಲ್ಲಿ, ಕಾವ್ಯದಲ್ಲಿ ಅರ್ಥ ಮುಖ್ಯ ಅಲ್ಲ ಎಂಬ

ನಿಲುವಿಗೆ ಪಶ್ಚಿಮದ ಅನೇಕ ವಿಮರ್ಶಕರು ಒಗ್ಗಿದ್ದಾರೆ. ಆದರೆ ಅರ್ಥ ಎನ್ನುವುದು ಕಾವ್ಯದ ಮುಖ್ಯವಾದ ಅಂಗ ಅನ್ನಿಸುತ್ತೆ. ಆದರೆ ಅರ್ಥ ಅನ್ನೋದೆ ಒಂದು ತಾರ್ಕಿಕವಾದ Category. ಅರ್ಥದ ಅರ್ಥವೇ ತರ್ಕ ಪ್ರಪಂಚಕ್ಕೆ ಸೇರಿದ್ದು. ವಾಪೀಗ ಧ್ವನ್ಯಾರ್ಥ ಅಂದಾಗಲೂ ಕೂಡ ಒಂದು ಪರಿಕಲ್ಪನೆ ಮೂಲಕ ಅದನ್ನ ಅರ್ಥಮಾಡಿಕೊಳ್ಳೋದಕ್ಕೆ try ಮಾಡ್ತಾ ಇರ್ತೀವಿ. ಇದು ಸರಿಯಿಲ್ಲ ಅಂತ ನಾನು ಹೇಳ್ತಾ ಇಲ್ಲ, ತರ್ಕದ ಮೂಲಕ ಅರಿವಿನ ಅಭಿವ್ಯಕ್ತಿ ಕ್ರಮಗಳನ್ನು ಅರ್ಥಮಾಡಿಕೊಳ್ಳೋ ಅವಶ್ಯಕತೆ ಇದೆ. ಆದರೆ ಒಂದು ಅಪಾಯ ಏನು ಅಂದರೆ ಅರ್ಥಕ್ಕೆ ನಾವು ಜಾಸ್ತಿ ಒತ್ತು ಕೊಟ್ಟಾಗ ಕಾವ್ಯದ ಇನ್ನೂ ಮುಖ್ಯವಾದ ನಿಯೋಗ ಗಳು ಏನು ಇರುತ್ತವೆ (Functions) ಅದನ್ನ ಮರತು ಬಿಡ್ತೀವಿ. ಬಹಳ ಮಹತ್ವದ ಕವಿತೆಯನ್ನು ಓದಿದಾಗ ಅದು ಜಗತ್ತನ್ನು ನೋಡುವ ಹೊಸದೃಷ್ಟಿಯನ್ನು ನಮಗೆ ಕೊಡುತ್ತದೆ, ಹೊಸ ಕಣ್ಣನ್ನು ನಮಗೆ ಕೊಡುತ್ತದೆ. ಅಂದರೆ ಒಂದು ರೀತಿಯ ಪರಿವರ್ತನೆಯನ್ನು ಉಂಟು ಮಾಡುತ್ತದೆ. ಅದು ಉಪಮೆಗಳ ಮೂಲಕ ಮಾಡ ಬಹುದು, ವಿರೋಧಾಭಾಸಗಳ ಮೂಲಕ ಮಾಡಬಹುದು ಇದನ್ನ ಜಪಾನಿನ ಕಾವ್ಯ ಮೀಮಾಂಸೆಯಲ್ಲಿ ಏನು ಹೇಳ್ತಾರೆ ಅಂದರೆ, ಹಾಯಿಕು ಪದ್ಯವನ್ನು ಓದಿದಾಗ, ಓದುಗನ ಮನಸ್ಸಿನಲ್ಲಿ ಒಂದು ನಿರ್ಣಾಯಿಕವಾದ ಪರಿವರ್ತನೆಯಾಗುತ್ತದೆ. ಆಗ ಅವನು ಬುದ್ಧನ ಕಣ್ಣನ್ನ ಪಡೀತಾನೆ ಅನ್ನೋದು ಈ ಅನುಭವವನ್ನು 'ಸಂವೇಗ' ಅಂತ ಕರೀತಾರೆ. ಆದ್ದರಿಂದ ಒಂದು ಶ್ರೇಷ್ಠ ಕಾವ್ಯ ಮಾಡಬಹುದಾದ ಒಂದು ಬಹು ಮುಖ್ಯ ನಿಯೋಗ ಅಂತ ನಾನು ತಿಳಿದಿದ್ದೀನಿ. So, ಅರ್ಥ ಕಾವ್ಯಕ್ಕೆ ಇದೆ ಅಂತ ಒಪ್ಪಿಕೊಂಡರೂ ಕೂಡ ಅಗತ್ಯಕ್ಕಿಂತ ಹೆಚ್ಚಿನ ಅರ್ಥ ಕೊಟ್ಟರೆ, ಕಾವ್ಯದ ಇತರ ಪರಿಕರಗಳನ್ನು ನಾವು ಉದಾಸೀನ ಮಾಡ್ತಾ ಇದ್ದೀನಿ ಅಂತ ಅನಿಸುತ್ತೆ.

ಕೇಬಿ ಸಿದ್ದಯ್ಯ : ಈಗ ಒಂದು ಕಾವ್ಯಕ್ಕೆ ಅರ್ಥ ಇದೆ ಅಂತ ಕಾವ್ಯಕ್ಕೆ ಪ್ರವೇಶ ಮಾಡಬೇಕು ಅಥವಾ ಕಾವ್ಯವನ್ನು ಓದುವುದರಿಂದ ಅರ್ಥ ಬರುತ್ತದೋ ಅನ್ನೋದನ್ನ ನಾವು ತಿಳಿಬೇಕಾಗುತ್ತದೆ, ಇಲ್ಲಿ ಕಾವ್ಯ ಅಂತಿಮವಾಗಿ ಏನು? ಅನುಭವ. ಅದನ್ನ ನಾವು ಆಂತರಿಕ ಕಂಪನ ಅಂತ ಕರೀಬಹುದು. ಆಗ ಅಂತಿಮವಾಗಿ ಮನುಷ್ಯ ತನ್ನೊಳೊಗೆನೆ ತನ್ನ ಅನುಭವಗಳಿಗೆ ಅರ್ಥಗಳನ್ನು ಕಂಡುಕೊಳ್ಳುತ್ತಾನೆ. ಅವನ ಅನುಭವದಿಂದ ಉಂಟಾದ ಅರ್ಥವನ್ನು ವಿಸ್ತಾರಗೊಳಿಸುತ್ತಾನೆ. ಅಂದರೆ ವೈಯುಕ್ತಿಕ ಅರ್ಥಗಳನ್ನು ವಿಶ್ವಾತ್ಮಕ ಅರ್ಥಗಳಿಗೆ ಒಳಪಡಿಸುತ್ತಾನೆ. ಆದಕಾರಣ ಕಾವ್ಯಕ್ಕೆ ಅರ್ಥ ಇರುತ್ತೆ. ಆದರೆ ಅರ್ಥದ ಮೂಲಕ ಕಾವ್ಯವನ್ನು ನಾವು ನೋಡೋದಕ್ಕೆ ಆಗೋ ದಿಲ್ಲ. ಕಾವ್ಯದಿಂದ ಯಾವ ಅರ್ಥ ಬರುತ್ತದೆ, ಆ ಅನುಭವ ಕಟ್ಟಿಕೊಡುವ ಒಂದು ಅರ್ಥ ಏನಿರುತ್ತದೆ ಅದನ್ನು ನಾವು ತಿಳಿಬಹುದೇನೊ. ಆದರೆ ಇದೇ ಅರ್ಥ ಅಂತ $(A+B)^2$ ಸೂತ್ರದಂತೆ ಹೇಳೋಕೆ ಆಗೋದಿಲ್ಲ. ಆದರೆ ಆತರದ್ದು ಏನೂಂತ

ಕೂಡ ಗೊತ್ತಾಗೋದಿಲ್ಲ. ನನಗನಿಸಿದ್ದು ಏನೂ ಅಂದರೆ ಈ ಮ್ಯಾಕ್‌ಬೆತ್ ನಾಟಕದಲ್ಲಿ ಲೇಡಿ ಮ್ಯಾಕ್‌ಬೆತ್‌ನ ನೋಡೋಕೆ ಒಬ್ಬ ಡಾಕ್ಟರ್ ಬರುತ್ತಾನೆ ಅವನು ಹೇಳುತ್ತಾನೆ 'They should need more than Physician'. ಅವಳಿಗೆ ಡಾಕ್ಟರ್ ಕೊಡೋ ಔಷಧಿಗಿಂತ ಏನೋ ಜಾಸ್ತಿ ಬೇಕಾಗಿರುತ್ತದೆ. ಡಾಕ್ಟರ್ cure ಮಾಡೋಕಾಗೋದಿಲ್ಲ ಅನಿಸುತ್ತೆ. ಕಾವ್ಯಕ್ಕೆ ಇಂಥ ಯಾವುದೋ ಒಂದು ಅರ್ಥ ಇರಬೇಕು. ಒಂದು ಔಷಧಿಯ ಗುಣ ಇರೋ ಅರ್ಥ ಕಾವ್ಯಕ್ಕೆ ಇರಬೇಕೇನೋ. ಯಾಕೆಂದರೆ ಮನುಷ್ಯನನ್ನು ಅಂತಿಮವಾಗಿ ಸಾಂತ್ವನಗೊಳಿಸುವ ಮತ್ತು ತನ್ನ ಅನುಭವದ ಜೊತೆ ತನ್ನನ್ನು ತಾನು ತೊಡಗಿಸಿಕೊಂಡು ಅರ್ಥ ಮಾಡಿಕೊಳ್ಳೋ ಒಂದು means ಕೂಡ ಒಂದು ಕಾವ್ಯ ಆಗಿರೋದ್ರಿಂದ ಆತರದ್ದು ಏನೋ ಅರ್ಥ ಇರಬೇಕು.

ಡಿ. ಎಸ್. ನಾಗಭೂಷಣ : ಶಿವಪ್ರಕಾಶ್ ಆರಂಭದಲ್ಲಿ ಮಾತಾಡ್ತ ಕಾವ್ಯದ ವಿಚಿತ್ರ, ಲಯದ ಬಗ್ಗೆ ಮಾತಾಡಿದರು. ಈ ಹಿನ್ನೆಲೆಯಲ್ಲಿ ನಾವು ಕಾವ್ಯಕ್ಕಿದ್ದ ಛಂದಸ್ಸಿನ ಪ್ರಶ್ನೆ ತಗೊಂಡರೆ, ಈಗ ಕಾವ್ಯ ಕ್ರಮೇಣ ಛಂದಸ್ಸನ್ನು ಕಳಕೊಂಡು ಸ್ವಚ್ಛಂದವಾಗುತ್ತಿದೆ ಅನ್ನೋ ಮಾತು ಕೇಳಿಬರ್‍ತಾ ಇದೆ. ಕಾವ್ಯ ಛಂದಸ್ಸನ್ನ ಯಾಕೆ ಕಳಕೊಳ್ತು ಅಥವಾ ನಿಜವಾಗಿಯೂ ಕಳಕೊಂಡಿದೆಯೋ ? ಇವತ್ತು ಛಂದಸ್ಸಿನಲ್ಲಿ ಬರೀಬಹುದೊ ? ಬರೆದೂ ಅದು ಸಾರ್ಥಕ ಕಾವ್ಯ ಆಗಬಹುದಾ ! ಯಾರೂ ಏಕೆ ಛಂದಸ್ಸಿನಲ್ಲಿ ಕಾವ್ಯ ಬರೆಯೋದಿಲ್ಲ !

ಜಿ. ಎಸ್. ಶಿವರುದ್ರಪ್ಪ: ಕಾವ್ಯವನ್ನು ಮೊದಲಿಂದಲೂ ಛಂದೋಬದ್ಧವಾದ ಅಭಿವ್ಯಕ್ತಿ ಅಂತಾನೆ ಎಲ್ಲರೂ ಹೇಳ್ತಾ ಬರ್‍ತಿದ್ದಾರೆ. ಬಹುಶಃ ಅನುಭವಕ್ಕೊಂದು ಆಕಾರಾನ, ಚೌಕಟ್ಟನ್ನ ಕೊಡೋದಕ್ಕೆ ಛಂದಸ್ಸು ಅನ್ನೋದು Frame Work ಆಗಿತ್ತು. ಆದರೆ ನಮ್ಮ ಭಾರತೀಯ ಪರಂಪರೆಯೊಳಗೆ ಕಾವ್ಯ ಅಂದರೆ ಪದ್ಯರೂಪದ್ದು ಮಾತ್ರವಲ್ಲ, ಗದ್ಯರೂಪಕ್ಕೂ ಕಾವ್ಯ ಅಂತ ಹೇಳಿದ್ದಾರೆ, ಗದ್ಯಕ್ಕೆ ಯಾವ ಛಂದಸ್ಸಿದೆ ? ಆದ್ದರಿಂದ ಭಾರತೀಯ ಕಾವ್ಯ ಕಲ್ಪನೆಯೊಳಗೆ ಛಂದೋಬದ್ಧವಾದ ರಚನೆ ಹೇಗೋ ಹಾಗೆ ಛಂದೋಬದ್ಧವಲ್ಲದ, ಆದರೆ ಕಾವ್ಯಕ್ಕೆ ಸಮೀಪವಾದ ಕಾವನ್ನ ಉಳಿಸಿಕೊಳ್ಳುವ ಬರವಣಿಗೆಗೆ ಕೂಡ ಕಾವ್ಯ ಅಂತ ಪರಿಗಣಿಸಲಾಗಿತ್ತು. ಕಾವ್ಯ ಅಂದರೆ ಪದ್ಯ–ಗದ್ಯ ಎರಡೂ ಸೇರಿ ಅಂತ ನಮ್ಮಲ್ಲಿ ಹೇಳಿರೋದು ಬಹಳ ಸ್ವಾರಸ್ಯಕರವಾದದ್ದು. ಪಶ್ಚಿಮದಲ್ಲಿ ಈ ರೀತಿಯ ಕಲ್ಪನೆಯಿಲ್ಲ. ಬಹುಶಃ ಅಲ್ಲಿ ಯಾರೂ ಗದ್ಯವನ್ನ ಕಾವ್ಯ ಅಂತ ಕರೆದಿರೋದು ನನಗೆ ಗೊತ್ತಿಲ್ಲ.

ಡಿ. ಎಸ್. ನಾಗಭೂಷಣ: ಅಂದರೆ ಸೃಜನಾತ್ಮಕ ಸಾಹಿತ್ಯವೆಲ್ಲವೂ ಕಾವ್ಯ !

ಜಿ. ಎಸ್. ಶಿವರುದ್ರಪ್ಪ: ಹೌದು. ಪ್ರತಿಭಾ ನಿರ್ಮಿತವಾದದ್ದು ಗದ್ಯವಾಗಿರಬಹುದು. ಪದ್ಯವಾಗಿರಬಹುದು. ಆದರೆ ಕಾವ್ಯವನ್ನು ಗದ್ಯ-ಪದ್ಯ ಅಂತ ಕರೆದಿರೋದು ನಮ್ಮ ಭಾರತೀಯ ಚಿಂತಕರೇ, ಆದ್ದರಿಂದ ನಮ್ಮಲ್ಲಿ ಛಂದೋಬದ್ಧದಾದ ರಚನೆಯೂ ಕೂಡ ಕಾವ್ಯ, ಛಂದೋಬದ್ಧವಲ್ಲದ ರಚನೆಯೂ ಕೂಡ ಕಾವ್ಯ. ಆದರೆ ಕಾವ್ಯ ಅಂತ ಹೇಳಿದರೆ ಛಂದೋಬದ್ಧವಾಗಿ ಇರಲೇಬೇಕಂತಲ್ಲ. ಯಾವ ಬರವಣಿಗೆಯಲ್ಲಿ ಒಂದು ರೀತಿಯ ಭಾವೋತ್ಕರ್ಷ ಇರುತ್ತದೆ, ಭಾವನೆಗಳನ್ನ ಅಥವಾ ಅನುಭವಗಳನ್ನ, ಆಲೋಚನೆಗಳನ್ನ ಹರಳುಗೊಳಿಸಿ ಹೇಳಲಾಗುತ್ತದೆ ಅಂತ ಅಭಿವ್ಯಕ್ತಿಯನ್ನ ಕಾವ್ಯ ಅಂತ ಕರೀತಾರೆ. ಆದ್ದರಿಂದ ಕಾವ್ಯ ಅಂದರೆ, ಕಾವ್ಯವಲ್ಲದ ಬರವಣಿಗೆಯಿಂದ ಬೇರ್ಪಡಿಸೋ ಲಕ್ಷಣ ಇದೆಯಲ್ಲ ಶಾಸ್ತ್ರದಿಂದ ಗುರುತಿಸೋ ಲಕ್ಷಣ– ಈಗ ಮೊದಲಿಗೇನೆ ಇವರು ಚರ್ಚೆಯನ್ನು ಆರಂಭಿಸಿದರು, ಬುದ್ಧಿಪೂರ್ವಕವಾಗಿ ಗ್ರಹಿಸೋದು, ಭಾವಪೂರ್ವಕವಾಗಿ ಗ್ರಹಿಸೋದು ಅಂತ–ಹಾಗೆ ಬುದ್ಧಿಪೂರ್ವಕವಾದ ರೀತಿಯಲ್ಲಿ ಲೋಕವನ್ನ ಗ್ರಹಿಸುವ ಬರವಣಿಗೆಯಿಂದ ಭಿನ್ನವಾದದ್ದು ಕಾವ್ಯ. ಆದ್ದರಿಂದ ಕಾವ್ಯಕ್ಕೆ ಛಂದಸ್ಸು ಅತ್ಯಂತ ಅಗತ್ಯ ಅಂತ ನನಗನಿಸೋದಿಲ್ಲ. ಆದರೆ ಅದನ್ನ ಕಾವ್ಯವನ್ನಾಗಿ ಮಾಡೋ ಒಂದು ಲಯಗಾರಿಕೆ ಇದೆಯಲ್ಲ ಅದು ಇದ್ದೇ ಇದೆ. ಆದಕಾರಣ ಇವತ್ತು ನಾವು ಛಂದೋಬದ್ಧವಾಗಿ ಬರೀತಾ ಇಲ್ಲ ಅನ್ನೋ ಕಾರಣಕ್ಕೆ ಕಾವ್ಯ ಅಲ್ಲ ಅಂತ ಹೇಳೋಕೆ ಸಾಧ್ಯವಾಗೋದಿಲ್ಲ. ಆದರೆ ಅದು ಮುಖ್ಯವಾಗಿ ಕಾವ್ಯವಾಗಿರಬೇಕು. ಕಾವ್ಯ ಏಕಾಗಿರುತ್ತದೆ ಅನ್ನೋದು ಬರಿಯೋರಿಗೆ ಗೊತ್ತು, ಓದೋರಿಗೆ ಗೊತ್ತು. ಅದು ಬರದೋವನಿಗೆ ಕಾವ್ಯವಾಗಿರುತ್ತದೆ ಇಲ್ಲವೇ ಅನ್ನೋದು ಮೂಲವಾನ ನಾವು ಓದ್ದಾಗ ಗೊತ್ತಾಗುತ್ತದೆ. ಹೊರತಾಗಿ ಛಂದಸ್ಸು ಇದೆಯೋ–ಇಲ್ಲವೋ ಅನ್ನೋದು ಮುಖ್ಯವಾಗೋದಿಲ್ಲ ನನಗೆ.

ಡಿ. ಎಸ್. ನಾಗಭೂಷಣ : ಇತ್ತೀಚಿನವರೆಗೆ ಎಲ್ಲಾ ಕವಿಗಳೂ ಛಂದೋಬದ್ಧವಾಗಿಯೇ ಬರೀತಾ ಇದ್ದರು ಅಂದರೆ ಸ್ಥೂಲವಾಗಿ ಹೇಳೋದಾದರೆ, ನವೋದಯ ಆರಂಭವಾಗೋಕಿನ್ನ ಮುಂಚೆ. ಆದರೆ ಇದ್ದಕ್ಕಿದ್ದಂತೆ ಛಂದಸ್ಸು ಯಾಕೆ ಮಾಯವಾಯ್ತು. ಇವತ್ತು ಯಾಕೆ ಯಾರೂ ಛಂದಸ್ಸಿನೊಂದಿಗೆ ಬರೆಯೋದಿಲ್ಲ.

ಶಿವಪ್ರಕಾಶ್: ಇವತ್ತು ಯಾರೂ ಛಂದಸ್ಸಿನಲ್ಲಿ ಬರೀತಾ ಇಲ್ಲ ಅನ್ನೋದು ಸುಳ್ಳು. ಇವತ್ತು ಬರೀತಾ ಇರೋ ಬಹಳ ಜನ ಯುವಕವಿಗಳನ್ನು ನೋಡಿದಾಗ ಅದು ಬಹಳ ಸುಲಭವಾಗಿ ಐದು ಮಾತ್ರೆಯ ಲಯದಲ್ಲಿ ಬಿದ್ದು ಒದ್ದಾಡ್ತ ಇರುತ್ತೆ. ನಾವು ಮುಕ್ತ ಛಂದಸ್ಸಿನಲ್ಲಿ ಬರೀತಿದ್ದೀವಿ ಅಂತ ಅವರು ತಿಳಿದಿರುತ್ತಾರೆ. ಆದರೆ ನಿಜವಾಗಿಯೂ ಮುಕ್ತಿ ಸಿಕ್ಕೋದು ಎಷ್ಟು ಕಷ್ಟಾನೋ ಮುಕ್ತ ಛಂದಸ್ಸಿನಲ್ಲಿ ಬರೆಯೋದು ಅಷ್ಟೇ ಕಷ್ಟ. ಇಲ್ಲಿ ಛಂದಸ್ಸಿಗಿಂತ ಮುಖ್ಯವಾದದ್ದು ಕಾವ್ಯಕ್ಕೆ ಲಯ

ಅಂತಾರೆ. ಕಾವ್ಯದ ಉಗಮದ ಪ್ರಶ್ನೆ ಬಂದಾಗ ... ಒಬ್ಬ ಪುರಾತನ ಸಮುದಾಯದ ಪೂಜಾರಿ ಯಾವುದೋ ಒಂದು ಶಕ್ತಿಯನ್ನು ಆವಾಹನೆ ಮಾಡಬೇಕಾದರೆ, ಅವನು ಆವಾಹನೆ ಮಾಡುತ್ತಿದ್ದ ಶಬ್ದಗಳ ಸಂಘಟನೆ ಲಯಬದ್ಧವಾಗಿ ಇರುತ್ತಿತ್ತು. ಅಂದರೆ ಅವನು ಒಂದು ಛಂದಸ್ಸನ್ನು ಹಾಕ್ಕೊಂಡು ಲಯವನ್ನ ನಿರ್ಮಾಣ ಮಾಡಲಿಲ್ಲ. ಎಷ್ಟೋ ಶತಮಾನಗಳ ಕಾಲ ಕಾವ್ಯ ರಚನೆಯಾಗುತ್ತಾ ಹೋಗುತ್ತದೆ, ಲಯಬದ್ಧವಾಗಿರುತ್ತದೆ. ಆಮೇಲೆ ಪಂಡಿತರು ಬಂದು ಅದನ್ನ ಒಂದು ಛಂದಸ್ಸಶಾಸ್ತ್ರ ಮಾಡುತ್ತಾರೆ, ಆದಕ್ಕೆ ಒಂದು ರೂಪ ಕೊಡುತ್ತಾರೆ. ಆದರೆ ಇದಕ್ಕೆ ಅಲ್ಲಮಪ್ರಭುವಿನಲ್ಲಿ ಒಂದು ಮಾತು ಬರುತ್ತೆ 'ಮೂರ್ತಿಯಾದ್ದಕ್ಕೆ ಪ್ರಳಯ ತಪ್ಪದು' ಅಂತ. ಈ ರೀತಿ ಅದು ಸ್ಥಾವರವಾದಾಗ, ಅದು ತನ್ನ ಜಂಗಮ ಸತ್ವವನ್ನ ಕಳೆದುಕೊಳ್ಳೊ ಅಪಾಯವಿರುತ್ತದೆ. ಆಗ ಹೊಸ ಲಯಗಳ ಹುಡುಕಾಟ ಶುರುವಾಗುತ್ತೆ .. ತನ್ನ ಆಂತರಿಕ ಒತ್ತಡಕ್ಕೆ ಅವನು ಹೆಚ್ಚು ಪ್ರಾಮಾಣಿಕನಾಗಿರಬೇಕಾದಾಗ ಛಂದಸ್ಸಶಾಸ್ತ್ರದ ನಿಯಮಗಳ ಪ್ರಕಾರ ಅವನು ಕಾವ್ಯ ಬರೆಯೋದಕ್ಕೆ ಆಗೊಲ್ಲ. ಹೊಸ ಲಯಗಳನ್ನು ಹುಡುಕಿ ಹೋಗ್ತಾನೆ. ಆಗ ಛಂದಸ್ಸಿನ ನಿಯಮಗಳನ್ನು ಮುರೀಬೇಕಾಗಿ ಬರುತ್ತದೆ. 12ನೇ ಶತಮಾನದಲ್ಲಿ ವಚನಕಾರರು ಇದನ್ನು ಮಾಡಿದ್ದಾರೆ. ಅಷ್ಟು ಯಶಸ್ವಿಯಾಗಿ ಇಪ್ಪತ್ತನೆ ಶತಮಾನದಲ್ಲಿ ಕಾವ್ಯ ಈ ಪ್ರಯೋಗ ಮಾಡಿದೆ ಅಂತ ನನಗನಿಸೋದಿಲ್ಲ. ಆಮೇಲೆ, ಪ್ರತಿಯೊಬ್ಬ ಕವಿಯೂ ಕೂಡ-ಛಂಧಸ್ಸಿನ ನಿಯಮಗಳನ್ನು ಅನುಸರಿಸಿ, ಕಾವ್ಯ ಬರೆಯೋನೂ ಕೂಡ-ಒಂದು ಘಟ್ಟದಲ್ಲಿ ಅವನ ಅನುಭವ ಪಕ್ವವಾಗುತ್ತಿದ್ದಾಗ ಹೆಚ್ಚು ಗಾಢವಾಗುತ್ತಿದ್ದಾಗ ಅದನ್ನ ಮುರೀಬೇಕಾಗುತ್ತದೆ.

ಡಿ. ಎಸ್. ನಾಗಭೂಷಣ : ಅಂದರೆ ಒಂದು ಹಳೆಯ ಛಂದಸ್ಸಿನ ಚೌಕಟ್ಟನ್ನು ಕಟ್ಕೋಕಡೆ ಇವತ್ತಿನ ಕಾವ್ಯ ಹೋಗುತ್ತಿದೆ ಅಂತ ಹೇಳಬಹುದಾ ?

ಶಿವಪ್ರಕಾಶ್ : ಚೌಕಟ್ಟನ್ನ ರೂಪಿಸುವುದೇ ಪಂಡಿತರ ಹಸ್ತಕ್ಷೇಪದಿಂದಾಗುವುದು. ಕಾವ್ಯ ಯಾವಾಗಲೂ ಹೆಚ್ಚು ಸ್ಪಷ್ಟವಾದ, ಹೆಚ್ಚು ಪ್ರಾಮಾಣಿಕವಾದ ಲಯಗಳನ್ನ ಹುಡುಕ್ತಾ ಇರುತ್ತದೆ. ಅಷ್ಟರ ಮಟ್ಟಿಗೆ ಇವತ್ತಿನ ಛಂದಸ್ಸು, ಸಾಲುಗಳನ್ನ ಬರೆದಾಗ ಅದು ಮುರಿದಂತೆ ಕಾಣುತ್ತದೆ. ನೀವು ಅದನ್ನ Scan ಮಾಡಿದರೆ ಅನೇಕ ಸಲ ಅದು ಐದು ಮಾತ್ರೆಗೆ ಸಿಕ್ಕುತ್ತದೆ.

ಜಿ. ಎಸ್. ಶಿವರುದ್ರಪ್ಪ : ಐದು ಮಾತ್ರೆಯ ಗಣದ ಮುಖ್ಯ ಲಕ್ಷಣ ಅಂದರೆ ಆಡುಮಾತಿಗೆ ಸಮೀಪವಾಗಿರೋದು.

ಶಿವಪ್ರಕಾಶ್: ನಿಜ ಅದು. ಈಗ ಕನ್ನಡ ಕಾವ್ಯದ ಬಹಳ Memorable ಆದ ಸಾಲುಗಳನ್ನು ತೆಗೆದುಕೊಂಡಾಗ ಅದು ಐದು ಮಾತ್ರೆಯ ಲಯಕ್ಕೆ ಬೀಳ್ತಾ ಇರುತ್ತದೆ.

ಡಿ. ಎಸ್. ನಾಗಭೂಷಣ : ಒಂದೆರಡು ಉದಾಹರಣೆ ಕೊಡ್ತಿರಾ.

ಶಿವಪ್ರಕಾಶ್: ಅಡಿಗರ 'ಶ್ರೀರಾಮನವಮಿ' ಕವಿತೆ ಆಗಬಹುದು. ಬೇಂದ್ರೆಯವರ 'ಮಾಯಾ ಕಿನ್ನರಿ' ಆಗಬಹುದು. ಇದನ್ನ ನೀವು ಅಂಶಿ ಛಂದಸ್ಸಿನಲ್ಲಾದರೂ ಹೇಳಬಹುದು, ಮಾತ್ರಾ ಛಂದಸ್ಸಿನಲ್ಲಿ ಬೇಕಾದರೂ ಓದಿಕೊಳ್ಳಬಹುದು. ಆದರೆ ವಚನಗಳ ಭಾಷೆ ನೋಡಿದಾಗ ಅದು ಆಡುಮಾತಿಗೆ ಬಹಳ ಹತ್ತಿರ ಇರುತ್ತದೆ. But ಇದು ಐದು ಮಾತ್ರೆಗೆ ಸಿಗೋದಿಲ್ಲ. ಆದರೆ ವಚನಗಳಲ್ಲಿ ಸಾಧ್ಯವಾಗುವಷ್ಟು ಲಯ ವೈವಿಧ್ಯ ಈವೊತ್ತಿನ ಕಾವ್ಯವಲ್ಲಿ ಸಾಧ್ಯವಾಗುತ್ತಿಲ್ಲ.

ಕೇಬಿ. ಸಿದ್ಧಯ್ಯ : ಶಿವರುದ್ರಪ್ಪನವರು ಹೇಳಿದ ಪ್ರಕಾರ ಛಂದಸ್ಸಿಯೂವಾಗ ಸಾಕಾಗದೆ ಹೋಗುತ್ತೆ 'ಅಂದರೆ, ಈ ಕಾವ್ಯವನ್ನ ಸೃಷ್ಟಿಸುವ ಕ್ರಿಯೆ ಆಂತರಿಕವಾಗಿ ಏಕವ್ಯಕ್ತಿಯ ಉಸಿರಾಟದ ಲಯವನ್ನೇ ಅವಲಂಬಿಸಿರುತ್ತದೆ. ಆ ಲಯ ಛಂದಸ್ಸಿಗೆ ಒಳಪಡದೆ ಇದ್ದಾಗ ಅವನು ತನ್ನದೇ ಆದ ಬೇರೆ ಒಂದು ಲಯವನ್ನು ಕಂಡುಕೊಳ್ಳಬೇಕಾಗುತ್ತದೆ. ಅದನ್ನ ನಾವು ಹನ್ನೆರಡನೆ ಶತಮಾನದ ವಚನಕಾರರಲ್ಲಿ ನೋಡಬಹುದು. ಇಡೀ ವಚನಕಾರರು ತಮ್ಮ ವಚನಸೃಷ್ಟಿಯಲ್ಲಿ ಪ್ರತಿಯೊಬ್ಬರೂ ಕೂಡ, ಅಲ್ಲಮ ಪ್ರಭುವಿನ ವಚನವಿದ್ದಂತೆ ದೇವರ ದಾಸಿಮಯ್ಯನವರ ವಚನವಿರುವುವಿಲ್ಲ, ದೇವರ ದಾಸಿಮಯ್ಯನವರ ವಚನವಿದ್ದಂತೆ ಅಂಬಿಗರ ಚೌಡಯ್ಯನವರ ವಚನ ಇರೋದಿಲ್ಲ. ಏಕೆಂದರೆ ಅವರ ಆಂತರಿಕ ಕಂಪನಗಳಿಗೆ ಅನುಗುಣವಾಗಿ ಅವರು ಲಯಗಳನ್ನ ಸೃಷ್ಟಿಸುತ್ತಾ ಆ ಲಯಗಳಿಗೆ ಬದ್ಧರಾಗಿ ವಚನಗಳನ್ನು ರಚನೆ ಮಾಡುತ್ತಾ ಬಂದಿರುತ್ತಾರೆ. ಈ ರೀತಿ ಛಂದಸ್ಸು ರೂಪಾಂತರಗೊಳ್ಳಬಹುದು ಅನಿಸುತ್ತೆ.

ಡಿ. ಎಸ್. ನಾಗಭೂಷಣ : ಸ್ವಚ್ಛಂದವಾಗಿ ಬರೆಯುವುದೂ ಕೂಡ ಛಂದಸ್ಸು ಅಂತ ಹೇಳಬಹುದಾ ? ಸ್ವಚ್ಛಂದಾ ಕೂಡ ಛಂದಸ್ಸೇ.

ಶಿವಪ್ರಕಾಶ್: ಸ್ವಚ್ಛಂದವಾಗಿ ಬರೆದಾಗಲೂ ಕೂಡ ಪಂಡಿತರ ಕೈಗೆ ಸಿಗದ ಒಂದು ಛಂದಸ್ಸಿರುತ್ತದೆ, ಒಂದು ಲಯ ಇರುತ್ತದೆ. ಆ ಲಯವನ್ನು ಹುಡುಕೋದಕ್ಕೇನೇ ಸಿದ್ಧಯ್ಯನವರು 'ಕಂಪನ' ಅಂತ ಶಬ್ದ ಬಳಸಿದರು. ಆ ಕಂಪನವನ್ನ ಕಾವ್ಯದ ಇತರ ಪರಿಕರಗಳ ಮೂಲಕ ಹಿಡಿದಿಡುವುದು ಇದೆಯಲ್ಲಾ ಅದೇ ಕಾವ್ಯ.

ಡಿ. ಎಸ್. ನಾಗಭೂಷಣ: ಈಚೆಗೆ ಕಾವ್ಯ ಈ ಛಂದಸ್ಸಿನಿಂದ ಹೊರಗಡೆ ಬಂದದ್ದು ಬಹುಶಃ ಕಾವ್ಯದ ಮೇಲೆ ಪಾಂಡಿತ್ಯದ ಪ್ರಭಾವ ಜಾಸ್ತಿಯಾಗಿ ಅದರಿಂದ ಬಿಡುಗಡೆ ಪಡೆಯೋದಕ್ಕೆ ಏನಾದರೂ........

ಶಿವಪ್ರಕಾಶ್: ಕಾವ್ಯ ಯಾವತ್ತೂ ಛಂದಸ್ಸನ್ನು ಅವಲಂಬಿಸಿಲ್ಲ. ಈಗ ವಚನಕಾರರ ಬಗ್ಗೆ ನಾವು ಮಾತಾಡ್ತಾ ಇದ್ದಿವಿ. ಈಗ ಮಲೆಯ ಮಾದೇಶ್ವರ ಪುರಾಣ ಅಥವಾ ಮಂಟೆಸ್ವಾಮಿ ಕಾವ್ಯ ಮುಂತಾದ ಜಾನಪದ ಕಾವ್ಯಗಳನ್ನು ನಾವು ನೋಡಿದಾಗ, ಅಲ್ಲಿನ ಛಂದಸ್ಸು ಏನಿದೆ ಅದು ಈ ಪಂಡಿತರ ಛಂದಸ್ಸಿಗೆ ಸಿಗೋದಿಲ್ಲ. But ಆದರಲ್ಲಿ ಲಯ ಇಲ್ಲ ಅಂತ ಹೇಳೋಕೆ ಆಗೋದಿಲ್ಲ. ಪಂಡಿತರ ಕೈಗೆ ಸಿಗ್ದೇ ಇರೋ ಛಂದಸ್ಸುಗಳಿವೆ. ಆದರೆ ಛಂದಸ್ಸನ್ನ ಕವಿ ಯಾಕೆ ನಿರಾಕರಿಸಬೇಕಾಗಿ ಬರುತ್ತದೆ ಅಂದರೆ, ಅದು ಕಾವ್ಯದ ರೂಪವನ್ನು ಪೂರ್ವನಿರ್ಧಾರಗೊಳಿಸುವುದಕ್ಕೆ ಕಾರಣವಾಗುತ್ತದೆ, ಆದ್ದರಿಂದ ನಿರಾಕರಿಸಬೇಕಾಗಿ ಬರುತ್ತದೆ.

ಜಿ. ಎಸ್. ಶಿವರುದ್ರಪ್ಪ: ನನಗನಿಸೋದು ಛಂದಸ್ಸಿನಲ್ಲಿ ಚೆನ್ನಾಗಿ ಪಳಗಿದೋನೇ ಛಂದಸ್ಸನ್ನ ಮುರಿಯೋದಕ್ಕೆ ಸಾಧ್ಯ ಅಂತ.

ಶಿವಪ್ರಕಾಶ್ : ಇದು ಅನೇಕ ಕವಿಗಳ Practiceನಲ್ಲಿ ನಿಜ ಆಗಿದೆ. ಆದರೆ ನೆರೂಡನಂತಹ ಒಬ್ಬ ಕವಿ ಹೇಳುತ್ತಾನೆ, 'ನಾನು ಯಾವತ್ತೂ ಛಂದಸ್ಸನ್ನ ಕಲಿತೇ ಇಲ್ಲ ಅಂತ'

ಜಿ. ಎಸ್. ಶಿವರುದ್ರಪ್ಪ : ಕಲಿಯುವುದಲ್ಲ, ಅದು ಮೂಲಭೂತವಾಗಿ ಒಂದು Descipline ಒಂದರ್ಥದಲ್ಲಿ.

ಶಿವಪ್ರಕಾಶ್ : ಅಲ್ಲಾ ಸಾರ್, ಒಬ್ಬೊಬ್ಬರು ಅದನ್ನ Descipline ಮೂಲಕ Perfect ಮಾಡಿಕೊಳ್ಳಬಹುದು ಅಥವಾ ಮಾಡಿಕೊಳ್ಳದೇ ಇರಬಹುದು. ಇನ್ನೊಬ್ಬ ಅದನ್ನ ಪೂರ್ತಿ Awareness ಒಂದು Sixth Sense ಅಂತಾರಲ್ಲ ಅದರ ಮೂಲಕಾನೂ ಕಲಿಯೋದಕ್ಕೆ ಸಾಧ್ಯವಾಗುತ್ತದೆ.

ಡಿ ಎಸ್. ನಾಗಭೂಷಣ : ಸಾರ್, ನಾವೀಗ ಮುಂದಿನ ಪ್ರಶ್ನೆಗೆ ಹೋಗಬಹುದು ಅನಿಸುತ್ತೆ. ನಾವು ಹಿಂದೆ ಭಾಷಾ ಕಮ್ಮಟದಲ್ಲಿ ಮಾತಾಡ್ತ ಭಾಷೆ ಸೃಜನಶೀಲವಾದಾಗ, ಅದು ಒಂದು ಹೊಸ ವ್ಯಾಕರಣವನ್ನು ಸೃಷ್ಟಿಸುತ್ತದೆ ಅನ್ನೋ ಒಂದು ಮಾತು ಬಂತು. ಕಾವ್ಯದ ಸಂದರ್ಭದಲ್ಲಿ ಇದನ್ನ ಹೇಗೆ ಹೇಳಬಹುದು ಅಂದರೆ ಒಂದು ಒಳ್ಳೆಯ ಕಾವ್ಯ ಹೊಸ ವ್ಯಾಕರಣವನ್ನ ಸೃಷ್ಟಿಸುತ್ತದೆ ಅಂತ ಹೇಳಬಹುದು. ಈ ಬಗ್ಗೆ ನೀವೇನು ಹೇಳ್ತೀರಿ.

ಜಿ. ಎಸ್. ಶಿವರುದ್ರಪ್ಪ: ಭಾಷೆಯನ್ನ ಕಾವ್ಯ ಬಳಸಿಕೊಳ್ಳೋದರಿಂದ, ಬಹುಶಃ ಈ ಪ್ರಶ್ನೆಗೆ ನಾವು ಇನ್ನೂ ಹಿಂದಕ್ಕೆ ಹೋಗಿ ವಿಚಾರ ಮಾಡೋದಾದರೆ, ಕಾವ್ಯ ಎನ್ನುವುದು ಅಭಿವ್ಯಕ್ತಿಯೋ ಸಂವಹನವೋ ಎಂಬ ಪ್ರಶ್ನೆಯನ್ನ ಈ ಸಂವಾದ ದಲ್ಲಿ ಎತ್ತಲಾಯಿತು. ಅಲ್ಲಿಗೆ ಈ ಪ್ರಶ್ನೆಯನ್ನು ಲಗತ್ ಮಾಡೋದಾದರೆ, ಭಾಷೆಯ ಮೂಲಕವೇ ಅದು ಸಂವಹನಗೊಳ್ಳಬೇಕಾದ್ದರಿಂದ ಕಾವ್ಯಕ್ಕೆ ಭಾಷೆ ಎನ್ನುವುದು ಅದರ ನಿಜವಾದ ಮಾಧ್ಯಮ. ಹೇಗೆ ಬೇರೆ ಬೇರೆ ಕಲೆಗಳಿಗೆ ಬೇರೆ ಬೇರೆ ಮಾಧ್ಯಮಗಳಿವೆಯೋ ಹಾಗೆ ಕಾವ್ಯಕ್ಕೆ ಭಾಷೆಯೇ ಮಾಧ್ಯಮ. ಈ ಭಾಷೆ ಅಂತಕ್ಕದ್ದು ಬಹುಶಃ ಕವಿಗೆ, ನನಗೆ ತೋರೋಮಟ್ಟಿಗೆ ಮೂರು ರೀತೀಲಿ ಪರಿಚಿತ ವಾಗಿರುತ್ತದೆ. ಒಂದು: ಇದೇ ಭಾಷೆಯನ್ನ ತನಗಿಂತ ಹಿಂದಿನ ಕಾವ್ಯ ಪರಂಪರೆ ಸೃಜನಾತ್ಮಕವಾಗಿ ಬಳಸಿದ ದಾಖಲೆಗಳು. ಇದನ್ನ ಸಾಹಿತ್ಯ ಪರಂಪರೆಯ ಭಾಷೆ ಅಂತ ಕರೀಬಹುದು. ಮತ್ತೊಂದು: ತನ್ನ ಸುತ್ತಮುತ್ತ ತನ್ನ ಪ್ರಾದೇಶಿಕ ವೈಶಿಷ್ಟ್ಯಗಳಿಗೆ ಅನುಸಾರವಾಗಿ ವ್ಯವಹಾರದಲ್ಲಿ ಬಳಕೆಯಾಗುತ್ತಿರುವ ಭಾಷೆ ಮತ್ತು ಕಿವಿ ಮೇಲೆ ಬೀಳುವ ಭಾಷೆ. ಇದನ್ನ ವ್ಯವಹಾರಿಕ ಭಾಷೆ ಅಂತ ಕರೀಬಹುದು. ಮತ್ತೊಂದು ತನ್ನ ಸಮಕಾಲೀನರು ಪರಂಪರೆಯ ಭಾಷೆಯನ್ನ ಗಮನದಲ್ಲಿಟ್ಟು ಕೊಂಡು ತಾವಾಗಿಯೇ ಸೃಷ್ಟಿಸುವ ಸಮಕಾಲೀನ ಭಾಷೆ. ಬಹುಶಃ ಒಬ್ಬ ಕವಿಯ ಅಭಿವ್ಯಕ್ತಿ ರೂಪುಗೊಳ್ಳುವಾಗ ಈ ಮೂರೂ ರೀತಿಯ ಎಚ್ಚರ ಅವನಿಗಿರುತ್ತದೆ ಅಂತ ನಾನಂದುಕೊಂಡಿದ್ದೇನೆ. ಆದಕಾರಣ ಕಾವ್ಯ ಅನ್ನುವುದು ಭಾಷೆಯಲ್ಲಿ ಸಂಭ ವಿಸುವುದರಿಂದ ಆ ಭಾಷೆಯನ್ನು ಅದು ಸೃಜನಾತ್ಮಕವಾಗಿ ಅಭಿವ್ಯಕ್ತಿಪಡಿಸುತ್ತಾನೆ. ಸೃಜನಾತ್ಮಕವಾಗಿ ಅಭಿವ್ಯಕ್ತಿ ಪಡಿಸೋದು ಅಂದರೆ, ಭಾಷೆಯ ವ್ಯವಹಾರಿಕ ರೂಪ ವನ್ನು ಮುರಿದು ಹೊಸದಾಗಿ ತನ್ನ ಸೃಜನಾತ್ಮಕ ಉದ್ದೇಶಕ್ಕೆ ಅದನ್ನು ಕಟ್ಟುವುದು. ಹೀಗಾಗಿ ಭಾಷೆ ಅನ್ನೋದು ಮೂಲಭೂತವಾಗಿ ಇಲ್ಲಿ ಸೃಜನಾತ್ಮಕವಾದ ಪರಿವರ್ತನೆಗೆ ಒಳಗಾಗೋದರಿಂದ ಅದು ಒಂದು ಭಾಷೆಯ ಲಯವನ್ನ, ಛಂದಸ್ಸನ್ನ, ವ್ಯಾಕರಣ ವನ್ನ ಎಲ್ಲವನ್ನೂ ಒಳಗೊಳ್ಳುತ್ತದೆ, ಆದ್ದರಿಂದ ಭಾಷೆಯ ಪುನರ್ನಿರ್ಮಿತಿ ಸಾಹಿತ್ಯದ ಸಂದರ್ಭದಲ್ಲಿ ಆಗುತ್ತದೆ. ಹಾಗೆ ಆಗುವ ಭಾಷೆಯ ಕ್ರಮವನ್ನ ನಮ್ಮ ಹಿಂದಿನ ಅಲಂಕಾರಿಕರು 'ವಕ್ರೋಕ್ತಿ' ಅಂತ ಕರೆದರು. ಅದು ನೇರವಾದ ಉಕ್ತಿ ಅಲ್ಲ. ವಕ್ರವಾದ ಉಕ್ತಿ, Deviated Expression ಅಂತ ಕರೀತಾರೆ, ಹೀಗೆ ಕಾವ್ಯದ ಭಾಷೆಗೆ ಬಹಳ ಮುಖ್ಯವಾದ್ದು ಅಂದರೆ ಅದು ವ್ಯವಹಾರಿಕ ಭಾಷೆ ಗಿಂತ ಭಿನ್ನವಾಗಿರುತ್ತದೆ ಮತ್ತು ಶಾಸ್ತ್ರ ಭಾಷೆಗಿಂತ ಭಿನ್ನವಾಗಿರುತ್ತದೆ ಇದು ಮೊದ ಲನೆಯದು. ಎರಡನೆಯದಾಗಿ ಅದು ಸಾಂಕೇತಿಕವಾದ ರೂಪದಲ್ಲಿ ಮಾತಾಡುತ್ತದೆ Symbolic ಅಂತಾರಲ್ಲ ಆ ಅರ್ಥದಲ್ಲಿ. ಹೀಗೆ ಭಾಷೆಯನ್ನು ಸಾಂಕೇತಿಕವಾಗಿ ಬಳಸುವ ಕ್ರಮವನ್ನ ಕಾವ್ಯಭಾಷೆಯ ಲಕ್ಷಣ ಅಂತ ನಾವು ಕರೀಬಹುದು. ಒಂದು

ಉದಾಹರಣೆ ಕೊಡೋದಾದರೆ ಕೆ.ಎಸ್.ನ ಅವರ ಒಂದು ಪದ್ಯದೊಳಗೆ 'ಬರೀಗೊಡಗಳಿಗೆ ಸಮಾಧಾನ ಹೇಳುತ್ತಿದ್ದ ನಲ್ಲಿ; ಮಟಮಟ ಮಧ್ಯಾಹ್ನದಲ್ಲಿ'. ಇದು ಕಾವ್ಯ ಭಾಷೆಯ ಒಂದು ಲಕ್ಷಣ. ಇಲ್ಲಿ ಏನಾಗಿದೆ ಅಂದರೆ ಭಾಷೆ ಒಂದು ಲಯಕ್ಕೆ, ಛಂದಸ್ಸಿಗೆ ಒಂದು ಶಿಸ್ತಿಗೆ ಒಳಪಟ್ಟಿದೆ. ವ್ಯವಹಾರಿಕ ಭಾಷೆಯಲ್ಲಿ ಇಷ್ಟು ಕ್ರಮಬದ್ಧವಾಗಿ ಬಳಸೋದಿಲ್ಲ. ವ್ಯವಹಾರಿಕ ಭಾಷೆ ಒಂದು ರೀತಿಲಿ ಸಡಿಲವಾಗಿರುತ್ತದೆ, ಅಜಾಗರೂಕವಾಗಿರುತ್ತದೆ. ಅಲ್ಲಿ ಹೇಳಬೇಕಾದ ತುರ್ತು ಇರೋದಿಲ್ಲ. ಆದರೆ ಕಾವ್ಯದಲ್ಲಿ ಒಂದು ಅನುಭವವನ್ನು ಹೇಳಲೇಬೇಕಾದ ಅನಿವಾರ್ಯ ಒದಗಿದಾಗ ಆದಕ್ಕೆ ಭಾಷೆ ತಾನಾಗಿಯೇ ಒದಗಿಬಂದುಬಿಡುತ್ತದೆ. ಮೇಲಿನ ಉದಾಹರಣೆ, ಒಂದು ಸಾಮಾಜಿಕ ಸಂದರ್ಭ ಆಗಬಹುದು. 'ಬರಿಗೊಡಗಳಿಗೆ ಸಮಾಧಾನ ಹೇಳುತ್ತಿದೆ ನಲ್ಲಿ; ಮಟಮಟ ಮಧ್ಯಾಹ್ನದಲ್ಲಿ' ಈ ಎರಡು ಪಂಕ್ತಿಗಳಲ್ಲಿ ಒಂದು ರೀತಿಯ ವಿನ್ಯಾಸ ಕಾಣುತ್ತದೆ. ಈ ವಿನ್ಯಾಸ ಯಾವ ರೀತಿಯಲ್ಲೂ ಕೂಡ ವ್ಯವಹಾರಿಕ ಭಾಷೆಯ ಕ್ರಮವನ್ನೇ ಆಗಲಿ ಮತ್ತು ಶಾಸ್ತ್ರೀಯ ಭಾಷೆಯ ಕ್ರಮವನ್ನು ಅನುಸರಿಸಿಲ್ಲ, ಅಲ್ಲದೆ ಇಲ್ಲಿ ಕಾವ್ಯದ ಭಾಷೆ ತನ್ನ ವ್ಯವಹಾರಿಕವಾದ ರೂಪವನ್ನು ವರ್ಜಿಸಿಕೊಂಡು ಪ್ರಾಸ, ಛಂದಸ್ಸು, ಲಯಗಳ ಒಂದು ಶಿಸ್ತಿಗೆ ಒಳಪಡುತ್ತದೆ. ಈ ಒಂದು ಶಿಸ್ತಿಗೆ ಒಳಪಟ್ಟಾಗ ಅದು ಒಂದು ರೀತಿಯಾದ 'ಘನೀಭವನ' ಸ್ಥಿತಿಗೆ ಬರುತ್ತದೆ. Crystalization ಹಾಗೆ. ಅಂದರೆ ಒಂದು ಬಗೆಯ ಚಿತ್ರ ನಿರ್ಮಾಣವಾಗುತ್ತದೆ. ಇಲ್ಲಿ ಒಂದು ಚಿತ್ರ ಇದೆ. ಇದನ್ನ ಶಬ್ದ ಚಿತ್ರ ಅಂತ ಕರೀತೀವಿ. ಹೀಗೆ ಚಿತ್ರವನ್ನ ನಿರ್ಮಾಣ ಮಾಡಿ ಆ ಚಿತ್ರದ ಮೂಲಕ ತಾನು ಹೇಳಬೇಕಾದ ಅಭಿಪ್ರಾಯಗಳನ್ನ ಅಥವಾ ಆಲೋಚನೆಗಳನ್ನ, ಭಾವನೆಗಳನ್ನ ಪ್ರಕಟಪಡಿಸುತ್ತದೆ. ಇದನ್ನ ನಾವು ಒಂದು ಪ್ರತೀಕ ಅಂತ ಕರೀಬಹುದು. ಉದಾಹರಣೆಗೆ ಈ ಸಾಲು (ಕೆ.ಎಸ್.ನ ಅವರ ಕವಿತೆಯ) ಒಂದು ರೀತಿ ಸಾಮಾಜಿಕವಾದ ವಿಷಮಸ್ಥಿತಿಯನ್ನು ಹೇಳ್ತಾ ಇದೆ. ಹೀಗೆ ಕವಿ ತನ್ನ ಅನುಭವ, ಆಲೋಚನೆಗಳನ್ನ ಕಟ್ಟಿಕೊಡೋದಕ್ಕೆ ಕೆಲವು ಶಬ್ದ ಚಿತ್ರಗಳ ಮೂಲಕ ಮಾಡುತ್ತಾನೆ. ಇದನ್ನ ಪ್ರತೀಕ ಅಂತ ಕರೆಯೋದಕ್ಕೆ ಸಾಧ್ಯ. ಹೀಗೆ ಪ್ರತೀಕಾತ್ಮಕವಾದ ರೀತಿಯಲ್ಲಿ ಕಾವ್ಯದಲ್ಲಿ ಭಾಷೆ ಸೃಜನಾತ್ಮಕವಾದ ಸ್ವರೂಪವನ್ನು ಪಡೆದುಕೊಳ್ಳುತ್ತಾ ಹೋಗುತ್ತದೆ. ಆದ್ದರಿಂದ ಭಾಷೆಯ ಮೂಲಕವೇ, ಸಂಭವಿಸಬೇಕಾದ ಕಾವ್ಯ, ಆ ಭಾಷೆಯ ಪರಿಚಿತವಾದ ಸ್ವರೂಪವನ್ನ ಮುರಿದು ಒಂದು ಹೊಸ ಮತ್ತು ಅಪರಿಚಿತವಾದ ಶಬ್ದ ಚಿತ್ರದ ಮೂಲಕ ಅಭಿಪ್ರಾಯಗಳನ್ನ, ಭಾವನೆಗಳನ್ನ ಹೇಳೋದಕ್ಕೆ ಕಟ್ಟಿಕೊಳ್ಳುತ್ತದೆಯಲ್ಲ, ಆ ಕ್ರಮವನ್ನ ನಾವು ಕಾವ್ಯ ಭಾಷೆಯ ರೂಪ ಅಂತ ಕರೀತೀವಿ.

ಸೃಜನಶೀಲತೆ ಮತ್ತು ಬಂಡಾಯ

ಡಾ॥ ಕೆ. ಶಿವರಾಮ ಕಾರಂತ

(ಪ್ರತಿಯೊಂದು ಸೃಜನಶೀಲ ಕ್ರಿಯೆಯೂ ಬಂಡಾಯವೇ; ಈ ಅರ್ಥದಲ್ಲಿ ಪ್ರತಿಯೊಬ್ಬ ಕಲಾವಿದನೂ ಬಂಡಾಯಗಾರನೇ ಎಂಬೊಂದು ಮಾತಿದೆ. ಆದರೆ ಬಂಡಾಯ ಎನ್ನುವ ಶಬ್ದಕ್ಕಿರುವ ಚಾರಿತ್ರಿಕ ಅರ್ಥದ ಹಿನ್ನೆಲೆಯಲ್ಲಿ ಈ ಮಾತು ಎಷ್ಟರಮಟ್ಟಿಗೆ ನಿಜ ? ಇಂತಹ ಮಾತುಗಳು ಒಂದುಕಡೆ ಸೃಜನಶೀಲತೆಯ ಗಾಂಭೀರ್ಯಕ್ಕೂ ಇನ್ನೊಂದು ಕಡೆ ಬಂಡಾಯ ಶಬ್ದದ ನಿರ್ಣಾಯಕತೆಗೂ ಧಕ್ಕೆ ತರಬಲ್ಲವಲ್ಲವೇ ? ಕಾರಂತರು ಈ ಬಗ್ಗೆ ಇಲ್ಲಿ ಯೋಚಿಸಿದ್ದಾರೆ. –ಸಂ.)

ಕನ್ನಡದಲ್ಲಿ ಬಂಡಾಯ ಎನ್ನುವ ಮಾತನ್ನು ಜನರು ತಮ್ಮನ್ನು ಆಳುವ ಪ್ರಬಲರಾದ ಅರಸರ ಮೇಲೆ ಅಥವಾ ಮತ ಧರ್ಮಗಳ ಗುರುಗಳ ಮೇಲೆ ಮುನಿಸುಗೊಂಡು ನಡೆಯಿಸುವ ಪ್ರತಿಕ್ರಿಯೆಗಳ ವಿಷಯದಲ್ಲಿ ಬಳಸುತ್ತಾರೆ. ಆದರೂ ಇದು ಒಬ್ಬೊಬ್ಬರೆ ಮಾಡುವ ಪ್ರತಿಭಟನೆಯಲ್ಲ. ಸಾಮೂಹಿಕ ಪ್ರತಿಭಟನೆ, ಈತನಕ ನಡೆದು ಬಂದ ನಿರ್ಬಂಧಗಳನ್ನು ಕಳಚಿಕೊಳ್ಳುವ ಉದ್ದೇಶದಿಂದಲೇ ನಡೆದಂಥ ನಡವಳಿಕೆಯ ಪರಿವರ್ತನೆ ಅರ್ಥಾತ್ ಅದೊಂದು ದಂಗೆ. ಪರಸ್ಪರ ವಿರುದ್ಧ ಭಾವ ದ್ವೇಷಗಳಿಗೆ ಕಾರಣವಾದ ಅಥವಾ ಹಳೆಯದನ್ನು ತುಳಿದು ಓಡಿಸಿ ಹೊಸ ಆಡಳಿತೆಯ ಗುರಿಯನ್ನು ಸಾಧಿಸುವ ಸಾಮೂಹಿಕ ಪ್ರಯತ್ನ ಅದು. ಫ್ರಾನ್ಸಿನ ಮಹಾಕ್ರಾಂತಿ. ರಶ್ಯಾದ ಬೊಲ್ಶೆವಿಕ್ ಕ್ರಾಂತಿ ಇಂಥವು, ಆ ಮಾದರಿಯವು. ಇದು ಆಡಳಿತೆಯಲ್ಲಾಗಲಿ ಜನತೆಯ ಮನೋಧರ್ಮದಲ್ಲಾಗಲಿ ನಡೆಯುವ ಕ್ರಮಾಗತ, ದೀರ್ಘಾವಧಿ ಸಮಯ ಹಿಡಿಯುವ ಒತ್ತಾಯದ ಬದಲಾವಣೆ ಅಲ್ಲ. ಪರಿವರ್ತನೆಗೆ ಕಾರಣರಾದ ಜನಗಳಲ್ಲಿ ಘರ್ಷಣೆ, ದ್ವೇಷ ಹುಟ್ಟಿಸುವ ಯುದ್ಧಗಳಲ್ಲ. ಸೃಜನಶೀಲರೆಲ್ಲ ಬಂಡಾಯಗಾರರು ಎಂಬ ಶಬ್ದ ಯಾವುದೇ ತೆರೆನ ಬದಲಾವಣೆಗೆ ಹೇಳಬಹುದಾದ ಪದವಲ್ಲ. ಆ ಪರಿವರ್ತನೆಗೆ ಭಾಗಿಯಾದವರ ನಡುವೆ ಯುದ್ಧವಿಲ್ಲ. ಯಾವತ್ತು ಕಲಾವಿದರು ತಮ್ಮ ಹಿಂದಿನ ಪರಂಪರೆಯನ್ನು ಬಿಡದೆ ವಿಷಯಗಳ ದೃಷ್ಟಿಯಿಂದ, ಮಾಧ್ಯಮದ ದೃಷ್ಟಿಯಿಂದ ಯಾವ ಬದಲಾವಣೆಯನ್ನೂ ಮಾಡದೆಯೇ ನಾಟಕ ಬರೆದದ್ದುಂಟು, ಚಿತ್ರ ಬರೆದದ್ದುಂಟು, ಹಾಡನ್ನು ಹಾಡಿದ್ದುಂಟು. ಮೊದಲಿಗೆ ಅಂಥ ಕೆಲಸವನ್ನು ' ಸೃಜನಶೀಲತೆ ' ಎಂದು ಕರೆಯಲು ಬರಲಾರದು. ಯಾವುದೇ ಚಿತ್ರಕಾರ ಅಥವಾ

ಶಿಲ್ಪ ನಾಟಕಕಾರ ಅಥವಾ ನರ್ತಕ, ಗಾಯಕ ನಿರ್ಮಿಸುವ ಸೃಷ್ಟಿ ಸಂಪ್ರದಾಯದ ಕೇವಲ ಅನುಕರಣೆಯಿಂದ, ಅಭ್ಯಾಸದಿಂದ ನಡೆದದ್ದಾರೆ ಅದು ಸೃಜನಶೀಲ ವಸ್ತು ಆಗಿರಬೇಕಾಗಿಲ್ಲ. ಅದು ಸೃಜನಶೀಲ ಎನಿಸಬೇಕಾದರೆ ಒಂದು ದೃಷ್ಟಿಯಿಂದ ಆ ಕಲೆಗೆ ಬಳಸುವ ಮಾಧ್ಯಮ ಬೇರೆಯೇ ಇನ್ನೊಂದು ರೂಪ ತಾಳಬೇಕು, ಪರಿಸರ ಬೇರೆಯೇ ರೂಪ ತಾಳಬೇಕು, ವಿಷಯ ಹಿಂದಿನವರು ಯೋಚಿಸದಂಥ ಹೊಸ ವಿಷಯವೇ ಆಗಿರಬೇಕು,

ಯುರೋಪಿನಲ್ಲಿ ಕ್ರಿಸ್ತನ ಜೀವನವನ್ನು ಕುರಿತು ಹೆಚ್ಚು ಕಡಿಮೆ 18-20 ಶತಮಾನಗಳ ತನಕವೂ ಅನೇಕ ಚಿತ್ರಕಾರರು ಸಮಕಾಲೀನರಲ್ಲದ ಮುಂದಿನ ಜನರು ರಚಿಸುತ್ತಲೆ ಬಂದಿದ್ದಾರೆ. ಅವರಲ್ಲಿ ಹೆಚ್ಚಿನವರು ಕ್ರಿಸ್ತನನ್ನೂ, ಕ್ರೈಸ್ತ ಧರ್ಮವನ್ನೂ ಕುರಿತ ನಂಬಿಕೆ ತಾಳಿದವರು ಅವರು ತಮ್ಮ ನಂಬಿಕೆಗೆ ಗುರಿಯಾದ ಕ್ರಿಸ್ತನನ್ನು, ಮೇರಿಯನ್ನು, ಕ್ರೈಸ್ತನ ಪುರಾಣಗಳನ್ನು, ಕ್ರೈಸ್ತ ಸಂತರನ್ನು ಕುರಿತು ಚಿತ್ರಗಳನ್ನು ಬರೆದಿದ್ದಾರೆ. ಈ ಕೆಲಸದಲ್ಲಿ ' ಚಿತ್ರ ಮಾಧ್ಯಮ ' ಗಳ ಬದಲಾವಣೆಯೂ ಆಗಿವೆ. ಅದರಿಂದ ಚಿತ್ರ ವಸ್ತು ಬದಲಾದದ್ದೂ ಉಂಟು. ಆಗದಿದ್ದದ್ದೂ ಉಂಟು, ಹಲಗೆಗಳ ಮೇಲೆ ತೈಲ ಚಿತ್ರ ಬರೆದಿದ್ದಾರೆ. ತೈಲ ರಹಿತವಾದ ಅಂಟು ಮತ್ತು ಬಣ್ಣದ ಪುಡಿಗಳಿಂದ ಬರೆದಿದ್ದಾರೆ. ಈ ದೃಷ್ಟಿಯಿಂದ ಬೆಡಗನ್ನೋ ವರ್ಣ ವೈವಿಧ್ಯವನ್ನೋ ತೋರಿಸುವ ವಿಚಾರದಲ್ಲಿ ಬದಲಾವಣೆ ನಡೆದಿದೆ, ಇಂಥ ಮಾಧ್ಯಮಗಳನ್ನು ಬಿಟ್ಟು ಬಣ್ಣ ಬಣ್ಣದ ಪಿಂಗಾಣಿ ಚೂರುಗಳನ್ನು ಜೋಡಿಸಿ ಒಂದಕ್ಕೊಂದನ್ನ ಅಂಟಿಸಿ ಮೊಸಾಯಿಕ್ ಚಿತ್ರ ಬರೆದಿದ್ದಾರೆ ಪಿಂಗಾಣಿ ಚೂರುಗಳ ಸ್ವರೂಪವೇ ಬೇರೆ. ಆದುದರಿಂದ ಚಿತ್ರಣಕ್ಕೆ ವಸ್ತುಗಳು ಅನಿವಾರ್ಯವಾಗಿ ಚಿತ್ರ ನಿರ್ಮಾಣದ ರೀತಿಯನ್ನೇ ಬದಲಿಸಿದೆ. ಯಾವುದೋ ಒಂದು ದೃಷ್ಟಿಯಿಂದ ಇದು ಕ್ರಾಂತಿ ಚಿತ್ರ ಮಾಧ್ಯಮದ ಕ್ರಾಂತಿ ! ಆದರೆ ಅಂಥ ಬದಲಾವಣೆಯನ್ನು ಯಾವುದೇ ದೃಷ್ಟಿಯಿಂದ 'ಬಂಡಾಯ' ಎಂದು ಕರೆಯಲು ಬರಲಾರದು. ಆ ಹಿಂದಿನ ಕಾಲದಲ್ಲಿ ಯೇಸುಕ್ರಿಸ್ತನ ಚಿತ್ರವನ್ನು ಯಾವ ಮಾಧ್ಯಮದಿಂದ ತಯಾರಿಸಿದ್ದರೂ ಅವುಗಳ ಅಂದಚೆಂದದಲ್ಲಿ ವ್ಯತ್ಯಾಸ ಬಂದೀತೇ ಹೊರತು 'ಚಿತ್ರ ವಸ್ತು'ವಿನಲ್ಲಿ ಬದಲಾವಣೆ ಆಗಿಲ್ಲ, ಎಲ್ಲರೂ ಕ್ರಿಸ್ತನ ಚಿತ್ರ ಬರೆದವರೇ. ಬಳಸಿದ ಬಣ್ಣದ ಪುಡಿ, ತೈಲವರ್ಣ, ಬಣ್ಣದ ಪಿಂಗಾಣಿ ಚೂರುಗಳು_ಇವುಗಳಿಂದ ಚಿತ್ರದ ಸೊಬಗೋ, ಪರಿಣಾಮವೋ ಬೇರೆಯಾದದ್ದುಂಟು. ಅವನ್ನು ಯಾರೂ 'ಕ್ರಾಂತಿ'ಯೆಂದು ಕರೆದದ್ದಿಲ್ಲ, ಇದು ಕಲಾವಿದ ತನ್ನ ಅನುಕೂಲತೆಗಾಗಿ ಮಾಡಿಕೊಂಡ ಮಾಧ್ಯಮದ ಬದಲಾವಣೆ. ತಮ್ಮ ಸಮಕಾಲೀನ ಚಿತ್ರಕಾರರೆಲ್ಲರೂ ಚಿತ್ರವಸ್ತುವಾಗಿ ಕೇವಲ ಕ್ರಿಸ್ತ ಪುರಾಣಗಳನ್ನೇ ಎತ್ತಿಕೊಂಡಾಗ, ಆ ವಸ್ತುಗಳು ಹಳಸಿದಂತೆ ಕಾಣಿಸಿ, ಅವನ್ನು ಬಿಟ್ಟೇಬಿಡುವ ಪರಿಪಾಠ ಬಂದಾಗ, ಕ್ರಿಸ್ತನನ್ನು ವಿಷಯವಾಗಿ ಆರಿಸದೆ ನಮ್ಮ ನಿಮ್ಮಂತಿರುವ ಮನುಷ್ಯರ

ಚಿತ್ರಗಳನ್ನು ಬರೆದಾಗ, ಆ ಚಿತ್ರ ವಸ್ತುಗಳ ಕಡೆಗೆ ನಮಗೆ ಇರುವ ತೀವ್ರ ಆದರ ಅನಾದರಗಳ ದೃಷ್ಟಿಯಿಂದ ಅದು ಮನೋಭಾವದ ಕ್ರಾಂತಿ ಎಂಬುದಾಗಿ ಹೇಳ ಬಹುದು. ಅದು ನಿಜವಾದ ಕ್ರಾಂತಿ ಅನಿಸಬೇಕಾದರೆ ನಾವು ದೇವರ ಚಿತ್ರಗಳನ್ನು ಬರೆಯಬೇಕು ಅಥವಾ ಮಹಾತ್ಮರ ಚಿತ್ರಗಳನ್ನು ಮಾತ್ರ ಬರೆಯಬೇಕೇ ಹೊರತು ಜನಸಾಮಾನ್ಯರ ಚಿತ್ರವನ್ನು ಬರೆಯಲೇ ಕೂಡದು ಎಂದಾಗ ? ಹೀಗೆ ರೂಢಿಗೊಂಡು ಬಂದ ಉದ್ದೇಶದ ರೀತಿಯ ಸಾಧುತ್ವವನ್ನು ಪ್ರಶ್ನಿಸಿ ಚಿತ್ರ ಬರೆಯತೊಡಗಿದಾಗ ಅದು ಮನೋಭಾವದ ಕ್ರಾಂತಿಯಾಗುತ್ತದೆ. ಯಾವತ್ತು ಪ್ರಜಾವರ್ಗ ಅರಸರನ್ನು ಒಪ್ಪಿಕೊಂಡು ಪೂಜಿಸುವ, ಕಾಲದಲ್ಲಿ, 'ಪ್ರಜೆಗಳೇ ದೊರೆಗಳು' ಎಂದು ಸ್ಥಾಪಿಸಲು ಹೊರಟರೆ ಅದು ನಿಜವಾದ ಕ್ರಾಂತಿ. ಈ ವಿಷಯವನ್ನು ಹೆಚ್ಚಿಗೆ ಬೆಳೆಸದೆ ನಾನೇ ಮಾಡಿದ ಯಕ್ಷಗಾನ ಪ್ರಯೋಗಗಳ ವಿಚಾರದಲ್ಲಿ ನಡೆಯಿಸಿದ ಕೆಲಸ ಏನು, ಅದು ಬಂಡಾಯವೇ-ಎಂಬ ವಿಚಾರ ಹೇಳುತ್ತೇನೆ. ನನ್ನದು ಮಾಮೂಲಿ ಸಂಪ್ರದಾಯ ವನ್ನು ಬಿಟ್ಟ ಒಂದು ದಾರಿ. ಪರಂಪರೆಯಿಂದ ಬಂದ ಕೆಲವು ಮಾಧ್ಯಮಗಳನ್ನು ಬಿಟ್ಟು, ಕೆಲವು ವಾದ್ಯಗಳನ್ನು ಬಿಟ್ಟು ಹೊಸತನ್ನು ಸೇರಿಸಿದ ಇನ್ನೊಂದೇ ಬಗೆಯಿಂದ ಯಕ್ಷಗಾನ ಪದ್ಧತಿಯ ವಸ್ತು ವಿನ್ಯಾಸದಲ್ಲಿ ತೋರಿಸಿದ ರಂಗಭೂಮಿಯ ರೀತಿ ಅದು.

ಯಕ್ಷಗಾನ ಕಥಾ ನಿರೂಪಣೆಯನ್ನು ಭಾಗವತ ಹಾಡುಗಳ ಮೂಲಕ ಮಾಡು ತ್ತಾನೆ. ಆತ ಶ್ರುತಿ, ಮದ್ದಲೆ, ಚಂಡೆಗಳ ಲಯಕ್ಕೆ ಹಾಡುತ್ತಾನೆ. ಅವನ ಪಾತ್ರ ಗಳು ಕುಣಿಯುತ್ತವೆ. ಕುಣಿತದ ಮೂಲಕ ಅವರು ಯಾವ ಭಾವವನ್ನು ಬಿಂಬಿಸು ವುದಿಲ್ಲ. ಆ ರಂಗಭೂಮಿಯಲ್ಲಿ ವಸ್ತುವಿನ ವಿಷಯಗಳ ನಿರೂಪಣೆಯ ಪ್ರಧಾನ ಮಾಧ್ಯಮ-ಮಾತು, ಭಾಷೆ. ಆ ಭಾಷೆಯನ್ನು ಕಂಠಪಾಠ ಮಾಡದೆಯೆ ಅಲ್ಲಿಯ ಪಾತ್ರಗಳು ನುಡಿಯುತ್ತವೆ.

ಇದರ ಕುಂದುಕೊರತೆಗಳೇನು ? ಇಲ್ಲಿ ಬಳಸಿದ ಮಾಧ್ಯಮಗಳು ಏನು ಕೆಲಸ ಮಾಡಿವೆ ? ಏನು ಕೆಲಸ ಮಾಡಿಲ್ಲ ? ಅವುಗಳಲ್ಲಿ ಪ್ರಯೋಜನವಿಲ್ಲದ್ದೆಷ್ಟು ? ಪ್ರಯೋಜನಕ್ಕೆ ಹಾನಿ ತಂದದ್ದಾವುವು ?-ಎಂಬ ಪ್ರಶ್ನೆಗಳೆಲ್ಲವೂ ಬರುತ್ತವೆ. ಕಲಾ ದೃಷ್ಟಿಯಿಂದ ಹಾಡುಗಳಲ್ಲಿ ಬರುವ ವಿಷಯಗಳನ್ನೇ ಸರಳಾನುವಾದ ಮಾಡಿ ಗದ್ಯ ದಲ್ಲಿ ತಿಳಿಸುವ ಅವಶ್ಯಕತೆ ಇದೆಯೇ ? ಇದು ವಿಷಯದ ಮರುಕಳಿಕೆ ಅಲ್ಲವೇ-ಎಂಬ ಪ್ರಶ್ನೆ ಬರುತ್ತದೆ. ಭಾಗವತ ಹಾಡುತ್ತಾನೆ. ಆ ಹಾಡುಗಳಿಗೆ ರಾಗ ತಾಳಗಳಿವೆ. ಅವಕ್ಕೆ ಚಂಡೆ ಮದ್ದಲೆ ನುಡಿಸುತ್ತಾರೆ. ಆತ ಲಯಬದ್ಧವಾಗಿ ಹಾಡಿದರೂ, ಹಾಡಿನ ಶಬ್ದಾರ್ಥಗಳಿಗೆ ಧ್ವನಿ ರೂಪದ ಶಕ್ತಿ ಒದಗಿಸಿದ್ದಾನೆಯೇ-ಎಂಬ ಪ್ರಶ್ನೆ ಬರುತ್ತದೆ. ಅವನದೇ ಹಿಮ್ಮೇಳ ಅವನನ್ನು ಅನುಸರಿಸುವ ಬದಲು, ತಾಳ ಲಯಗಳ ಗದ್ದಲ ಹುಟ್ಟಿಸಿ, ಆತನ ಹಾಡಿನ ಮಾತುಗಳ ಚೂರೂ ಒಂದೂ ತಿಳಿಯದಂತೆ ಮಾಡುವ ಕೋಲಾಹಲ ಸಾಧುವೇ ? ಇದು ಇನ್ನೂ ದೊಡ್ಡ ಪ್ರಶ್ನೆ. ಅವರ ಮಾತಿಗೆ ಅಭಿ

ನಯು ಇದೆಯೇ ? ಇದೊಂದು ಪ್ರಶ್ನೆ. ಪ್ರಸಂಗದಲ್ಲಿ ಬರುವ ವಿವಿಧ ರೀತಿಯ ಭಾವಗಳಿಗೆ ರಂಗಸ್ಥಳದಲ್ಲಿ ಹಾಕುವ ಹೆಜ್ಜೆಗಳಾಗಲಿ, ಚರ್ಮ ವಾದ್ಯಗಳು ನುಡಿಸುವ ಬಿಡ್ತಿಗೆಗಳಾಗಲಿ ಯಾವ ಪೋಷಣೆ ಕೊಡುತ್ತವೆ ? ಅನೇಕರ ಅಭಿಪ್ರಾಯದಂತೆ "ರಾಗ ರಸ, ಪದರಸವೇ ? ರಂಗಭೂಮಿಯಲ್ಲಿ ಹಾಡುವ ಹಾಡುಗಳ ಅರ್ಥವೇನು ? ಅಲ್ಲಿ ಇವಕ್ಕೆ ತಕ್ಕ ಕುಣಿತ ಇದೆಯೇ ? ಇಂಥ ವಿಷಯಗಳಲ್ಲಿ ಪದ್ಯ ಹೇಳಿದ ವಸ್ತುವನ್ನೇ ಇನ್ನೊಮ್ಮೆ ಗದ್ಯವೂ ಹೇಳಬೇಕೆ ? ವಿಷಯಕ್ಕೂ ಭಾವಕ್ಕೂ ಹೊಂದಿಕೆಯಿರದೆ, ಚರ್ಮವಾದ್ಯಗಳು ನುಡಿಯಬೇಕೆ ? ಇಂಥೆಲ್ಲ ಪ್ರಶ್ನೆಗಳು ಬಂದಾಗ ನಾನು ನನ್ನ ಕಣ್ಮುಂದೆ ಕಲೆಯನ್ನು ಕುರಿತ ಸ್ಪಷ್ಟ ಕಲ್ಪನೆಗಳನ್ನು ಇರಿಸಿಕೊಳ್ಳದೆ ಹೋದರೆ–ಅವು ಒಂದು ಸೃಜನಶೀಲ ಕಲೆ ಆಗಲಾರದು. ಪರಂಪರೆಯ ಅನುಕರಣೆ ಸೃಜನಶೀಲತೆ ಅಲ್ಲ. ನಮ್ಮ ಮುಂದಿರುವ ವಿವಿಧ ಮಾಧ್ಯಮಗಳನ್ನು ಕಣ್ಮುಂದಿರುವ ವಿಷಯಕ್ಕೆ ತಕ್ಕಂತೆ ಹೊಂದಿಸಿ, ನಿರೂಪಿಸುವ ಸಾಧು ಪ್ರಯತ್ನ ಸೃಜನಶೀಲತೆ. ಕಣ್ಮುಂದಿರುವ ಹಲವಾರು ವಸ್ತುಗಳಲ್ಲಿ ಯಾವುದು ಎಷ್ಟು ಬೇಕು–ಯಾವುದು ಯಾವ ರೀತಿಯಲ್ಲಿ ಬೇಕು ಎಂಬ ಪ್ರಶ್ನೆಗಳು ಆಗ ಹುಟ್ಟುತ್ತವೆ. ಮಾಧ್ಯಮಕ್ಕೂ, ಆ ಮಾಧ್ಯಮ ಆರಿಸಿ ಕೊಂಡ ವಸ್ತುವಿಗೂ ಅನ್ಯೋನ್ಯ ಸಂಬಂಧ ಇರಲೇಬೇಕು. ಸುಖ ದುಃಖಾದಿ ಭಾವಗಳಿಗೂ ನುಡಿಸುವ ವಾದ್ಯಮೇಳಕ್ಕೂ ಸಂಬಂಧವಿಲ್ಲದೆ ಹೋದರೆ, ಅದು ಎಷ್ಟೇ ಶಾಸ್ತ್ರೋಕ್ತ ವಸ್ತುವಾದರೂ, 'ಕಲಾ ಮಾಧ್ಯಮ ಎಂದೆನಿಸಿಕೊಳ್ಳಲಾರದು. ಪಾತ್ರ ಗಳ ಮಾತು–ಪಾಂಡಿತ್ಯಪೂರ್ಣವಾಗಿರಬಹುದು. ಭಾಗವತರ ಕಂಠ ಇಂಪಾಗಿದ್ದು ಹಾಡುಗಾರಿಕೆ ಸಾಹಿತ್ಯಬದ್ಧವಲ್ಲದೆ ಹೋಗಿ, ಬರಿಯ 'ತನನಾನ ನನನಾನ' ಆಗಿ ಹೊಮ್ಮಿದರೂ, ಅದು ಸೃಜನಶೀಲ ಕಲೆ ಆಗಲಾರದು. ಈ ಎಲ್ಲ ಕಾರಣಗಳಿಂದ ಯಾವ ಮಾಧ್ಯಮ ಎಷ್ಟು ಬೇಕು, ಎಲ್ಲಿ ಬೇಕು, ಹೇಗೆ ಬೇಕು–ಎಂದು ತೋರಿಸುವ ಪ್ರಯತ್ನ ನನ್ನದಾಗಿತ್ತು. ಇಂಥ ಪ್ರಯತ್ನ 'ಬಂಡಾಯ'ವಾಗದು. ಮಾಡಬೇಕಾದ ಸಾಂಪ್ರದಾಯಿಕ ಕೆಲಸವನ್ನು ಮಾಡದೆಯೆ, ಇನ್ನೇನನ್ನೋ ಮಾಡುತ್ತಿದ್ದಾರೆ–ಎಂದು ತಿಳಿಸುವ ಪ್ರಯತ್ನ ಅದು. ಇತರರು ಸಾಂಪ್ರದಾಯಿಕವಾಗಿ ಹಾಡುವುದನ್ನೂ, ಆಡುವುದನ್ನೂ ಖಂಡಿಸಿ, ಅವನ್ನು ಬಿಟ್ಟುಬಿಡಿ ಎಂದು ಹೇಳಲು ಹೊರಟ ಪ್ರಯತ್ನ ಅದಲ್ಲ. ಯಕ್ಷಗಾನ ಕಲಾಮಾಧ್ಯಮದ ಸಾಧ್ಯತೆಗಳನ್ನು ಹೆಚ್ಚಿಸಿ ತೋರಿಸುವ ಪ್ರಯತ್ನ ನನ್ನದು. ಕಥಾ ನಿರೂಪಣೆಗೂ ಮತ್ತು ಅದಕ್ಕೆ ಹೊಂದಿಕೊಂಡಿರುವ ಭಾವಗಳಿಗೂ ಪುಷ್ಟಿ ಕೊಡುವ ಪ್ರಯತ್ನ ಅದು. 'ಹಾಡನ್ನು ರಸವಾಗಿ ಮಾಡಲು ಮಾತು ಹೊತ್ತ ಕಸ ಅದಲ್ಲ'.

ಇಲ್ಲಿ ಸಾಂಪ್ರದಾಯಕ ರೀತಿಗಳಲ್ಲಿ ಮಾಧ್ಯಮದ ಮರುಕಳಿಕೆ ಇದೆ. ಹಾಡಿನ ವಸ್ತುವನ್ನೇ ಬೇಡವಾದಷ್ಟು ಮಾತಿನ ಮೂಲಕ ಹಿಗ್ಗಿಸುವ ರೂಢಿ ಇದೆ. ಹಾಡು ಪ್ರಕಟಿಸಬಲ್ಲ ಭಾವತೀಕ್ಷ್ಣತೆಯನ್ನು ಎಳೆದೆಳೆದು ಉದ್ದ ಮಾಡಿ, ಅರ್ಥವನ್ನು ವಿರೂಪ

ಗೊಳಿಸುವ ಕೆಲಸವೂ ನಡೆಯುತ್ತದೆ. ಹೇಳಬೇಕಾದುದಕ್ಕಿಂತ ಹೆಚ್ಚು ಹೇಳಿ, ಬೇಸರ ಬರಿಸುವ ಪ್ರಯತ್ನವೂ ಇದೆ. ನಾಟಕದ ವಿಷಯುವನ್ನೇ ಮರೆತು, ತಾಳ ಲಯಗಳ ವೈಖರಿಯನ್ನೇ ತೋರಿಸುವ ವಾದ್ಯಕಾರರ ಸ್ವಚ್ಛಂದ ವರ್ತನೆಯಿದೆ. ಬಣ್ಣಗಾರಿಕೆ, ವೇಷಗಾರಿಕೆಗಳಲ್ಲಿ ಅಲ್ಲಿನ ದೃಶ್ಯಬಿಂಬಗಳ ವರ್ಣ ಸಾಮರಸ್ಯ ಹೇಗಿರಬೇಕು ಎಂಬ ಅರಿವಿಲ್ಲದೆಯೇ ಬಣ್ಣ. ಬೇಗಡೆಗಳ ವಿಲಾಸಕ್ಕೆ ಮಾರುಹೋದ ಅಂಥ ಪ್ರವೃತ್ತಿ ಇದೆ. ನನ್ನ ಪ್ರಯತ್ನದಲ್ಲಿ–ಕಲಾ ಮಾಧ್ಯಮದ ಸಾಧ್ಯತೆಗಳು ಯಾವೆಲ್ಲ ರೀತಿಗಳಿಂದ ಬೆಳೆಯಿಸಬಹುದು ಎಂಬ ದೃಷ್ಟಿಯಿದೆ. ಅದನ್ನು ನೋಡಿದವರ ಮನಸ್ಸಿನಲ್ಲಿ ಸ್ವಾಭಾವಿಕವಾಗಿಯೇ ಸಾಂಪ್ರದಾಯಿಕ ಯಕ್ಷಗಾನ ಮಾಧ್ಯಮ ತಾನು ಮಾಡಲು ಹೊರಟ ಕಲಾಮಾಧ್ಯಮಕ್ಕೆ ಯಾವ ಸೇವೆ ಸಲ್ಲಿಸಿದೆ ಯಾವುದನ್ನು ಸಲ್ಲಿಸಿಲ್ಲ. ಯಾವುದರಿಂದ ಅದರ ಉದ್ದೇಶ ಕೆಟ್ಟಿದೆ ಎಂಬೆಲ್ಲ ಪ್ರಶ್ನೆಗಳು ಮುಖ್ಯವೆನಿಸುತ್ತವೆ.

ರೂಢಿಯ ಸಾಂಪ್ರದಾಯಿಕ ಯಕ್ಷಗಾನವನ್ನು ಕಂಡು ಕಂಡು ನುರಿತ ಜನರಿಗೆ, ಅವರು ರೂಢಿಗೊಂಡ ರೀತಿಗಳನ್ನು ನಾನು ಒದಗಿಸಲಿಲ್ಲ ಎನಿಸೀತು. ಯಾವುದೇ ಕಲಾವಿದ ತನ್ನ ಕಲ್ಪನೆಗಳಿಗೆ ತಾನು ಹೊಣೆ. ಅದನ್ನು ಜನರಿಗೆ ತಿಳಿಸುವ ಹೊಣೆ ಅವನದು. ಜನತೆ ಬಯಸುವ ಅಥವಾ ಬೇಡುವ ಸಾಮಾನುಗಳ ಅಂಗಡಿಕಾರ ಅವನಲ್ಲ. ರೂಢಿಯ ಚಟಗಳಿಗೆ ತುತ್ತನ್ನು ಒದಗಿಸುವ ಕುರುಡ ಅವನಲ್ಲ. ಹೀಗಾಗಿ ಕಾಲಕಾಲದಲ್ಲಿ ಜಗತ್ತಿನ ಉದ್ದಕ್ಕೂ ಸ್ಪಷ್ಟ ಉದ್ದೇಶಗಳಿಗೆ ಸೀಮಿತವಾಗಿದ್ದ ಸಾಂಪ್ರದಾಯಿಕ ಕಲೆಗಳ ವಿಚಾರದಲ್ಲಿ ಒಂದೊಂದು ದೇಶದ ಜನರು ತಂತಮ್ಮಲ್ಲಿನ ಸೃಜನಶೀಲ ಕಲಾವಿದರಿಂದ ಆಗಾಗ ಹೊಸ ದೃಷ್ಟಿಗಳನ್ನು ಪಡೆದದ್ದುಂಟು ; ಹೊಸ ದಾರಿಯಲ್ಲಿ ಸರಿದದ್ದುಂಟು, ಹಲವರು ಕಂಡೂ. ಕೇಳಿಯೂ ಕುರುಡಾಗಿ ನಡೆದದ್ದುಂಟು. ಇಂಥ ಬದಲಾವಣೆಗಳ ದೃಷ್ಟಿಯಿಂದಲೂ ಇದೊಂದು ಬಂಡಾಯ ಎಂಬ ಪದವನ್ನು ನಾನು ನಡೆಯಿಸುತ್ತಿರುವ ಕೆಲಸಕ್ಕೆ ಎಂದೂ ಬಳಸಲಾರೆ. ಸಾಂಪ್ರದಾಯಿಕ ರೀತಿಗಳಿಗೆ, ದೃಷ್ಟಿಗಳಿಗೆ, ನಾನು ಶರಣು ಹೋಗಿಲ್ಲ, ನನ್ನ ದೃಷ್ಟಿ ಅಷ್ಟು ಕುರುಡಲ್ಲ. ಪರಂಪರೆಯ ಯಕ್ಷಗಾನದಲ್ಲಿ ಉಳಿದಿರುವ ಅಂಶಗಳನ್ನು ಕಂಡೇ, ಆ ಮಾಧ್ಯಮದಲ್ಲಿ ಅಡಕವಾಗಿರುವ ಶಕ್ತಿ ಎಷ್ಟೆಂಥದು ತಿಳಿದೇ, ಕೆಲಸಕ್ಕೆ ತೊಡಗಿದವನು ನಾನು. ಇಂಥ ಯಾವುದೇ ಕೆಲಸ–ಇನ್ನಾವುದೇ ಕ್ಷೇತ್ರದಲ್ಲಿ ಆಗಬೇಕಾದರೂ ಕೂಡ, ನಾವು ಬಳಸುತ್ತಿರುವ ಮಾಧ್ಯಮಗಳ ಮೇಲೆ ನಮಗೆ ಹಿಡಿತ ಬೇಕು. ಅದನ್ನು ಕಾಣುವಾಗ, ಕೇಳುವಾಗ ಯಾಕಾಗಿ ಇಲ್ಲಿ ನಮ್ಮ ಧ್ವನಿ ಹೊರಟಿತು, ಹೊರಡಬೇಕು–ಎಂಬ ಚಿಂತನೆ ತೊಡಗಬೇಕು. ಹಾಗೆ ಚಿಂತಿಸುವ ಕಾಲಕ್ಕೆ ಕೆಲಕೆಲವು ಕಲಾವಿದರಿಗೆ ಈತನಕ ಜನರು ಅನುಸರಿಸಿದ ಎಷ್ಟೋ ವಿಧಾನಗಳು–ಅತೃಪ್ತಿಯನ್ನು ಕೊಡಬಹುದು. ಅವರಿಗೆ ತೃಪ್ತಿ ಬರಲು 'ನಾವೇನು ಮಾಡಬಹುದು' ಎಂಬುದು ಹೊಳೆದು, ಅದನ್ನು ಅವರು ಕಾರ್ಯರೂಪಕ್ಕೆ ತಂದಾಗ ಆ ಸೃಷ್ಟಿಯು ಸಾಂಪ್ರದಾಯಿಕವಾಗಿ, ಯಾಂತ್ರಿಕವಾಗಿ

ಪರಿದುಬಂದ ದೃಷ್ಟಿಗಳಿಗೆ ಹೋಲುವೆ ಇಲ್ಲದೇ ಹೋಗಬಹುದು. ಅನೇಕ ವಿಷಯುಗಳಲ್ಲಿ ಅದು ವಿಭಿನ್ನವಾಗಿ ಕಾಣಿಸಬಹುದು. ಭಾಷೆಯಲ್ಲೂ ಜೀವನದ ಅನೇಕ ಕ್ರಮುಗಳನ್ನು ಉದ್ದೇಶಪೂರ್ವಕವಾಗಿ ಸಾಧಿಸುವ ಇಂಥ ಎಷ್ಟೆಷ್ಟೋ ಬದಲಾವಣೆಗಳು ಆಗಿವೆ. ಸಾಂಪ್ರದಾಯಿಕವಾಗಿ ಹರಿದುಬಂದ ರೀತಿ ಮತ್ತು ಬಗೆಗಳಿಗೂ ಹೊಸತಾಗಿ ಸಾಧಿಸಿದ ರೀತಿ ಮತ್ತು ಬಗೆಗಳಿಗೂ–ಅಂತರ ಹೆಚ್ಚಾದಂತೆ, ನಡೆದ ಬದಲಾವಣೆಯನ್ನು ತಿಳಿಸಲು ನಾವು ಬೇರೆ ಬೇರೆ ಶಬ್ದಗಳನ್ನು ಬಳಸಬೇಕಾದೀತು. ಕಲಾದೃಷ್ಟಿಯಿಂದ ಹೇಳುವುದಾದರೆ ಅವನ್ನು 'ಬಂಡಾಯ' ಇಲ್ಲವೆ 'ಕ್ರಾಂತಿ', 'ದಂಗೆ' ಎಂಬ ಮಾತುಗಳಿಗಿಂತ ಕಲಾವಿದನ ಮನೋಧರ್ಮದಲ್ಲಿ ಉಂಟಾದ ತಿಳಿವು ಮತ್ತು ಒತ್ತಡಗಳಿಗೆ ಗುರಿಯಾದ ವಿಕಾಸ ಎಂಬ ಪದವನ್ನು ಬಳಸಬೇಕು. ಅದು ಬಂಡಾಯವೂ ಭಂಡಾಯವೂ ಅಲ್ಲ. ಬಂಡಾಯ ಹಗೆಯ ಮೇಲೆ, ಪ್ರತಿಸ್ಪರ್ಧಿಯ ಮೇಲೆ ಹೂಡುವ ಯುದ್ಧ. ಇದು ಹಾಗಿಲ್ಲ. ಅವು ನಮ್ಮ ಮಧ್ಯದಲ್ಲಿ ಕಂಡುಬಂದ ಕೊರತೆಗಳನ್ನು ಕಿತ್ತೆಸೆದು ಅಥವಾ ಹೊಸ ಸಾಧ್ಯತೆಗಳನ್ನು ಪ್ರಕಟಪಡಿಸಲು ಶ್ರಮಿಸುವ ಪ್ರಯತ್ನಗಳು. ಅಂಥ ಅಂಶಗಳು ಸೃಜಿಸುವ ಅಂಶಗಳು.

❀ ❀ ❀

ಪರಿಸರ ಮತ್ತು ನಾವು

⊕ ಡಾ॥ ಕೃಷ್ಣಾನಂದ ಕಾಮತ್

ಪರಿಸರ ಜ್ಞಾನ ಆತ್ಯಾಧುನಿಕರಿಗಷ್ಟೇ ಸೀಮಿತವಾದುದಲ್ಲ. ಸಕಲ ಕ್ರಿಮಿ, ಕೀಟ, ಪಶು–ಪಕ್ಷಿಗಳಿಗೆ ಕೂಡ ಈ ಅರಿವು ಇರುವುದರಿಂದಲೇ ಅವು ಯುಗ ಯುಗಾಂತರಗಳಿಂದ ಈ ಭೂಮಿಯ ಮೇಲೆ ಜೀವಿಸಲು ಸಾಧ್ಯವಾಗಿದೆ. ಅಮೀಬಾದಂತಹ ಕ್ಷುದ್ರ ಜೀವಿಗೂ ಅತಿ ಶೀತ, ಉಷ್ಣ, ಕ್ಷಾರಗಳಿರುವ ನೀರು ತ್ಯಾಜ್ಯವೆಂದು ಗೊತ್ತು. ವಿಷಮ ವಾತಾವರಣದಲ್ಲಿ ಅದು ನಿದ್ರಾವಸ್ಥೆ ಹೊಂದುತ್ತದೆ. ತಾಯಿ ಕೀಟಗಳಿಗೆ ಗೊತ್ತು. ತಮ್ಮ ಮರಿಗಳಿಗೆ ಎಂತಹ ಆಹಾರ ಬೇಕು ಎಂದು. ಅಂತೆಯೇ ಅದು ಸುಲಭವಾಗಿ ದೊರೆಯುವ ಎಡೆಯಲ್ಲಿಯೇ ಮೊಟ್ಟೆಗಳನ್ನಿಡುತ್ತವೆ. ಪರಪುಷ್ಟ ಜೀವಿಗಳು ತಮ್ಮ ಹಿತದ ದೃಷ್ಟಿಯಿಂದ ಆಶ್ರಯದಾತರ ವಂಶಾವಳಿ ನಿರ್ನಾಮವಾಗದಂತೆ ಮುನ್ನೆಚ್ಚರಿಕೆ ವಹಿಸುತ್ತವೆ. ತಮ್ಮ ಸಂತಾನೋದ್ಧಾರದಲ್ಲಿ ಆಸಕ್ತಿಯಿರುವ

ಕಪ್ಪೆಗಳು ಆರ್ದ್ರತೆ ಇರುವಲ್ಲಿ ಮೊಟ್ಟೆಗಳನ್ನಿಟ್ಟರೆ ಕಡಲ ಆಮೆಗಳು ದಂಡೆಗೆ ಬಂದು ಮೊಟ್ಟೆಗಳನ್ನಿಟ್ಟು ಹೂತಿಡುವುವು. ಪಕ್ಷಿಗಳು ಗೂಡುಕಟ್ಟಿ, ಮೊಟ್ಟೆಗಳಿಗೆ ಕಾವು ಕೊಟ್ಟು ಗುಟುಕಿಟ್ಟು ಮರಿಗಳ ಲಾಲನೆ-ಪಾಲನೆ ಮಾಡುವವು. ಕಾಡಾನೆಗಳು ತಮ್ಮ ಮೇವಿಗೆ ಕೊರತೆಯಾಗದಂತೆ, ದೂರದೂರದ ಕಾಡುಗಳಿಗೆ ಪಯಣ ಬೆಳೆಸುತ್ತಿರುವವು ಕ್ರೌರ್ಯಕ್ಕೆ ಹೆಸರಾದ ಹುಲಿರಾಯನು ತನ್ನ ಹೊಟ್ಟೆ ತುಂಬಿತೆಂದರೆ, ಬೇರಾವ ಪ್ರಾಣಿಗಳ ಗೋಜಿಗೂ ಹೋಗುವುದಿಲ್ಲ. ಮಾನವನು ಮಾತ್ರ ಈ ಪ್ರಕೃತಿಯ ನೇಮಕ್ಕೆ ಅಪವಾದ !

ಪ್ರಾಣಿಕೋಟಿಯಲ್ಲಿಯೇ ಬುದ್ಧಿವುತ್ತೆಗೆ ಹೆಸರಾದ ಮಾನವನು, ಪ್ರಗತಿ ಪಥದಲ್ಲಿ ನಡೆದಿದ್ದಾನೆಯೇ ? ಇಲ್ಲವೇ ವಿನಾಶದ ದಾರಿಯಲ್ಲಿ ಸಾಗಿದ್ದಾನೆಯೇ ? ಎಂಬುದನ್ನು ಖಚಿತವಾಗಿ ಹೇಳಲಾಗದು. ಕಂಪ್ಯೂಟರ್, ಲೇಸರ್, ಸೆಟೆಲೈಟ್, ಬಾಹ್ಯಾಕಾಶದ ಉಡ್ಡಾಣಗಳಿಗೆ ಮಾರು ಹೋದವರು, ಮಾನವನು ಸೃಷ್ಟಿಕರ್ತ ಬ್ರಹ್ಮನನ್ನೂ ತಲೆತಗ್ಗಿಸುವಂತೆ ಮಾಡಿದ್ದಾನೆ ! ಎಂದು ಘಂಟಾಘೋಷವಾಗಿ ಸಾರು ತ್ತಲೇ ಬಂದಿದ್ದಾರೆ. ಸುರಾಪಾನ, ಮಾದಕ ಔಷಧ ಸೇವನೆ, ಏಯ್ಡ್ಸ್ ಪಿಡುಗು, ಕಿಕ್ಕಿರಿದ ಜನಜಂಗುಳಿ, ಕೊಲೆ, ಸುಲಿಗೆ, ದರೋಡೆ, ಅತ್ಯಾಚಾರ, ವ್ಯಭಿಚಾರಗಳನ್ನೇ ಹೆಚ್ಚಿನ ಲಕ್ಷ್ಯಕ್ಕೆ ತಂದುಕೊಳ್ಳುವವರು, ಕಲಿಯುಗ ಕೊನೆಗಾಣುವ ಮೊದಲೇ ಮಾನವ ಸಂತತಿ ನಿರ್ನಾಮವಾಗಿ ಹೋಗುವುದು ಖಂಡಿತ, ಎಂಬ ನಿರ್ಣಯಕ್ಕೆ ಬಂದಿದ್ದಾರೆ. ಆದರೆ ವಸ್ತುಸ್ಥಿತಿ ಅಷ್ಟು ನಿರಾಶಾದಾಯಕವಾಗಿರದಿದ್ದರೂ ಆಶಾದಾಯಕವಾಗಿಲ್ಲ. ಅವನು ತುಳಿಯುತ್ತಿರುವ ವಾಮಮಾರ್ಗವನ್ನು ತ್ಯಜಿಸಿ ಪರಿಸರದ ನಿಯಮಗಳನ್ನು ಚಾಚೂ ತಪ್ಪದೆ ಪಾಲಿಸಲಾರಂಭಿಸಿದರೆ, ಅವನು ಸಕಲ ಜೀವಕೋಟಿಯೊಂದಿಗೆ ನೆಮ್ಮದಿಯ ಬಾಳ್ವೆ ನಡೆಸಲು ಸಾಧ್ಯವಿದೆ. ತನ್ನನ್ನು ಪ್ರಶ್ನಿಸಲು, ಶಿಕ್ಷಿಸಲು ಪ್ರಕೃತಿಗೆ ಯಾವ ಅಧಿಕಾರವಿದೆ ? ಎಂದು ಜುಬದ ಕೋಳಿಯಂತೆ ಜಗಿದಾಡಿದರೆ, 'ವಿನಾಶಕಾಲೇ ವಿಪರೀತ ಬುದ್ಧಿ' ಎಂಬುದು ನಿಜವಾಗುತ್ತದೆ.

ನಮಗೆ ಸಾವಿರಾರು ಆಸೆಗಳು. ಇವನ್ನೆಲ್ಲಾ ಈಡೇರಿಸಲು ಪ್ರಕೃತಿಯನ್ನು ಸೂರೆ ಮಾಡಬೇಕಾಗುತ್ತದೆಂದು ಬಹುಸಂಖ್ಯಾತರಿಗೆ ಅರಿವಾಗುವದೇ ಇಲ್ಲ. ಕಾಲುಗಳನ್ನು ದಣಿಸುವ ಬದಲು ವಾಹನಗಳಲ್ಲಿ ಓಡಾಡುವ ಚಪಲ ನಮಗೆ. ಭೂಮಾತೆ ಕೋಟ್ಯಾಂತರ ವರ್ಷಗಳಿಂದ ಸಂಗ್ರಹಿಸಿಟ್ಟ ಪೆಟ್ರೋಲನ್ನು ಕೇವಲ ಎರಡು-ಮೂರು ದಶಕಗಳಲ್ಲಿಯೇ ಬರಿದು ಮಾಡಿದ ಶ್ರೇಯಸ್ಸು ನಮಗೆ ಸಲ್ಲುತ್ತದೆ. ಏಕಪ್ರಕಾರವಾಗಿ ಹೊಗೆ ಕಾರುವ ವಾಹನಗಳಿಂದಾಗಿ ಪರಿಸರವನ್ನೆಲ್ಲಾ ಕಲುಷಿತಗೊಳಿಸಿದ್ದೇವೆ, ಗೊಳಿಸುತ್ತಿದ್ದೇವೆ. ಇದರಿಂದ ಕ್ಷಯ, ಪ್ಲೂರಸಿ, ಕ್ಯಾನ್ಸರ್‌ಗಳಂತಹ ರೋಗಗಳು ಹರಡುತ್ತವೆ, ಎಂದು ಎಲ್ಲರಿಗೂ ಗೊತ್ತು. ಆದರೆ ಆರಾಮ-ವಿರಾಮಗಳ ಹಂಬಲ

ಬಿಡುವುದು ಬಿಗಿಯಾದ ಮಾತು. ಇದರಂತೆ ಕೋಟ್ಯಾಂತರ ವರ್ಷಗಳಿಂದ ಕೀಟಗಳು ನಮ್ಮೊಂದಿಗೆ ಬಾಳಿ ಬದುಕಿವೆ. ಆದರೆ ಆಧುನಿಕರಿಗೆ ಒಂದು ಜಿರಳೆ, ಒಂದು ಇರುವೆ ಕಂಡರೆ ವಾಕರಿಕೆ. ಅಂತೆಯೇ ಆ ಬಡಪಾಯಿಗಳ ಮೇಲೆ ವಿಷಕಾರಿ ರಾಸಾಯನಿಕ ದ್ರವ್ಯಗಳನ್ನು ಬಳಸಲೇಬೇಕು. ಪ್ರತಿ ದಿನ ಒಂದೆರಡು ಹುಳ-ಹುಪ್ಪಡಿಗಳು ನಮ್ಮ ಉದರ ಸೇರಿಕೊಂಡರೆ ಯಾವ ಹಾನಿಯೂ ಇಲ್ಲ. ಆದರೆ ಈ ಕೀಟನಾಶಕಗಳು ನೇರವಾಗಿ ಇಲ್ಲವೇ ಪರೋಕ್ಷವಾಗಿ ನಮ್ಮನ್ನು ಪಾತಾಳ ಲೋಕಕ್ಕೆ ಕಳಿಸುತ್ತಲೇ ಇರುತ್ತವೆ. ಇದು ನಾವು ಕಳೆದ ನಾಲ್ಕು ದಶಕಗಳಲ್ಲಿ ಸಾಧಿಸಿದ ಪ್ರಗತಿಯ ದ್ಯೋತಕವಿರಬಹುದೇ ?

ಮಾನವನ ಸಕಲ ಸಮಸ್ಯೆಗಳಿಗೂ, ಅವನು ಈ ಭೂಮಂಡಲವನ್ನು ತನ್ನ ಪೀಳಿಗೆಯಿಂದ ಕಿಕ್ಕಿರಿಸಿ ತುಂಬುವ ಯತ್ನದಿಂದಾಗಿ ಉತ್ಪನ್ನವಾದವುಗಳು. ಹೊಂಡ ಒಂದರ ಉದ್ದಗಲಳತೆ ಲಭ್ಯವಿರುವ ಆಹಾರವನ್ನವಲಂಬಿಸಿ ನಿರ್ದಿಷ್ಟ ಸಂಖ್ಯೆಯಲ್ಲಿ ಕಪ್ಪೆಗಳು ಬೆಳೆಯಬಲ್ಲವು. ಅಂತೆಯೇ ಕಪ್ಪೆಗಳ ಜೀವಿಸಂಖ್ಯೆ ಹೆಚ್ಚು ಕಡಿಮೆ ಏಕ ಪ್ರಕಾರವಾಗಿರುವುದು. ಇದರಂತೆ ಮೀನು, ಆಮೆ, ಹುಲಿಗಳ ಸಂತಾನೋತ್ಪತ್ತಿ ಅವುಗಳ ಪರಿಸರವನ್ನು ಅವಲಂಬಿಸಿರುತ್ತದೆ. ಆದರೆ ಸ್ವಾರ್ಥಿ ಮಾನವನು, ಹಳ್ಳಿಗಳಲ್ಲಿ ಪಟ್ಟಣಗಳಷ್ಟನ್ನು, ಪಟ್ಟಣಗಳಲ್ಲಿ ಮಹಾನಗರದಷ್ಟು ಜನವಸತಿಯಿಂದ ಕಿಕ್ಕಿರಿದು ತುಂಬಿಸುತ್ತ ಹೊರಟಿದ್ದಾನೆ. ಇದರಿಂದ ಅನ್ನ. ನೀರು, ಆಶ್ರಯ, ವಿದ್ಯುತ್, ಆಚ್ಛಾದನೆಗಳ ಕೊರತೆ ಸರ್ವೇ ಸಾಮಾನ್ಯವಾಗಿವೆ. ಅವನು ಅನ್ನ, ಅರಣ್ಯಗಳನ್ನು ಬೆಳೆಸುವ ಬದಲಾಗಿ ತನ್ನ ಪೀಳಿಗೆಯನ್ನೇ ಮಿತಿಮೀರಿ ಬೆಳೆಸಲು ಹೊರಟಿದ್ದಾನೆ! ತಾನು ಬುದ್ಧಿಜೀವಿ ಎಂದು ಜಂಬ ಕೊಚ್ಚಿಕೊಳ್ಳುವಾತನಿಗೆ ಗರ್ಭ ನಿರೋಧಕ, ಗರ್ಭಪಾತಗಳಂತಹ ಹೇಯ ಕೃತ್ಯಗಳಿಗೆ ಶರಣುಹೋಗಬೇಕಾದ ಸ್ಥಿತಿ ಉತ್ಪನ್ನವಾಗಿದೆ ಎಂದರೆ ಅವನ ಅವನತಿಯ ಆಳದ ಅರಿವಾಗದೇ ಇರದು, ಉಳಿವಿಗಾಗಿ ತುಳಿಯುವ ಅಡ್ಡದಾರಿ ಬಿಟ್ಟು ಪ್ರಕೃತಿಯ ನಿಯಮಗಳನ್ನು ಚಾಚೂ ತಪ್ಪದೇ ಅವನು ನಡೆಸಲೇಬೇಕು. ಆಗಾಗ ಕಂಡು ಬರುವ ಎಚ್ಚರಿಕೆಯ ಮುನ್ಸೂಚನೆಗಳನ್ನು ಅಲಕ್ಷಿಸಿ ತಾನು ಮಾಡುತ್ತಿರುವುದೇ ಸರಿಯೆಂದು ಪರಿಗಣಿಸಿ ಮುಂದುವರಿದರೆ ಅವನ ಅಳಿವು ದೂರವಿಲ್ಲ.

ವೃಕ್ಷಗಳ ಸಮೂಹವೇ ಕಾಡಲ್ಲ, ಕಾಡಿನ ಅಧ್ಯಯನವೇ ಅರಣ್ಯಶಾಸ್ತ್ರವಲ್ಲ. ಅರಣ್ಯಶಾಸ್ತ್ರವೇ ಪರಿಸರ ವಿಜ್ಞಾನವಲ್ಲ. ಆದರೆ ದುರ್ದೈವದಿಂದ ಬಹುಸಂಖ್ಯಾತ ಭಾರತೀಯ ರಾಜಕಾರಣಿಗಳಿಗೆ, ಪರಿಸರ ಪಂಡಿತರಿಗೆ, ಪರಿಸರವೆಂದರೆ ಮರಗಳ ಸಂರಕ್ಷಣೆ! ನಿಸರ್ಗದಲ್ಲಿ ಚರಾಚರ ವಸ್ತುಗಳಲ್ಲಿ ಏಕಪ್ರಕಾರದ ಸಮತೋಲನ, ಅನಾದಿ ಕಾಲದಿಂದಲೂ ನಡೆದು ಬಂದಿದೆ, ಅದನ್ನು ಆಳವಾಗಿ ಅಭ್ಯಸಿಸಿ, ಅರಿತು

ಕೊಳ್ಳುವುದೇ ಪರಿಸರ ವಿಜ್ಞಾನ. ಮಾನವನ ಚಟುವಟಿಕೆಗಳಿಂದ ಈ ಸಮತೋಲನ ಬುಡಮೇಲಾಗುವ ಸಾಧ್ಯತೆ ಸದಾಕಾಲ ಇದ್ದೇ ಇರುತ್ತದೆ. ಆದರೆ ತಿಳುವಳಿಕೆ ಉಳ್ಳವನು ಅವುಗಳ ಸೂತ್ರವನ್ನು ಅರಿತು, ಸರ್ವನಾಶದ ಹಾದಿ ತುಳಿಯುವ ಬದಲಾಗಿ ಅದರಿಂದ ಮಾನವ ಕೋಟಿಗೆ ಲಾಭವಾಗುವಂತೆ ಯೋಚಿಸುತ್ತಾನೆ, ಯತ್ನಿಸುತ್ತಾನೆ. ಒಂದು ಉದಾಹರಣೆಯಿಂದ ಈ ಮಾತು ಹೆಚ್ಚು ಅರ್ಥಪೂರ್ಣವಾದೀತು.

ನ್ಯೂಯಾರ್ಕ್ ರಾಜ್ಯದ ಜಾನ್‌ನು ಪರಿಸರ ಪರಿಣಿತನಾಗಿ, ಅದರಿಂದ ಪ್ರಯೋಜನ ಪಡೆದುಕೊಳ್ಳುವುದಕ್ಕಾಗಿ ನಾನೂರು ಹೆಕ್ಟೇರ್ ಭೂಮಿಯನ್ನು ಕೊಂಡು ಅಲ್ಲಿ ಶಾಸ್ತ್ರೀಯವಾಗಿ ಅರಣ್ಯವನ್ನು ಬೆಳೆಸಲಾರಂಭಿಸಿದ. ಮಡುವಿನಲ್ಲಿರುವ ಸೂಕ್ಷ್ಮ ಸಸ್ಯ, ಪ್ರಾಣಿಗಳನ್ನು ಅಭ್ಯಸಿಸಿ, ಅಮೇರಿಕನ್ ನಾಲಿಗೆಗೆ ಮೆಚ್ಚುವ ಮೀನು ಜಾತಿಗಳನ್ನು ಸಾಕಲಾರಂಭಿಸಿದ. ಅವುಗಳಿಗೆ ಆಹಾರ ಸಾಲದು ಎಂದು ಅನಿಸಿದಾಗ, ಗೊಬ್ಬರ ಪೂರೈಸಿ, ಅವು ಬಲುಬೇಗ ದ್ವಿಗುಣವಾಗುವಂತೆ ನೋಡಿಕೊಂಡನು. ನೀರು ಸಾಲದು ಅನಿಸಿದಾಗ ಝರಿಯ ನೀರನ್ನು ಹರಿಯಬಿಟ್ಟನು. ನೀರಿನ ಉಷ್ಣತಾಮಾನ, ಕ್ಷಾರ ಪ್ರಮಾಣಗಳು ಸ್ಥಾಯಿಯಾಗುವಂತೆ ಎಚ್ಚರ ವಹಿಸಿದನು. ಇದರಿಂದಾಗಿ ಸಾಕುಮೀನುಗಳ ಸಂಖ್ಯೆ ಬೆಳೆಯಿತಲ್ಲದೇ ಅವು ಪುಷ್ಟವಾಗಿ, ತೂಕವಾಗಿ ಬೆಳೆದವು. ಮತ್ಸ್ಯ ಭಕ್ಷಕ ಪಕ್ಷಿಗಳು ಬರಲಾರಂಭಿಸಿದಾಗ, ಅವುಗಳ ವಿಶ್ರಾಂತಿಗೆ, ಗೂಡು ಕಟ್ಟಲಿಕ್ಕೆ ಬೇಕಾಗುವ ತಾಣಗಳನ್ನು ನಿರ್ಮಿಸಿದನು. ಮತ್ಸ್ಯತಜ್ಞರಿಂದ ಅಲ್ಲಿರುವ ಮೀನು-ಜಾತಿಗಳ ಜೀವನಕ್ರಮ ಅಭ್ಯಸಿಸಿ, ಗಂಡು ಹೆಣ್ಣುಗಳ ಪ್ರಮಾಣ, ಮೊಟ್ಟೆಯಿಡುವ ಕ್ರಮ, ಪ್ರೌಢಾವಸ್ಥೆ ತಲುಪುವ ಅವಧಿಗಳನ್ನು ಅರಿತುಕೊಂಡನು. ಹವ್ಯಾಸಿ ಮೀನುಗಾರರನ್ನು ಸ್ವಾಗತಿಸಿ ಪ್ರವೇಶ ಶುಲ್ಕ ಪಡೆದು, ಮೀನು-ಶಿಕಾರಿಗೆ ಅನುಮತಿ ಕೊಟ್ಟನು. ಹಿಡಿದ ಮೀನುಗಳ ಶುಚೀಕರಣ, ಶೀತೀಕರಣ, ಹುರಿದು ಕೊಡುವ ಏರ್ಪಾಡುಗಳನ್ನು ಮಾಡಿದನಾದ್ದರಿಂದ ಆತನ ಜೇಬೂ ತುಂಬಲಾರಂಭಿಸಿತು.

ಕೆಲ ಹೆಕ್ಟೇರ್ ಭೂಮಿಯನ್ನು ಬುಲ್‌ಡೋಝರಿನಿಂದ ಹದಗೊಳಿಸಿ ಸೂಚಿಪರ್ಣಿ ವೃಕ್ಷಗಳ ಸಸಿಗಳನ್ನು ನೆಟ್ಟಿ, ಅತಿ ದಟ್ಟವಾಗಿರುವುದನ್ನು ವಿರಳವಾಗಿರುವಂತೆ ಕಡಿದು ಅವುಗಳನ್ನು ಕ್ರಿಸ್‌ಮಸ್ ಗಿಡಗಳನ್ನಾಗಿ ಮಾಡಿದ. ಅಡ್ಡಡ್ಡಲಾಗಿ ಬೆಳೆದವನ್ನು ಉರುವಲು ಸೌದೆಯಾಗಿ ಮಾರಿದ. ಬಾರ್‌ಬೆಕ್ಯೂ (ಕೆಂಡಗಳ ಮೇಲೆ ಹುರಿದ ಮಾಂಸಾಹಾರ) ಮಾಡುವವರಿಗಾಗಿ, ಕೆಲವನ್ನು ಇದ್ದಲಾಗಿ ಪರಿವರ್ತಿಸಿದ. ನೀರು-ಗೊಬ್ಬರಗಳ ಪೂರೈಕೆಯಿಂದಾಗಿ ಗಿಡಮರಗಳು ಹುಲುಸಾಗಿ ಬೆಳೆಯಲಾರಂಭಿಸಿದಾಗ, ಪಶು-ಪಕ್ಷಿಗಳು ಬಂದು ಬೀಡು ಬಿಡಲಾರಂಭಿಸಿದವು. ಅವುಗಳನ್ನು ಹುಡುಕಿಕೊಂಡು ಪ್ರಾಣಿ ವೀಕ್ಷಕರು, ದೂರದರ್ಶಕ-ಕ್ಯಾಮರಾಗಳಿಂದ ಸುಸಜ್ಜಿತರಾಗಿ ಬರಲಾರಂಭಿಸಿ

ದಾಗ ಅವರಿಂದ ಶುಲ್ಕ ಪಡೆಯಲಾರಂಭಿಸಿದ. ಆಗಂತುಕರಿಗೆ ಪಾತಿ, ಪಿಕ್‌ನಿಕ್ ಮಾಡುವ ಸಲುವಾಗಿ ಹೊರವಲಯದಲ್ಲಿ ಟೇಬಲ್ ಬೆಂಚು, ಕುರ್ಚಿಗಳ ಏರ್ಪಾಡು ಮಾಡಿದ. ಆಹಾರ ಕಂಪನಿಗಳೊಡನೆ ಸಂಪರ್ಕ ಬೆಳೆಸಿ ಸ್ವಯಂಚಾಲಿತ ತಿಂಡಿ, ತೀರ್ಥ, ಸಿಗರೇಟುಗಳ ಯಂತ್ರಗಳನ್ನು ಜೋಡಿಸಿದ. ನಿಸರ್ಗದ ಮಡಿಲಲ್ಲಿ ವಾಸ ಬಯಸಿ ದವರಿಗೆ ವಾಸ-ವಾಹನ ನಿಲ್ಲಿಸಲು, ಡೇರೆ ಹಾಕಲು, ಸಮನಾದ ಬಯಲಿನ ಏರ್ಪಾಡು ಮಾಡಿದ. ಆದಾಯ ಪ್ರತಿ ವರ್ಷವೂ ಏರುತ್ತಲೇ ಇದ್ದುದರಿಂದ ಕೆಲವು ಹೆಕ್ಟೇರ್ ಗಳಲ್ಲಿ ಪೀಚ್, ಚೆರಿ, ಸ್ಟ್ರಾಬೆರಿಗಳಂತಹ ಹಣ್ಣುಗಳನ್ನು ಬೆಳೆಯಲಾರಂಭಿಸಿದ. ಮೊಲ-ಚಿಗರೆಗಳಂತಹ ಮಾಂಸದ ಪ್ರಾಣಿಗಳನ್ನು ಆಕರ್ಷಿಸುವ ಸಲುವಾಗಿ ಹುಲು ಸಾಗಿ ಹುಲ್ಲು ಬೆಳೆಯಲಾರಂಭಿಸಿದ. ಇವನ್ನು ಬೇಟೆಯಾಡಿ ಬದುಕುವ ನರಿ-ತೋಳ ಗಳ ಜಾತಿಯ ಮಾಂಸಾಹಾರಿ ಪ್ರಾಣಿಗಳು ಆಗೊಮ್ಮೆ ಈಗೊಮ್ಮೆ ಕಾಣಿಸಿಕೊಳ್ಳಲಾ ರಂಭಿಸಿದವು. ಇದರಿಂದ ಬಂದೂಕುಧಾರಿ ಶಿಕಾರಿಗಳು ಆಮಂತ್ರಣ ಕಳಿಸಿದವರಂತೆ ಬರಲಾರಂಭಿಸಿದರು. ಚಳಿಗಾಲದಲ್ಲಿ ಹೆಪ್ಪುಗಟ್ಟಿದ ಮಡುವಿನಲ್ಲಿ ಹಸಿದು ಮೇಲೆ ಬಂದ ಮೀನುಗಳನ್ನು ಹಿಡಿಯುವವರು, ಜಿಂಕೆಗಳ ಹೆಜ್ಜೆಯ ಗುರುತು ಹಿಡಿದು ಬೇಟೆಯಾಡುವವರು, ಹಿಮದಲ್ಲಿ ಆಟವಾಡುವವರು, ಜಾರುವವರು ಪ್ರತ್ಯಕ್ಷರಾದರು.

ಅಮೇರಿಕೆ, ಸರ್ವತಂತ್ರ ಸ್ವತಂತ್ರ ದೇಶವಾದ ನಂತರ ರಾಷ್ಟ್ರದ ಬೆಳವಣಿಗೆ ಗಾಗಿ ಧನದ ಅಭಾವವಿದ್ದುದರಿಂದ ಧನಿಕರನ್ನು ಆಮಂತ್ರಿಸಿ ಅವರ ಸಹಾಯ ಕೋರ ಲಾಯಿತು. ನ್ಯೂಯಾರ್ಕ್ ರಾಜ್ಯದಲ್ಲಿ ರೇಲುಮಾರ್ಗ ನಿರ್ಮಿಸಿದವರಿಗೆ ಅಪಾರ ವಾದ ಅರಣ್ಯ ಸಂಪತ್ತನ್ನು ಧಾರೆಯೆರೆದು ಕೊಟ್ಟರು. ಅವರು ಕಟುಕರಂತೆ ಅವನ್ನು ಕಡಿದುಹಾಕಿದ್ದರಿಂದ ಅಲ್ಲಿ ಬೀಡುಬಿಟ್ಟ ಪಶುಗಳು ವಲಸೆ ಹೋಗಿ ಉತ್ತರದ ಕೆನಡಾ ದಲ್ಲಿ ಆಶ್ರಯಪಡೆದವು, ಇಲ್ಲವೇ ನಶಿಸಿ ಹೋದವು. ತಮ್ಮ ಪೂರ್ವಜರ ಅವಿವೇಕದ ಈ ಕೃತ್ಯಗಳಿಗಾಗಿ ಇಂದಿನ ಅಮೇರಿಕನ್ನರು ಪರಿತಪಿಸುತ್ತಲೇ ಇರುತ್ತಾರೆ. ಅರಣ್ಯ ಶಾಸ್ತ್ರ, ಪರಿಸರ ವಿಜ್ಞಾನ ಬಿತ್ತರಿಸುವ ಅಸಂಖ್ಯಾತ ಶಾಲೆ-ಕಾಲೇಜು, ವಿಶ್ವವಿದ್ಯಾ ಲಯಗಳು ದೇಶಾದ್ಯಂತ ಹರಡಿಕೊಂಡಿದ್ದರಿಂದ ಇವುಗಳಲ್ಲಿ ತರಬೇತಿ ಹೊಂದಿದ ವ್ಯಕ್ತಿಗಳು ತಾವು ಧನಿಕರಾಗುವ ಜೊತೆಗೆ ದೇಶದ ಭವಿತವ್ಯವನ್ನು ಉಜ್ವಲಗೊಳಿಸು ತ್ತಿದ್ದಾರೆ. ಆ ದೇಶದ ಹೆಚ್ಚಿನ ಅರಣ್ಯಗಳು, ಖಾಸಗೀ ವ್ಯಕ್ತಿಗಳ ಅಂಕಿತ ದಲ್ಲಿರುವುದು ಒಂದು ವರದಾನವಾಗಿ ಪರಿಣಮಿಸಿದೆ. ಕೇಂದ್ರ ಸರ್ಕಾರದ ಅಂಕಿತ ದಲ್ಲಿರುವ ಅರಣ್ಯಗಳಲ್ಲಿಯೂ ಶ್ರೇಷ್ಠ ಮಟ್ಟವನ್ನು ಕಾಯ್ದುಕೊಳ್ಳಲು ಸದಾಕಾಲ ಯತ್ನಿಸಲಾಗುತ್ತದೆಯಲ್ಲದೇ, ಖಾಸಗಿ ವ್ಯಕ್ತಿಗಳ ಸಾಹಸದಲ್ಲಿ ಸಕ್ರಿಯ ಸಹಾಯ ನೀಡಲಾಗುತ್ತದೆ.

ಈ ಹಿನ್ನೆಲೆಯಲ್ಲಿ ನಮ್ಮ ದೇಶದಲ್ಲಿ ಏನು ನಡೆದಿದೆ? ಎಂದು ಪರಾಮರ್ಶಿಸಿದರೆ ದಿಗಿಲಾಗದೇ ಇರದು. ಬ್ರಿಟಿಷರು ದೇಶದ ಅರಣ್ಯ ಸಂಪತ್ತನ್ನು ತಮ್ಮ ಸ್ವಾರ್ಥಕ್ಕೆ

ಸೂರೆ ಮಾಡಿದರೇ ವಿನಃ ಅದರ ಅಭಿವೃದ್ಧಿಗಾಗಿ ಏನೇನೂ ಶ್ರಮಿಸಲೇ ಇಲ್ಲ ! ಎಂಬ ಆರೋಪ ಇದ್ದೇ ಇದೆ. ಆದರೆ ಸ್ವಾತಂತ್ರ್ಯದ ಈ ನಾಲವತ್ತೂರು ವರ್ಷಗಳಲ್ಲಿ ನಾವೇನು ಮಾಡಿದ್ದೇವೆ ? ಎಂದರೆ ಉತ್ತರಿಸುವವರು ಯಾರೂ ಇಲ್ಲ. ಭರತ ಭೂಮಿ, ಸಸ್ಯಶಾಮಲೆಯಾಗಿರಬೇಕಾದರೆ ಭೂ ಪ್ರದೇಶದ 33%ದಷ್ಟಾದರೂ ಅರಣ್ಯ ಆವರಿಸಬೇಕೆಂದು ತಜ್ಞರು ಅಭಿಪ್ರಾಯಪಟ್ಟರೆ ಅರಣ್ಯ ಖಾತೆಯವರು ಅದನ್ನು 23%ಗೆ ಇಳಿಸಿಕೊಂಡಿದ್ದಾರೆ. ಆದರೆ ಸೆಟೆಲ್ಲೈಟ್ ಸೂಕ್ಷ್ಮ ಪರೀಕ್ಷಣದಿಂದ ಸಂಗ್ರಹಿಸಿದ ವರ್ಣಚಿತ್ರಗಳನ್ನು ಅಭ್ಯಸಿಸಿದಾಗ, ಸರಕಾರಿ ಅಂಕಿ ಸಂಖ್ಯೆಗಳು 'ಅರಣ್ಯ' ಎಂದು ಸಾರಿದ ಪ್ರದೇಶಗಳೆಲ್ಲ ಬರಿದೋ ಬರಿದು ಎಂದು ಅರಿವಾಗುವುದು. ಆದ್ದರಿಂದ ಇಂದು ದೇಶದ 10% ಭೂಮಿ ಮಾತ್ರ ಅರಣ್ಯವೆಂದು ಕರೆಯಬಹುದಾಗಿದೆ. ಉಳಿದದ್ದೆಲ್ಲಾ ಜಾಲಿಗಿಡ, ತುಂಬೆಗಿಡಗಳ ಅರಣ್ಯಗಳೆಂದರೆ ಅತಿಶಯೋಕ್ತಿ ಆಗಲಾರದು. ಈ ಶೋಚನೀಯ ಸ್ಥಿತಿಯಲ್ಲಿ ನಾವಿರಲು ಕಾರಣವೇನು ? ಎಂದು ತಲೆ ಕೆರೆದುಕೊಂಡು ಯೋಚಿಸಲಾರಂಭಿಸಿದರೆ ಕಠೋರವಾದ ನಗ್ನ ಸತ್ಯ ಗೋಚರಿಸದಿರದು.

ಹಳ್ಳಿಗೊಂದು ಜೂನಿಯರ್ ಕಾಲೇಜು, ಪಟ್ಟಣಕ್ಕೊಂದು ಪದವಿ ಕಾಲೇಜು ಇರುವ ಈ ಬೃಹತ್ ಭರತ ಖಂಡದಲ್ಲಿ, ಅರಣ್ಯಶಾಸ್ತ್ರದಲ್ಲಿ ತರಬೇತಿ, ಶಿಕ್ಷಣ, ಸಂಶೋಧನೆ ಮಾಡುವ ಎಷ್ಟು ಸಂಸ್ಥೆಗಳು ಇವೆ, ಎಂಬುದು ಊಹಿಸಲೂ ಅಸಾಧ್ಯ! ದಕ್ಷಿಣದ ಕೊಯಮತ್ತೂರಿನಲ್ಲಿ ಅರಣ್ಯ ತರಬೇತಿ ಕಾಲೇಜು ಒಂದು ಇತ್ತು. ಅದನ್ನು ಮೊನ್ನೆ ಮುಚ್ಚಿದರು. ಇನ್ನೊಂದು ಇರುವುದು ಡೆಹರಾಡೂನಿನಲ್ಲಿ. ಅಲ್ಲಿ ಸಸ್ಯ ಇಲ್ಲವೇ ಪ್ರಾಣಿಶಾಸ್ತ್ರದಲ್ಲಿ ಪದವೀಧರರನ್ನು ಆಯ್ಕೆ ಮಾಡಿ ಆಡಳಿತದಲ್ಲಿ ತರಬೇತಿ ಕೊಟ್ಟು ರೇಂಜ್ ಫಾರೆಸ್ಟ್ ಆಫೀಸರರೆಂದು ನೇಮಿಸುತ್ತಾರೆ. ಮುದಿ ಕತ್ತೆ ಕುದುರೆಯ ಸಮಾನ, ಎಂಬ ನಮ್ಮ ಸ್ವಂತ ಸೂತ್ರದ ಪ್ರಕಾರ ಅವರಿಗೆ ಮುಂಬಡತಿ ಕೊಡುತ್ತಾ ಕನ್‌ಝರ್‌ವೇಟರ್ ತನಕ ಮೇಲೇರಿಸುವುದು, ಸರಕಾರದ ಹೊಣೆ. ಅವರು ಅತ್ಯಮೂಲ್ಯವಾದ ಅರಣ್ಯ ಸಂಪತ್ತಿನ ರಕ್ಷಣೆಯ ಜವಾಬ್ದಾರಿ ಹೊತ್ತಿರುವುದರಿಂದ ತಮ್ಮ ರಕ್ಷಣೆಗಾಗಿ ಹೆಚ್ಚಿನ ವೇತನ, ಜೀಪು, ವಿಶೇಷ ತರಬೇತಿ ಸಿಬ್ಬಂದಿ, ವಾಯರ್‌ಲೆಸ್ ಸೆಟ್ಟುಗಳು, ಪಿಸ್ತೂಲು, ಬಂದೂಕುಗಳನ್ನು ಪಡೆಯಲಾರಂಭಿಸಿದ್ದಾರೆ. ಅಂತೆಯೇ ಇಂದು ಅರಣ್ಯ ಖಾತೆಯವರನ್ನು ಆರಕ್ಷಕ ದಳದಿಂದ ಬೇರ್ಪಡಿಸುವುದು ಕಷ್ಟಕ್ಕೆ ಇಟ್ಟುಕೊಂಡಿದೆ ! ಈ ಅಧಿಕಾರಿಗಳ ಜೀವನ ಕ್ರಮವನ್ನು ಕಣ್ಣಲ್ಲಿ ಕಣ್ಣಿಟ್ಟು ಪರೀಕ್ಷಿಸಿದರೆ, ಬರುವ ಸಂಬಳ ಅವರ ಕಾಫಿ ತಿಂಡಿಗಳಿಗೂ ಸಾಲದು, ಎಂಬುದು ಅರಿವಾಗದೇ ಇರದು. ಇವರ ನಿಜವಾದ ಪೋಷಕರು ಅರಣ್ಯದ ಗುತ್ತಿಗೆದಾರರು. ಶ್ರೀಗಂಧ, ತೇಗು, ರೋಸ್‌ವುಡ್ ದಿಂಡುಗಳೆಂದರೆ ಹಣದ ಹೊಳೆ. ಒಂದೇ ಒಂದು ರೋಸ್‌ವುಡ್ ನಾಟಾಗೆ ಎರಡು ಲಕ್ಷ ರೂಪಾಯಿಗಳಷ್ಟು ಬೆಲೆಯಿರುವಾಗ ಅದನ್ನು ಅನಧಿಕೃತವಾಗಿ ಪಡೆದು (ಕಡಿದು) ಅರ್ಧ ಲಾಭವನ್ನು ಅರಣ್ಯ

ಸಂಬಂಧಿತ ಸಿಬ್ಬಂದಿ ಪಡೆದರೆ ಏನಾಶ್ಚರ್ಯ ? ವಿವಿಧ ಕಾಡುಗಳಲ್ಲಿ ಮುದಿಯಾದ ಮರಗಳನ್ನು ಕಡಿಯಲು ಅಪ್ಪಣೆ ಕೊಡಿಸಿ ಅವರು ಅದರ ಹತ್ತು ಪಟ್ಟು ಹೆಚ್ಚು ದಿಂಡುಗಳನ್ನು ತಮ್ಮವನ್ನಾಗಿ ಮಾಡಿಕೊಂಡಾಗ ಅಧಿಕಾರಿಗಳ ಜೇಬು ತುಂಬದೆ ಇದ್ದೀತೆ ? ದಾಂಡೇಲಿ ಕಾಗದ ಕಾರ್ಖಾನೆಯವರು, ಹರಿಹರ ಪಾಲಿಫೈಬರ್ ಕಂಪನಿಯವರು ಬಿದಿರು, ನೀಲಗಿರಿ ಮರವನ್ನು ನಿರ್ದಿಷ್ಟಪಡಿಸಿದ್ದಕ್ಕಿಂತ ಎಷ್ಟೋ ಪಟ್ಟು ಅಧಿಕ ಸಂಖ್ಯೆಯಲ್ಲಿ ಲಾರಿಗಳಲ್ಲಿ ತುಂಬಿಕೊಂಡು ಹೋದರೂ ರಕ್ಷಕರೂ, ಅರಣ್ಯಾಧಿಕಾರಿಗಳೂ ಇನ್ನೊಂದು ದಿಕ್ಕಿನಲ್ಲಿ ನೋಡುವುದಕ್ಕೆ ಕಾರಣವೇನು ಎಂದು ಊಹಿಸಲು ಕಷ್ಟವೇನಿಲ್ಲ. ಈ ಪ್ರವೃತ್ತಿಯಿಂದಾಗಿ ದೇಶದ ಖಜಾನೆಗೆ, ಅರಣ್ಯ ಸಂಪತ್ತಿನಿಂದ ಬರುವ ಉತ್ಪನ್ನ 3%ರಷ್ಟು ಮಾತ್ರವೆಂದರೆ ಯಾರೂ ವಿಸ್ಮಯಪಡಬೇಕಾಗಿಲ್ಲ. ಅರಣ್ಯ ವಿಭಾಗವನ್ನು ಕೃಷಿ ಮಂತ್ರಿ ಮಹೋದಯರೇ ನೋಡಿಕೊಳ್ಳುವುದು ನಮ್ಮ ವೈಶಿಷ್ಟ್ಯ. ಅರಣ್ಯದ ಬದಲಾಗಿ ಪರಿಸರ ಎಂಬ ಶಬ್ದಗಳನ್ನು ಬಳಸಿದರೂ ಅವರು ನಿರ್ವಹಿಸುವ ಜವಾಬ್ದಾರಿಗಳಲ್ಲಿ ಯಾವ ಪರಿವರ್ತನೆಗಳೂ ಆಗಿಲ್ಲ. ಅರಣ್ಯ ಅಧಿಕಾರಿಗಳ ಆಯ್ಕೆ, ವರ್ಗಾವರ್ಗಿ, ಮುಂಬಡ್ತಿಗಳಿಗಾಗಿ ವಸೂಲುಮಾಡುವ ಫೀಯನ್ನು ಮಾತ್ರ ಅವರು ಚೆನ್ನಾಗಿ ಅರಿತುಕೊಳ್ಳದೇ ಇರುವುದಿಲ್ಲ.

ಪ್ರಗತಿಯ ಮಾಪನಗಳನ್ನು ಪಾಶ್ಚಿಮಾತ್ಯರಿಂದ ಎರವಲು ಪಡೆದದ್ದು ದೊಡ್ಡದೊಂದು ಕೊರತೆ. ಈಗ ಸಹಸ್ರ ಜನರಿಗೊಬ್ಬ ಡಾಕ್ಟರರಿದ್ದರೆ, ಈ ಸಂಖ್ಯೆಯನ್ನು ನೂರಕ್ಕೆ ಇಳಿಸಿದರೆ ಅದೊಂದು ಮಹಾ ಸಾಧನೆ ಎಂದು ಪರಿಗಣಿಸಲಾಗುತ್ತದೆ. ಸರ್ವರೂ ಆರೋಗ್ಯದಿಂದ ಇರುವ ಯತ್ನ ಮಾಡುವ ಬದಲಾಗಿ ಕಲುಷಿತ ನೀರು, ಹವೆ, ಧೂಮ್ರಪಾನದಿಂದಾಗಿ ರೋಗಿಗಳ ಸಂಖ್ಯೆ ಏರುವ ವ್ಯವಸ್ಥೆ ಮಾಡಿದ್ದೇವೆ. ಮನೆಗೊಂದು ಕಕ್ಕಸದ ಬದಲಾಗಿ ಕೋಣೆಗೊಂದರಂತೆ ಇದ್ದರೆ ಅದು ಮಹಾ ಪ್ರಗತಿಯಂತೆ ! ಇದೇ ವಾದ ಮುಂದರಿಸಿ ತಲಾ ಎಷ್ಟು ಕಾಗದ ಬಳಸುತ್ತೇವೆ, ವಿದ್ಯುತ್ ಬಳಸುತ್ತೇವೆ, ಎಂದು ನಮ್ಮ ಸಾಧನೆಯನ್ನು ಅಳೆಯಲಾಗುತ್ತದೆ ! ಅಂತೆಯೇ ಅರ್ಥಶಾಸ್ತ್ರಜ್ಞರು ಈ ಶತಮಾನ ಮುಗಿಯುವುದರೊಳಗಾಗಿ, ವಿದ್ಯುತ್ ಉತ್ಪಾದನೆಯಲ್ಲಿ 50% ಅಭಿವೃದ್ಧಿ ಮಾಡಿದರೆ ಮಾತ್ರ ಉದ್ದಿಮೆಗಳು ಬೆಳೆದು ಬಡಬಗ್ಗರ ಏಳ್ಗೆಗೆ ಯತ್ನಿಸಲು ಸಾಧ್ಯವೆಂದು ಶಿಫಾರಸು ಮಾಡುತ್ತಾರೆ. ಈ ಆಧಾರದ ಮೇಲೆ ಎಲ್ಲೆಲ್ಲಿ ಹೊಸ ಅಣೆಕಟ್ಟು ಹಾಕಿ ಜಲವಿದ್ಯುತ್ ಉತ್ಪಾದನೆ ಸಾಧ್ಯವೆಂದು ಪರಾಮರ್ಶಿಸಲು ವಿದ್ಯುಚ್ಛಕ್ತಿ ನಿಗಮಕ್ಕೆ ಆದೇಶ ಕೊಡುತ್ತದೆ. ಅವರು ಕಾಯಾ–ವಾಚಾ–ಮನಸಾ ಎಲ್ಲ ನದಿ, ಕೊಳ್ಳಗಳನ್ನು ಪರಾಮರ್ಶಿಸಿ ಆರ್ಥಿಕವಾಗಿ ಲಾಭದಾಯಕವಾದವುಗಳನ್ನು ಸರಕಾರದ ಗಮನಕ್ಕೆ ತರುತ್ತಾರೆ. ಮುಂದಿನ ತೀರ್ಮಾನಗಳನ್ನೆಲ್ಲ ರಾಜಕಾರಣಿಗಳು ತೆಗೆದುಕೊಂಡರೂ ಅವುಗಳ ಮೇಲೆ ಅರ್ಥಶಾಸ್ತ್ರಜ್ಞರು, ಅರಣ್ಯ ಪಂಡಿತರು, ಪರಿಸರ ಪಂಡಿತರ ಹೆಬ್ಬೆಟ್ಟುಗಳನ್ನು ಒತ್ತಿಸಿಕೊಳ್ಳದೇ ಇರುವುದಿಲ್ಲ. ಈ ಯೋಜನೆಗಳನ್ನು

ಕಾರ್ಯಾಚರಣೆಯಲ್ಲಿ ತರಲಾರಂಭಿಸಿದಾಗ, ಸಾರ್ವಜನಿಕರು ಹುಯಿಲೆಬ್ಬಿಸಿದರೆ, ಆಗ ಯಾವ ಪಿಳ್ಳೆಯೂ ದುರವಸ್ಥೆ. ಅನಾಡಳಿತಗಳ ಹೊಣೆ ಒಪ್ಪಲೂ ತಯಾರಾಗದೇ ಒಬ್ಬರು ಇನ್ನೊಬ್ಬರತ್ತ ಬೊಟ್ಟು ಮಾಡಿ ತೋರಿಸುವುದು ವಾಡಿಕೆ. ಆದರೆ ಈ ಅಣೆಕಟ್ಟುಗಳ ನಿರ್ಮಾಣ ಕಾರ್ಯ ಆರಂಭವಾದಾಗ ಮಾತ್ರ ಅಧಿಕಾರಿಗಳ, ರಾಜಕಾರಣಿಗಳ ವೈಯಕ್ತಿಕ, ಪಕ್ಷದ ಅರ್ಥ ವ್ಯವಸ್ಥೆಯಲ್ಲಿ ಅಭಿವೃದ್ಧಿ ಆಗಿಯೇ ಆಗುತ್ತದೆ ಎಂಬ ಮಾತನ್ನು ಮರೆಯಲಾಗದು. ಕಾಫಿ ತೋಟಗಳ ಸಾಹುಕಾರರು, ಕೃಷಿಕರು ಅತಿಕ್ರಮಣ ಮಾಡಿದ ಭೂಮಿಯನ್ನು ಅವರ ಹೆಸರಿಗೇ ವರ್ಗಾಯಿಸುತ್ತೇವೆಂದು ಘೋಷಿಸಿ ಕಾಡಾನೆ, ಕಾಡುಹಂದಿ, ಹುಲಿಗಳ ವಾಸಸ್ಥಾನಗಳನ್ನು ಸರಕಾರ, ದಾನ ಮಾಡುವುದು ನ್ಯಾಯವೇ ? ನಂತರ ಈ ಪ್ರಾಣಿಗಳ ಆಕ್ರಮಣಕ್ಕೆ ತುತ್ತಾದವರಿಗೆ ಸಹಾಯಧನ ನೀಡುವ ಪರಿಪಾಠ ಬೆಳೆದು ಬಂದಿತು. ಹಿಂದೆ–ಮುಂದೆ ವಿಚಾರವಿಲ್ಲದ ರಾಜಕಾರಣಿಗಳು ನಮ್ಮ ಪರಿಸರ ಹಾಳುಗೆಡುವುದರಲ್ಲಿ ಪ್ರಮುಖ ಪಾತ್ರಧಾರಿಗಳಾಗಿದ್ದಾರೆ.

ಹಿಂದೊಮ್ಮೆ ಶರಾವತಿ ವಿದ್ಯುತ್ ಯೋಜನೆಯ ಗುತ್ತಿಗೆದಾರರು ಮುಖ್ಯಮಂತ್ರಿಗಳ ಅಳಿಯಂದಿರಾಗಿದ್ದರು ! ಅಂತೆಯೇ ಅವರಿಗೆ ಸಂದಾಯವಾಗುವ ಕೋಟಿ ಹಣದಲ್ಲಿ ಹೆಚ್ಚಳವಾಗುತ್ತಲೇ ನಡೆದಿತ್ತು. ಶರಾವತಿ ಟೇಲ್‌ರೇಸ್ ಅಣೆಕಟ್ಟಿನ ಯೋಜನೆ ವರ್ಷಾನುಗಟ್ಲೆ ಜಂಗು ತಿನ್ನುತ್ತಾ ಬಿದ್ದಿತ್ತು. ವಿಶ್ವಬ್ಯಾಂಕಿನ ಧನ ಸಹಾಯ ಸಿಗುವ ಸಾಧ್ಯತೆಯಿದೆ, ಎಂದು ಅರಿತಾಕ್ಷಣ ಸರ್ವರೂ ಕಾರ್ಯೋನ್ಮುಖರಾಗಲಿಲ್ಲವೇ ? ತೆಹರಿ ಅಣೆಕಟ್ಟು ಕಟ್ಟಬಹುದೆಂದು 1972ರಷ್ಟು ಹಿಂದೆಯೇ ಸರಕಾರಕ್ಕೆ ಶಿಫಾರಸು ಮಾಡಲಾಗಿದ್ದರೂ ಹಣದ ಅಭಾವದಿಂದ ಅದು ಕಾಲು ಮುರಿದುಕೊಂಡು ಹಾಗೇ ಬಿದ್ದಿತ್ತು. ಆದರೆ 1986ರಲ್ಲಿ ಸೋವಿಯತ್ ಸರಕಾರ, 10,000 ಲಕ್ಷ ರೂಬಲ್‌ಗಳ ಸಹಾಯ ನೀಡಲು ಬಂದಾಗ ಕೂಡಲೇ ಎಲ್ಲರೂ ಎಚ್ಚರವಾಗಲಿಲ್ಲವೇ ? ಇದರಂತೆ ಸಾಮಾಜಿಕ ಅರಣ್ಯ ಕಾರ್ಯಕ್ರಮಕ್ಕೆ ಜಾಗತಿಕ ಬ್ಯಾಂಕಿನಿಂದ ಧನಸಹಾಯ ಸಿಗುವಂತಾದಾಗ, ಅದನ್ನು ದೋಚಿಕೊಳ್ಳಲು ಯಾರೂ ಹಿಂದೆ ಬೀಳಲಿಲ್ಲ. ಈ ಕಾರ್ಯಕ್ರಮದಿಂದ ಪರಿಸರದ ಸಂರಕ್ಷಣೆಯಲ್ಲಿ ಎಷ್ಟು ಅಭಿವೃದ್ಧಿಯಾಗಿದೆ ಎಂದು ಯಾರೂ ತಲೆಕೆಡಿಸಿಕೊಂಡಂತಿಲ್ಲ. ಹಣವಿಲ್ಲದೇ ಸಸಿಗಳನ್ನು ಹಂಚಿದರೆ ಅವು ವೃಕ್ಷಗಳಾಗಿ ಬೆಳೆಯುವ/ಬೆಳೆಸುವ ಸಾಧ್ಯತೆ ಎಂದಾದರೂ ಇದೆಯೇ ಎಂದು ವಿಚಾರ ಮಾಡುವ ತೊಂದರೆ ಯಾರೂ ತೆಗೆದುಕೊಳ್ಳಲಿಲ್ಲ. ವನಮಹೋತ್ಸವದಂತೆ ಇದೊಂದು ಸರಕಾರದ ವಿಧಿಯೆಂದು ಎಲ್ಲರೂ ಅಲಕ್ಷ್ಯ ಮಾಡುವವರೇ ! ವನಮಹೋತ್ಸವದ ಅಂಗವಾಗಿ ನಮ್ಮ ಕಾಲೇಜಿನವರು ಇಪ್ಪತ್ತೈದು ಸಾವಿರ ಗೋಡಂಬಿ ಸಸಿಗಳನ್ನು ನೆಟ್ಟಿದ್ದರು. ಮರುವರ್ಷ ಒಂದೂ ಬದುಕಿರಲಿಲ್ಲ, ಅದೆಂತಹ ಅದ್ಭುತ ಪರಿಸರದ ರಕ್ಷಣೆ !

ಇದಾಗಲೇ ಕಾರ್ಯಗತ ಮಾಡಿದ ವಿದ್ಯುತ್ ಯೋಜನೆಗಳೆಲ್ಲ ಹೇಗೆ ಕೆಲಸ ಮಾಡುತ್ತವೆ ಎಂದು ಪರಾಮರ್ಶಿಸಿದರೆ ಅವುಗಳಿಂದ ಆಗುವ ಅನಿಷ್ಟದ ಕಲ್ಪನೆ ಬಾರದೇ ಇರದು. ಲಿಂಗನಮಕ್ಕಿ ಅಣೆಕಟ್ಟಿಗಾಗಿ ಪರಿಪಕ್ವವಾದ ನಿತ್ಯಹರಿದ್ವರ್ಣ ಕಾಡನ್ನು ನಿರ್ನಾಮ ಮಾಡಿದರು. ಇದರಿಂದಾಗಿ ಕಾರ್ಮೋಡಗಳನ್ನು ಮಳೆಯನ್ನಾಗಿ ಪರಿವರ್ತಿಸುವ ವೃಕ್ಷಗಳ ಕೊರತೆಯಿಂದಾಗಿ, ಅಣೆಕಟ್ಟಿನಲ್ಲಿ ನೀರಿನ ಅಭಾವ ತೋರ ಲಾರಂಭಿಸಿತು. ಕೆಸರು, ಮಣ್ಣು, ರೇವೆಗಳು ದೊಡ್ಡ ಪ್ರಮಾಣದಲ್ಲಿ ನೀರಿನ ತಳದಲ್ಲಿ ಶೇಖರಣೆಯಾಗಲಾರಂಭಿಸಿದವು. ಈ ಯೋಜನೆಯಿಂದ ಶರಾವತಿಯ ಪ್ರವಾಹ ಕುಗ್ಗಲಾರಂಭಿಸಿದ್ದರಿಂದ, ರೇವೆಯೆಲ್ಲ ಕಡಲಿನ ಮಡಿಲು ಸೇರುವ ಬದಲು ನೀರಿನ ಬುಡದಲ್ಲಿ ಸಂಚಯವಾಗಲಾರಂಭಿಸಿದ್ದರಿಂದ ಅಲ್ಲಲ್ಲಿ ನಡುಗಡ್ಡೆಗಳು ತಲೆ ಯೆತ್ತಿ ನಿಲ್ಲುವಂತಾಯಿತು. ಇವುಗಳು ನಾವೆಗಳ ಓಡಾಟಕ್ಕೆ ಆತಂಕ ತಂದೊಡ್ಡು ವುದರ ಜೊತೆಗೆ ಮಹಾಪೂರ ಬಂದಾಗ ನೀರು ಆಚೆ–ಈಚೆ ದಡದಲ್ಲಿ ಹರಿಯುವಂ ತಾಗಿದೆ. ಕೇವಲ ಮೂವತ್ತೆಂಟು ಮೈಲು ಉದ್ದದ ಈ ನದಿಯು ಮೂರನೆಯ ವಿದ್ಯುತ್‌ಆಗರ ಪ್ರಾರಂಭಿಸಿದರೆ, ಶರಾವತಿಯನ್ನು ದೇವರೇ ರಕ್ಷಿಸಬೇಕು. ಕಾಳಿ ನದಿಯ ಯೋಜನೆ, ಇನ್ನೊಂದೇ ಕತೆ. ಆಳವಾದ ಅಧ್ಯಯನ ಮುಗಿಸುವ ಮುಂಚೆಯೇ ಫರಕ್ಕಾ (ಪಶ್ಚಿಮ ಬಂಗಾಲ) ಅಣೆಕಟ್ಟಿಗೆ ಬಳಸಿದ ಯಂತ್ರೋಪಕರಣ ಗಳದ್ದೇ ಲಾಭ ಪಡೆಯುವುದಕ್ಕಾಗಿ ಅವಸರದಿಂದ ಈ ಯೋಜನೆಯನ್ನು ಕಾರ್ಯಗತ ಮಾಡಲು ಅಪ್ಪಣೆ ಕೊಡಿಸಿದ್ದರಿಂದ ಆ ನಂತರ ಎದುರಿಸಬೇಕಾಗಿ ಬಂದ ಕಷ್ಟನಷ್ಟ ಗಳಿಗೆ ಕೊನೆಮೊದಲಿರಲಿಲ್ಲ. ಅಣೆಕಟ್ಟು ಹೊತ್ತು ನಿಲ್ಲುವ ಪಾಶಾಣಗಳೇ ಇಲ್ಲದ್ದ ರಿಂದ ಬೇರೆ ವಿಧದ ಅತೀವ ಖರ್ಚಿನ ಪಾಯದ ವ್ಯವಸ್ಥೆ ಕೈಗೊಳ್ಳಬೇಕಾಯಿತು. ಸುಪಾದಲ್ಲಿ ವಾಸಿಸುತ್ತಿದ್ದ ಜನರನ್ನು ಮರಳುಗಾಡಿನ ರಾಮನಗರಕ್ಕೆ ಓಡಿಸಬೇಕಾ ಯಿತು. ಇಂದಿಗೂ ಸುಪಾ ಮುಳುಗಡೆಯಿಂದ ವ್ಯಥಿತರಾದವರು ನಿರಾಶ್ರಿತ ಜೀವನ ನಡೆಸಬೇಕಾಗಿ ಬಂದಿರುವುದು ಅತ್ಯಂತ ಶೋಚನೀಯ. ದಟ್ಟವಾದ ಕಾಡು, ಉತ್ತಮ ಭತ್ತ ಬೆಳೆಯುವ ಗದ್ದೆಗಳು ಜಲಸಮಾಧಿ ಹೊಂದಿದವು. ದಾಂಡೇಲಿಯ ಅಭಯಾರಣ್ಯದಲ್ಲಿ ಸುಖವಾಗಿ ಜೀವಿಸುತ್ತಿದ್ದ ಪಶುಪಕ್ಷಿಗಳು ಹೇಳಹೆಸರಿಲ್ಲದೇ ಮಾಯವಾದವು. ಕೊಯ್‌ನಾ ಅಣೆಕಟ್ಟಿನಿಂದಾಗಿ ಅಲ್ಲಿ ಮಹಾನ್ ಭೂಕಂಪ ಉಂಟಾಯಿತೆಂಬುದು ಬಹುಸಂಖ್ಯಾತರ ನಂಬುಗೆ. ಇನ್ನುಳಿದ ವಿದ್ಯುತ್ ಯೋಜನೆ ಗಳದ್ದೂ ಹೆಚ್ಚು ಕಡಿಮೆ ಇದೇ ಹಾಡೇ.

ಕೃಷಿಯಂತೆ ಅರಣ್ಯವೂ ನವೀನೀಕರಣ ಮಾಡಬಹುದಾದಂತಹ ರಾಷ್ಟ್ರೀಯ ಸಂಪತ್ತು. ಅಂತೆಯೇ ವಿಶ್ವದ ಚಿಕ್ಕ ಚಿಕ್ಕ ರಾಷ್ಟ್ರಗಳೂ ತಮ್ಮ ಅರಣ್ಯ ಸಂಪತ್ತಿನ ಸರಿಯಾದ ಲಾಭ ಪಡೆದು ಅಭಿವೃದ್ಧಿಗೊಳಿಸಿ ವಿದೇಶೀ ವಿನಿಮಯಗಳಿಸಿದರೆ, ನಾವು ಕಬ್ಬಿಣ, ಮ್ಯಾಂಗನೀಜ ಅದಿರನ್ನು ರಫ್ತು ಮಾಡುತ್ತೇವೆ. ವಜ್ರ–ವೈಢೂರ್ಯ,

ಸುವರ್ಣಾಭರಣಗಳನ್ನು ಹೊರದೇಶಕ್ಕೆ ಕಳಿಸುವದೇ ನಮಗೆ ಲಾಭದಾಯಕವೆನಿಸಿದೆ. ಅರಣ್ಯಗಳನ್ನು ವೈಜ್ಞಾನಿಕವಾಗಿ ಬೆಳೆಸಿದರೆ, ಬಳಸಿದರೆ ರಾಷ್ಟ್ರೀಯ ಆದಾಯದ 30%ದಷ್ಟನ್ನು ಅವುಗಳಿಂದಲೇ ದೊರಕಿಸಬಹುದು. ವೃಕ್ಷಗಳು ಚಿರನೂತನವಲ್ಲ, ಹೊಸವು ಚಿಗುರುತ್ತಿರಬೇಕು. ಮುದಿಯಾದವನ್ನು ಕಡಿಯುತ್ತಿರಲೇಬೇಕು. ಅವುಗಳನ್ನು ಕೀಟ, ಹುಳ, ಹುಪ್ಪಡಿ, ಕಾಡುಕಿಚ್ಚುಗಳಿಂದ ಸದಾಕಾಲ ಸಂರಕ್ಷಿಸಿ, ಜನರ ಹಿತ, ಆರೋಗ್ಯ, ವಿರಾಮ, ವಿಶ್ರಾಂತಿ, ಆದಾಯಗಳಿಗಾಗಿ ಬಳಸಿದರೆ ಯಾವುದಕ್ಕೂ ಅಡಚಣೆ ಅನಿಸದು. ಇದರ ಬದಲಾಗಿ ಶತಕಗಳಿಂದ ಇಂಧನಕ್ಕಾಗಿ ಕಟ್ಟಿಗೆಯನ್ನು ಬಳಸುವವರಿಗೆ ಭೂಗರ್ಭದಲ್ಲಿ ಮಿತವಾಗಿ ದಾಸ್ತಾನಾಗಿರುವ ಸೀಮೆಯೆಣ್ಣೆ, ಗ್ಯಾಸ್‌ಗಳನ್ನು ಬಳಸುವಂತೆ ಮಾಡಿದ್ದು ಸರಿಯೇ ? ತಲೆ–ತಲಾಂತರಗಳಿಂದ ಹೊಲಗಳನ್ನು ಉಳುವುದಕ್ಕಾಗಿ, ಸಾರಿಗೆಗಾಗಿ ಎತ್ತುಗಳನ್ನು ಬಳಸಿದವರಿಗೆ ಟ್ರ್ಯಾಕ್ಟರ್, ಸ್ಕೂಟರ್, ವ್ಯಾನುಗಳಿಗೆ ಶರಣು ಹೋಗುವಂತೆ ಮಾಡಿ ಈಗ ವಿದೇಶೀ ವಿನಿಮಯ ಉಳಿಸುವುದಕ್ಕಾಗಿ ಪೆಟ್ರೋಲ್ ಮಾರಾಟವನ್ನು ನಿಯಂತ್ರಿಸುವುದು ಸರಿಯೇ ? ಇವೆಲ್ಲಕ್ಕೆ, ತರ್ಕಬದ್ಧವಾದ ಮುಂದಾಲೋಚನೆ ಇಲ್ಲದಿರುವುದೇ ಕಾರಣವೆಂದು ಬೇರೆ ಹೇಳಬೇಕಾಗಿಲ್ಲ.

ಸರಕಾರ, ಪ್ರಗತಿಯ ಹೆಸರಿನಲ್ಲಿ ಇವೆಲ್ಲ ಮಂಗ್ಯಾತನ ಮಾಡುತ್ತಿರುವಾಗ, ಪರಿಸರದ ಸಂರಕ್ಷಣೆಯ ಹೆಸರಿನಲ್ಲಿ "ತಜ್ಞ"ರು ದೇಶದ ತುಂಬ ತಲೆಯೆತ್ತಿ ಮೆರೆದಾಡಲಾರಂಭಿಸಿದ್ದಾರೆ. 'ನರ್ಮದಾ ಕೊಳ್ಳ ರಕ್ಷಿಸಿ', 'ಹಿಮಾಲಯ ಸಂರಕ್ಷಿಸಿ', 'ಸ್ಯಾಲೆಂಟ್ ವ್ಯಾಲಿ ಸಂರಕ್ಷಣೆ ಮಾಡು', 'ಚಿಪ್‌ಕೊ', 'ಅಪ್ಪಿಕೊ' ಮುಂತಾದವು ಇವರು ಕೂಗುವ ಮಾತುಗಳು. ಒಂದು ದೃಷ್ಟಿಯಲ್ಲಿ ಇವರೆಲ್ಲ ಪರಿಸರ ಅಜ್ಞಾನಿಗಳೆಂದರೆ ಅತಿಶಯೋಕ್ತಿಯಾಗಲಾರದು. ಯುವತಿಯರಿಂದ ಮರಗಳನ್ನು ತಬ್ಬಿಸಿಕೊಂಡು ಛಾಯಾಚಿತ್ರಗಳನ್ನು ತೆಗೆಸಿ ವೃತ್ತ ಪತ್ರಗಳಲ್ಲಿ ಪ್ರಚಾರ ಗಿಟ್ಟಿಸುವವರ ತಂಡ ಬೆಳೆಯುತ್ತಿದೆ. ಆದರೆ ಆಯುಷ್ಯ ತೀರಿದ ಮರಗಳು ಇರುತ್ತವೆ. ಅವು ಗಟ್ಟಿಯಾಗಿ ನಿಲ್ಲಲಾಗದೆ (ಕ್ರಿಮಿ–ಕೀಟಗಳಿಗೆ ಆಹುತಿಯಾಗಿ ಕಾಲಕ್ರಮೇಣ ನೆಲಕ್ಕುರುಳುವುದರಲ್ಲಿ ಸಂದೇಹವೇ ಇಲ್ಲ. ನಿಸರ್ಗ ಸಂರಕ್ಷಣೆಯ ಹೆಸರಿನಲ್ಲಿ ಸರಕಾರ ಅಪಾರ ಹಣವನ್ನು ಸೂರೆ ಮಾಡುವುದರಿಂದ ಅದನ್ನು ತಮ್ಮದನ್ನಾಗಿ ಮಾಡಿಕೊಳ್ಳುವುದು ಕೆಲಸಂಸ್ಥೆ–ವ್ಯಕ್ತಿಗಳ ಮುಖ್ಯ ಉದ್ದೇಶವಾಗಿರುತ್ತದೆ. ಕೈಗಾದ (ನ್ಯೂಕ್ಲಿಯರ್) ಅಣುಸ್ಥಾವರ ವಿದ್ಯುತ್ ಯೋಜನೆಯಲ್ಲಿ ಸಾಕಷ್ಟು ಸಂರಕ್ಷಣಾ ವಿಧಾನಗಳು ಇವೆಯೇ ? ಎಂದು ಅಭ್ಯಸಿಸಲು ಸರಕಾರೀ ಖರ್ಚಿನಲ್ಲಿ ಈ ತಜ್ಞರು ತಾರಾಪುರಕ್ಕೆ ಹೋಗಿ ಬರುತ್ತಾರೆ. ಈ ಟೊಳ್ಳು ಪರಿಸರ ಸಂರಕ್ಷಕರು ನ್ಯೂಯಾರ್ಕದ ಜಾನನ ವಿಧಾನಗಳನ್ನು ಅರಿಯಲು ಸರಕಾರಿ ವೆಚ್ಚದಲ್ಲಿ ಅಮೇರಿಕೆಗೆ ಹೊರಟು ನಿಂತರೂ ಆಶ್ಚರ್ಯವಿಲ್ಲ ! ಇವರ ಬಾಯಿ ಮುಚ್ಚಿಸುವುದಕ್ಕಾಗಿಯೇ ರಾಜಕಾರಣಿಗಳು

ಚರ್ಚಾಕೂಟ, ಸಂಶೋಧನಾ–ಕಮ್ಮಟಗಳಲ್ಲಿ ಪಾಲುಗೊಳ್ಳಲು ಆಮಂತ್ರಿಸುತ್ತಾರೆ. ಈ ರಾಜಕಾರಣಿ, ಅರಣ್ಯಾಧಿಕಾರಿ, ಪರಿಸರ ವಿಜ್ಞಾನಿಗಳ ಹಗ್ಗದೇಟದಾಟದಲ್ಲಿ ನಮ್ಮ ರಾಷ್ಟ್ರೀಯ ಸಂಪತ್ತು ಸೂರೆಗೊಳ್ಳುತ್ತಲೇ ಇದೆ. ಅದರ ಬಗ್ಗೆ ಯಾರೊಬ್ಬರಿಗೂ ಕಾಳಜಿ ಇದ್ದಂತಿಲ್ಲ. ❋

ಜೀತದ ಜನ ಬಂದರು. ಮರಗಳನ್ನು ಕಡಿಯತೊಡಗಿದರು. ಒಡತಿ ಸಂಬಳ ಕೊಟ್ಟು ಬೇರೆ ಜನರನ್ನು ಕರೆಸಿದಳು; ಅವರನ್ನು ತಡೆಯಲು ಏರ್ಪಾಡು ಮಾಡಿದಳು. ಜೀತಕ್ಕೆ ಪೆಟ್ಟಾಯಿತು. ಆ ಜನ ಇವಳು ತುಂಬಾ ಕ್ರೂರಿ ಎಂದು ಇವಳನ್ನು ನಿಂದಿಸಿದರು; ಸದ್ಯ ಸುಮ್ಮನಾದರು. ಸಂಬಳದ ಕಾವಲು ಹಿಂದಿರುಗಿದೊಡನೆ ಇವರು ಮತ್ತೆ ಬಂದರು; ಮರಗಳನ್ನು ಕಡಿದರು; ತೊಲೆ ತೀರು ಕವರು ಎಂದು ಎಲ್ಲದನ್ನೂ ಸಾಗಿಸಿದರು. ಇವರು ಹತ್ತು ಸಲ ಹೀಗೆ ಮಾಡಿ ಆಕೆ ಹತ್ತು ಸಲ ಇವರನ್ನು ತಡೆದು ಆರು ತಿಂಗಳಾಗುವ ವೇಳೆಗೆ ಭೂರ್ಜವನ ನೆಲಸಮವಾಯಿತು. ವನ ಇದ್ದದ್ದಕ್ಕೆ ಉಳಿದ ಗುರುತೆಂದರೆ ಗರಗಸದಿಂದ ಕೊಯ್ದು ಬಿಟ್ಟಿದ್ದ ಮರಗಳ ಬಡ್ಡೆ ಮಾತ್ರ.

ಇಷ್ಟೆಲ್ಲಾ ನಡೆಯುತ್ತಿರುವಲ್ಲಿ ಟಾಲ್‌ಸ್ಟಾಯ್ ಏನನ್ನೂ ಹೇಳಲಿಲ್ಲ. ಮರಗಳು ಉಳಿಯಲಿ ಎಂದು ಅವನ ಆಪೇಕ್ಷೆ ಎಂದು ಸೋಫಿಯಾದೇವಿ ತಿಳಿದಳು. ಆದರೆ ಅವಳ ಎಲ್ಲ ಯತ್ನ ವ್ಯರ್ಥವಾಯಿತು, ಅವಳು ತೀರ ಹುಚ್ಚಳಂತಾದಳು, ಟಾಲ್‌ಸ್ಟಾಯ್ ಬಾಯಲ್ಲಿ ಹೇಳಲಾರದ ಒಂದು ದುಃಖಕ್ಕೆ ತುತ್ತಾದನು. ನವೆದು ಹೋದನು.

ಮರ ಹೋದವೆಂಬ ದುಃಖವೆ? ಹೆಂಡತಿ ತನ್ನ ಔದಾರ್ಯಕ್ಕೆ ಅಡ್ಡಿ ಆದಳೆಂಬ ಬೇಸರವೆ? ಸ್ವಾಮ್ಯ ಕೂಡದೆಂದು ಬುದ್ಧಿ ಹೇಳುತ್ತಿರುವಲ್ಲಿ ಮರ ತನ್ನದೆಂಬ ಅಭಿಮಾನ ಕಾಡಿತೆಂಬ ಉದ್ವೇಗವೇ ಆವನ ಜೀವ ಈ ಭಾವ ಯಾವುದರಲ್ಲಿ ತೊಳಲುತ್ತ ಮುಗಿಯಿತು? ಇಲ್ಲ ಈ ಮೂರು ಭಾವ ಆ ಮನಸ್ಸಿನಲ್ಲಿ ಸಾಯುವ ವೇಳೆ ತುಮುಲ ಮಾಡಿದವೋ?

ಇದನ್ನು ಈಗ ಯಾರೂ ಹೇಳುವಂತಿಲ್ಲ.

—ಮಾಸ್ತಿಯವರ 'ಟಾಲ್‌ಸ್ಟಾಯ್ ಮಹರ್ಷಿಯ
ಭೂರ್ಜವೃಕ್ಷಗಳು' ಕಥೆಯಿಂದ

ಎರಡು ಟಿಪ್ಪಣಿಗಳು

⊕ ದೇವನೂರ ಮಹಾದೇವ

1. ನನ್ನ ಬರವಣಿಗೆ

ನನ್ನ ಬರವಣಿಗೆಯಲ್ಲಿ ನಾನೆಲ್ಲಿದ್ದೇನೆ ? ನಾನೊಬ್ಬ ಬರೆಹಗಾರ ಎಂದು ಕೊಂಡಾಗ ನನಗೆ ಎರಡು ಕಥೆಗಳು ಮನಸ್ಸಿಗೆ ಬರುತ್ತವೆ. ಒಂದು, ಕ್ರಿಸ್ತಪೂರ್ವದಲ್ಲಿದ್ದ ಆದಿನಾಥನೆಂಬ ಜೈನ ದೊರೆಯದ್ದು. ಆತ ಒಂದು ಬೆಳಿಗ್ಗೆ ಎದ್ದು ನೋಡುತ್ತಾನೆ-ಅವನ ತಲೆಯ ಒಂದು ಕೂದಲು ನೆರೆತಿದೆ. ಅವನಿಗೆ ತಕ್ಷಣವೇ ಬದುಕಿನ ಕ್ಷಣಿಕತೆಯ-ಹುಟ್ಟು, ಸಾವು, ಎಲ್ಲದರ ದರ್ಶನವಾಯಿತು. ಅವನು ರಾಜ್ಯ ಕೋಶ ಎಲ್ಲ ಬಿಟ್ಟು ತಪಸ್ಸು ಮಾಡಲು ಕಾಡಿಗೆ ಹೊರಟು ಹೋದ.

ಇನ್ನೊಂದು, ಯಾವಾರು ನನ್ನ ತರದ ಮನುಷ್ಯನಿಗೆ ಸಂಬಂಧಿಸಿದ್ದು. ಅವನು ಒಂದು ದಿನ ನದಿಯೊಂದರಲ್ಲಿ ನೀರು ಕುಡಿಯುತ್ತಿದ್ದಾಗ ಅವನ ಬೊಗಸೆಯಲ್ಲಿ ಒಂದು ಉದ್ದನೆಯ ಕೂದಲು ಕಂಡಿತು. ತಕ್ಷಣ ಅವನ ಕಣ್ಮುಂದೆ ಒಬ್ಬ ಸುಂದರ ಹೆಣ್ಣಿನ ರೂಪ ಮೂಡಿತು. ಈ ಕೂದಲೇ ಇಷ್ಟೊಂದು ಮನೋಹರವಾಗಿರುವಾಗ ಈ ಕೂದಲನ್ನು ಪಡೆದ ಹೆಣ್ಣು ಇನ್ನೆಷ್ಟು ಚೆಲುವೆಯಾಗಿರಬೇಕು ಎಂದು ಆತ ಯೋಚಿಸಿದ ಅವನು ಆ ಹೆಣ್ಣನ್ನು ಹುಡುಕಿ ಅವಳ ಒಲವನ್ನು ಗಳಿಸಲು ಹೆಣಗ ತೊಡಗಿದ.

ನನ್ನ ಬರವಣಿಗೆ ಈ ಎರಡರ ಮಧ್ಯೆ ಇರುವಂತಹದು. ಕುಸುಮ ಬಾಲೆ ಬರೆಯಲು ನನ್ನನ್ನು ಪ್ರೇರೇಪಿಸಿದ್ದು ಏನು ? ಈ ಮೂರು: ಮೊದಲನೆಯದು ನಾನಿನ್ನೂ ಹುಡುಗನಾಗಿದ್ದಾಗ ಸಾವಿನ ಕಡೆಗೆ ನಡೆದುಹೋಗುತ್ತಿದ್ದವರನ್ನು ಉಳಿಸಲು ಆಚರಿಸುತ್ತಿದ್ದ ನೇಮವೊಂದರ ಬಗ್ಗೆ ಕೇಳಿದ್ದೆ. ದೇಹಕ್ಕೆ ದೆವ್ವ ಬಡಿದಿದೆ ಎಂಬೊಂದು ನಂಬಿಕೆ, ಈದೆವ್ವವನ್ನು ಓಡಿಸಲು ಕುಟುಂಬ ಆ ವ್ಯಕ್ತಿಗೆ ಗೊತ್ತಿಲ್ಲದಂತೆ ಒಂದು ದೊಡ್ಡ ಔತಣವನ್ನು ಸಿದ್ಧಪಡಿಸಿ ಆ ವ್ಯಕ್ತಿಯನ್ನು ಒಂಟಿಯಾಗಿ ಆ ಅನಿರೀಕ್ಷಿತ ಔತಣದ ಮುಂದೆ ಕುಳ್ಳಿರಿಸಿ ಮನೆ ಬಿಟ್ಟು ಹೊರಗೆ ಹೋಗುತ್ತದೆ. ಆಗ ದೆವ್ವಕ್ಕೆ ಎಷ್ಟು ಆಘಾತವಾಗುತ್ತೆ ಎಂದರೆ ಅದು ದೇಹವನ್ನು ಬಿಟ್ಟು ಓಡಿ ಹೋಗುತ್ತದೆ, ಈ ನೇಮದ

ಕಥೆ ನನ್ನನ್ನು ಬಹುವರ್ಷಗಳ ಕಾಲ ಕಾಡಿತು. ಇದು ನನಗೆ ಬಡತನವನ್ನು ಅರ್ಥಮಾಡಿಸಿತು. ಜಾನಪದ ಆಚರಣೆ ನಮ್ಮ ಜನ ತಮ್ಮ ಅರಿವಿನ ಮೂಲಕ ರೂಢಿಸಿ ಕೊಂಡ ಒಂದು ರೀತಿಯ ಮನೋ ಚಿಕಿತ್ಸೆ. ನಾನೆಂದೂ ಈ ಆಚರಣೆಯನ್ನು ಕಣ್ಣಾರೆ ನೋಡಿಲ್ಲ ; ಆದರೆ ನನ್ನ ಕಾದಂಬರಿಯಲ್ಲಿ ಈ ಆಚರಣೆಯನ್ನು ವಿವರಿಸುವ ಪುಟಗಳು ನನ್ನ ಅತ್ಯುತ್ತಮ ಬರವಣಿಗೆ ಎಂದು ನಾನು ಭಾವಿಸಿದ್ದೇನೆ.

ಇನ್ನೊಂದು ಕೂಡಾ ಒಂದು ಜಾನಪದ ಕಥೆಯೇ–ಜೋತಮ್ಮಗಳನ್ನು ಕುರಿತದ್ದು. ರಾತ್ರಿ ದೀಪಗಳನ್ನು ಆರಿಸಿದ ನಂತರ ಈ ದೀಪ–ದೇವ್ವಗಳು ಹಳ್ಳಿಯ ಒಂದು ಸ್ಥಳದಲ್ಲಿ-ಮರವೊಂದರ ಕೆಳಗಿರುವ ಮಂಟಪದಲ್ಲಿ, ಸೇರಿ ತಮ್ಮ ಮನೆಗಳಲ್ಲಿ ಏನೇನು ಆಗುತ್ತಿದೆ ಎಂಬುದರ ಬಗ್ಗೆ ಹರಟೆ ಹೊಡೆಯುತ್ತವೆ ಎಂಬುದು ಈ ಕಥೆ. ಜಾನಪದ ಕಥೆಯಲ್ಲಿ ಇದನ್ನು ತಮಾಷೆಗೆಂದು ಬಳಸಲಾಗಿದೆ. ಆದರೆ ಸತ್ಯವನ್ನು ನಿರೂಪಿಸಲು ಇದನ್ನು ನಿಜವಾಗಿ ಅದ್ಭುತ ರೀತಿಯಲ್ಲಿ ಬಳಸಬಹುದೆಂದು ನಾನು ಭಾವಿಸಿದೆ.

ಕೆಲವರ್ಷಗಳ ಹಿಂದೆ ನನಗೆ ಗೊತ್ತಿದ್ದ ರಾಜಕೀಯ ಸಂಘಟನೆಯಲ್ಲಿದ್ದ ನನ್ನ ಸ್ನೇಹಿತನೊಬ್ಬನ ಕೊಲೆಯಾಯಿತು. ನಾನು ಆತನು ಕೊಲೆಯಾದ ಸ್ಥಳಕ್ಕೆ ಹೋಗಿ ನೋಡಿದರೆ, ಆ ಸ್ಥಳದಲ್ಲಿದ್ದ ಗೋಡೆಗಳಿಗೆ ಸುಣ್ಣ ಬಳಿಯಲಾಗಿತ್ತು. ಅಲ್ಲಿದ್ದ ಒಬ್ಬ ಮುದುಕಿ " ನೀವು ಎರಡು ದಿನ ಮುಂಚೆ ಬಂದಿದ್ದರೆ ರಕ್ತದ ಕಲೆಗಳನ್ನು ನೋಡ ಬಹುದಾಗಿತ್ತು" ಎಂದಳು. ಆ ಕ್ಷಣ ನನಗೆ "ಗೋಡೆಗೆ ಸುಣ್ಣ ಬಳಿದಾಗ ರಕ್ತದ ಕಲೆಗಳು ಕಾಣೆಯಾಗಿ ಬಿಡುತ್ತವಾ" ಎಂದು ಆಶ್ಚರ್ಯವಾಯಿತು.

ಒಂದು ದಿನ ನನ್ನ ಮನಸ್ಸಿನಲ್ಲಿ ಈ ಮೂರೂ ಕಥೆಗಳು ಐಕ್ಯಗೊಂಡವು. ನಾನು ಕುಸುಮಬಾಲೆ ಬರೆಯಲಾರಂಭಿಸಿದೆ. ' ಕುಸುಮಬಾಲೆ ' ಕಥೆಯಲ್ಲಿ ' ಕಥೆ ' ಎಂಬುದೇನೂ ಇಲ್ಲ. ನನ್ನ ಹಳ್ಳಿಯಲ್ಲಿ ಇಂತಹ ನಾಟಕವನ್ನು ಜನ ಮತ್ತೆ ಮತ್ತೆ ನೋಡುತ್ತಲೇ ಇರುತ್ತಾರೆ ನಾನು ಆರಂಭದಲ್ಲೇ ಕಥೆಯ ಸಾರಾಂಶ ಕೊಟ್ಟಿರುವುದರಿಂದ, ಕಾದಂಬರಿ ಕಥೆಗಿಂತ ಹೆಚ್ಚಾಗಿ ಮನುಷ್ಯ ಸಂಬಂಧಗಳಲ್ಲಿ ತನ್ನನ್ನು ತೊಡಗಿಸಿಕೊಂಡಿದೆ.

2. ನನ್ನ ಇಂಗ್ಲಿಷ್

ನಾನು ಅಮೆರಿಕಾಕ್ಕೆ ಬಂದಾಗ ಇಂಗ್ಲಿಷ್ ಉಚ್ಚಾರಣೆ ನನಗೆ ತುಂಬಾ ಕಷ್ಟ ವೆನಿಸಿತ್ತು. ನಾನೊಮ್ಮೆ ನಮ್ಮ ತಂಡದವರೇ ಆದ ಜಮೈಕಾದ ಕ್ರಿಸ್ಟೀನ್ ಕ್ರೇಗ್‌ರ ವಾಚನಕ್ಕೆ ಹೋದೆ. ಮಾತಾಡುತ್ತಿದ್ದ ರೀತಿ ನಾನು ಬೇರೊಂದು ದೇಶದಲ್ಲಿದ್ದೇನೆ ಎಂಬ

ಭಾವನೆಯನ್ನೇ ತೊಡೆದು ಹಾಕಿತು. ನನಗೆ ಟ್ರೇಸಿಚಾಪ್‌ಮನ್‌ಳ 'ಫಾಸ್ಟ್‌ಕಾರ್' ನೆನಪಿಗೆ ಬಂತು. ನನ್ನ ಮಗಳು ಈ ಹಾಡನ್ನು ನನಗೆ ಬಲವಂತವಾಗಿ ಕೇಳಿಸಿದ್ದಳು. ಅದು ನನ್ನಭಾಷೆಯ ಜಾನಪದ ಗೀತೆಗಳಿಗೆ ಹತ್ತಿರವಾಗಿತ್ತು. ಇದನ್ನು ಮನಸ್ಸಿನಲ್ಲಿಟ್ಟು ಕೊಂಡು ನಾನು, ನಮಗೆ–ಭಾರತೀಯರಿಗೆ–ಇಂಗ್ಲಿಷ್‌ನಲ್ಲಿ ನಮ್ಮದೇ ಆವ ಲಯವಿಲ್ಲ ಎಂಬ ಅಂಶದ ಬಗ್ಗೆ ಯೋಚಿಸಿದೆ. ನಂತರ ನಾನು ನನ್ನ ಬರವಣಿಗೆಯ ವಾಚನಕ್ಕಾಗಿ ಜಮೈಕಾದ ಲಯ ಪ್ರಯತ್ನಿಸಿದೆ. ಇದು ನನ್ನ ವಾಚನವನ್ನು ಸರಾಗ ಹಾಗೂ ಸಹಜ ಗೊಳಿಸಿತೆನ್ನಿಸಿತು, ಆಗ, ನಾವು ಭಾರತೀಯರು ಅಮೆರಿಕಾ ಅಥವಾ ಬ್ರಿಟಿಷರ ನುಡಿ ಲಯವನ್ನು ಅನುಕರಿಸುತ್ತಾ ಇಂಗ್ಲಿಷ್ ಉಚ್ಚಾರಣೆಯ ತೊಡಕಿನಲ್ಲಿ ಸಿಕ್ಕಿಬಿದ್ದಿದ್ದೇವೆ ಎಂಬುದು ನಿಶ್ಚಿತವಾಯಿತು. ನಾವು ಭಾಷೆಯ ಸಂವಹನದಲ್ಲಿನ ಅಂಗಾಂಗ ಚಲನೆ ಧ್ವನಿಶೈಲಿ ಹಾಗೂ ಏರಿಳಿತಗಳನ್ನು ಕಳೆದುಕೊಂಡು ಬಿಡುತ್ತೇವೆ. ನಮ್ಮ ಮಾತೃ ಭಾಷೆಯ ಲಯ ಒಂದು ಹೊರೆ ಅನ್ನಿಸತೊಡಗುತ್ತದೆ, ಹೀಗಾಗಿ ನಾವು ಇಂಗ್ಲಿಷ್ ಮಾತಾಡುತ್ತಿರುವಾಗಲೆಲ್ಲಾ ವ್ಯಾಕರಣ ನಮ್ಮ ಮನಸ್ಸನ್ನು ತುಂಬಿಕೊಂಡಿರುತ್ತದೆ. ಅದನ್ನು ನಾವೆಂದೂ ಮರೆಯುವುದೇ ಇಲ್ಲ; ಆದ್ದರಿಂದ ಅದನ್ನು ನಾವೆಂದೂ ಕಲಿಯಲೇ ಇಲ್ಲ. ಬಹುಶಃ ಇದಕ್ಕೆ ಕಾರಣ ಭಾರತದಲ್ಲಿ ಇಂಗ್ಲಿಷ್ ಕಲಿಯುವ ಬಹುತೇಕ ಜನ ವಿದ್ಯಾವಂತರು. ವಿದ್ಯಾವಂತ ಜನ ನೈಸರ್ಗಿಕವಾಗಿ ಕಲಿಯುವುದಿಲ್ಲ; ಅವರಿಗೆ ತರಬೇತಿ ಬೇಕು. ಅಶಿಕ್ಷಿತ ಜನ ನಿಸರ್ಗದ ಧ್ವನಿಗಳನ್ನು ಆಲಿಸುತ್ತಾರೆ ಮತ್ತು ಆ ಪ್ರಕ್ರಿಯೆಯ ಮೂಲಕ ಭಾಷೆ ಅವರದೇ ಆಗಿಬಿಡುತ್ತದೆ. ಇದು ಜೀವಂತಿಕೆಯ ಲಕ್ಷಣ.

ಹೀಗಾಗಿ ನಾನು ನನ್ನ ಕೃತಿಯನ್ನ ನನ್ನ ಮಾತೃಭಾಷೆಯ ಲಯ ವೈವಿಧ್ಯಕ್ಕೆ ಹತ್ತಿರವಾಗಿರುವ ಜಮೈಕಾ ಭಾಷೆಯ ಲಯಗಾರಿಕೆಯಲ್ಲಿ ಓದಿದಾಗ ಅದು ಚೆನ್ನಾಗಿದೆಯೆನಿಸುತ್ತದೆ. ಸಂವಹಿಸುತ್ತದೆ. ಕನಿಷ್ಠ ಅದು ಮೇಲೆನಿಸುತ್ತದೆ ಹಾಗೂ ನಾನು ಹೇಳುತ್ತಿರುವುದೇನು ಎಂಬುದು ನಿಮಗೆ ಹೆಚ್ಚು ಗೊತ್ತಾಗುತ್ತದೆ.

(ಇದು ಲೇಖಕರು ಇತ್ತೀಚೆಗೆ ಸಾಹಿತ್ಯ ಕಾರ್ಯಕ್ರಮವೊಂದರ ಸಂಬಂಧವಾಗಿ ಅಮೆರಿಕಕ್ಕೆ ಭೇಟಿ ನೀಡಿದ್ದಾಗ ಅಲ್ಲಿ ಸಿದ್ಧಪಡಿಸಿದ ಟಿಪ್ಪಣಿಗಳ ಕನ್ನಡ ಅನುವಾದ).

ನನ್ನ ನೆನಪುಗಳು

ಆನಂದ ಕಂದ

ಮೂಡಲಗಿ ವಾಸ

ಮೂಡಲಗಿಯು ದನದ ಸಂತೆಯ ಮೂಲಕ ಪ್ರಸಿದ್ಧವಾಗಿದೆ. ಅದರ ಮೇಲ್ಮೈಯನ್ನು ನಾನು ಮೊದಲೇ ಕೇಳಿದ್ದೆ. ನಮ್ಮ ಮನೆಗೆ ಬೇಕಾದ ಎತ್ತು-ಎಮ್ಮೆಗಳನ್ನು ಕೊಂಡು ತರಲಿಕ್ಕೂ, ಬೇಡವಾದ ದನಗಳನ್ನು ಮಾರಾಟ ಮಾಡಲಿಕ್ಕೂ ನಮ್ಮ ಜನರು ಮೂಡಲಗಿಯ ಸಂತೆಗೆ ಹೋಗುತ್ತಿದ್ದರು. ನಮ್ಮ ಹಣಮಣ್ಣನು ವರ್ಗದ ರಜೆಯ ದಿನಗಳನ್ನು ಅನುಭವಿಸಿ ಸಕಾಲದಲ್ಲಿಯೇ ಮೂಡಲಗಿಗೆ ಹೊರಟನು. ಮೂಡಲಗಿಯೂ ಅಪರಿಚಿತವಾದ ಊರು. ಮೊದಲೆರಡು ದಿನಕ್ಕೆ ತಿಂಡಿ-ತಿನಿಸುಗಳನ್ನು ಜೊತೆಗೆ ತೆಗೆದುಕೊಂಡು ಹೋಗಿದ್ದನು. ಅಲ್ಲಿ ಹೋದ ಮೇಲೆ ಒಬ್ಬನೇ ಇದ್ದುದರಿಂದ ಆ ಊರಿನ ಮುಂದಾಳುಗಳಾದ ದೇಶಪಾಂಡೆ ಗೋವಿಂದರಾಯರ ಮನೆಯಲ್ಲಿ ನಾಲ್ಕು ದಿನ ಊಟ ಮಾಡಿ, ಆ ಮೇಲೆ ಒಬ್ಬ ಅಸಿಸ್ಟೆಂಟ್ ಮಾಸ್ತರು ಜೊತೆಗೆ ಸಿಕ್ಕಿದ ಮೇಲೆ ಇಬ್ಬರೂ ಸೇರಿ ಒಂದು ಕೋಣೆ ಹಿಡಿದು ಅಡಿಗೆ ಮಾಡಿಕೊಂಡು ಊಟ ಮಾಡತೊಡಗಿದರಂತೆ. ಅಲ್ಲಿ ನೀರಿನ ತೊಂದರೆ ವಿಶೇಷ. ಸಮೀಪದ ಬಾವಿಗಳೆಲ್ಲ ಸವುಳು ನೀರಿನವಿನಂತೆ. ಒಂದೇ ಒಂದಾಗಿದ್ದ ಸಿಹಿ ನೀರಿನ ಬಾವಿಯು ಎರಡು-ಎರಡೂವರೆ ಫರ್ಲಾಂಗಿನಷ್ಟು, ಕೋಣೆಯಿಂದ ದೂರಾಗಿದ್ದಿತಂತೆ. ನಮ್ಮ ಹಣಮಣ್ಣನ ಪ್ರಕೃತಿಯು ಅಷ್ಟೊಂದು ಆರೋಗ್ಯದಿಂದ ಕೂಡಿರಲಿಲ್ಲ. ನಡೆಯುವಾಗ ಜೋಲಿ ಹೋಗುತ್ತಿದ್ದುದರಿಂದ ಜೊತೆಗಾರರೇ ಸಿಹಿ ನೀರನ್ನು ಬಾವಿಯಿಂದ ತರುತ್ತಿದ್ದರಂತೆ. ಹಣಮಣ್ಣನು ಅಶಕ್ತನಾದುದರಿಂದ ಬೇಗನೆ ತಾನು ಹೋಗಿ ಅವನ ಯೋಗಕ್ಷೇಮಗಳನ್ನು ನೋಡಿಕೊಳ್ಳಬೇಕೆಂದು ತಾಯಿಗೆ ಹಂಬಲ, ಆದರೆ ಎಷ್ಟು ಹುಡುಕಿದರೂ ಮನೆಯು ಬೇಗನೆ ಸಿಕ್ಕದುದರಿಂದ ಎರಡು ತಿಂಗಳು ಹಾಗೆಯೇ ಕಳೆದೆವು. ಅವನು ಶಿಕ್ಷಕನಾಗಿ ಸಂಬಳ ಪಡೆಯತೊಡಗಿದಾಗ ನಮ್ಮ ಮುಂದಿನ ಶಿಕ್ಷಣದ ಆಶೆಯು ಚಿಗುರಿಕೊಂಡಿತ್ತು. ಬೇಗನೆ ನಾವೂ ಅಲ್ಲಿಗೆ ಹೋಗಬೇಕೆಂದು ನಮ್ಮ ಬಲರಾಮಣ್ಣ, ತಮ್ಮ ಗೋಪಾಲ, ನಾನು ಹಾರೈಸುತ್ತಿದ್ದೆವು.

ಏಪ್ರಿಲ್ ತಿಂಗಳಲ್ಲಿ ಇದ್ದಕ್ಕಿದ್ದ ಹಾಗೆಯೇ ನಮ್ಮ ಹಣಮಣ್ಣನಿಂದ ಪತ್ರವೊಂದು ಬಂದಿತು. ಮನೆ ಸಿಕ್ಕಿದೆಯೆಂದೂ, ಅದನ್ನು ಸಾರಿಸಿ ಸಿದ್ಧಗೊಳಿಸಿ ಇರಿಸುವ ಏರ್ಪಾಡು ಮಾಡಿರುವೆನೆಂದೂ ಆ ಪತ್ರದಲ್ಲಿದ್ದ ಸಂಗತಿ. ಹೋಗುವ ಆತುರವನ್ನೇ ತೋರಿಸುತ್ತಿದ್ದ ನಮ್ಮ ತಾಯಿಗೆ ಸಮಾಧಾನವಾಯಿತು. ನಾವು ಮೂರು ಮಂದಿ ಅಣ್ಣ-ತಮ್ಮಂದಿರನ್ನು, ಚಿಕ್ಕ ತಮ್ಮ-ತಂಗಿಯರನ್ನು ಜೊತೆಗೆ ಕರೆದುಕೊಂಡು ನಮ್ಮ ತಾಯಿ ಮೂಡಲಗಿಗೆ ಎತ್ತಿನ ಬಂಡಿಯಲ್ಲಿ ಹೊರಟಳು. ಹೊಸ ಊರನ್ನು ನೋಡುವ ಆತುರದಲ್ಲಿದ್ದ ನಾವೆಲ್ಲರೂ ಕುಣಿದಾಡುತ್ತಿದ್ದೆವು. ಮಧ್ಯಾಹ್ನದ ಸಮಯಕ್ಕೆ ಸರಿಯಾಗಿ ನಮ್ಮ ಚಕ್ಕಡಿ ನಮ್ಮ ನೆಂಟರ ಊರಾದ ಧರಮಟ್ಟಿಗೆ ಹೋಯಿತು. ಮಧ್ಯಾಹ್ನದ ಊಟವನ್ನು ಅಲ್ಲಿಯೇ ತೀರಿಸಿಕೊಂಡು, ಸ್ವಲ್ಪ ಹೊತ್ತು ಬಿಸಿಲನ್ನು ಕಳೆದು, ಮೂರು ಗಂಟೆಯ ಸುಮಾರು ಮೂಡಲಗಿಗೆ ನಾವು ಹೊರಟೆವು.

ಧರಮಟ್ಟಿಯಿಂದ ಮೂಡಲಗಿಯು 4 ಮೈಲು ದೂರ. ನಮಗೆ ಹೋಗುವುದಕ್ಕೆ ವಿಶೇಷ ವೇಳೆಯೇನೂ ಬೇಕಾಗಲಿಲ್ಲ, ಮನೆಯ ವಿಳಾಸವನ್ನು ಮೊದಲೇ ತಿಳಿದುದರಿಂದ ನಾಲ್ಕೂವರೆ ಗಂಟೆಗೆ ನಾವು ಆ ಮನೆಯ ಬಾಗಿಲಿಗೆ ಚಕ್ಕಡಿಯನ್ನು ಹೊರಡಿಸಿದೆವು. ನಮ್ಮ ಹಣಮಣ್ಣ ಶಾಲೆಯಿಂದ ಇನ್ನೂ ಬಂದಿರಲಿಲ್ಲ. ಆವರೂ ಅವನಿಗೆ ನಾವು ಬಂದ ಸುದ್ದಿಯನ್ನು ನಮ್ಮ ಬಲರಾಮಣ್ಣನ ಕೂಡ ಶಾಲೆಗೇ ಹೇಳಿ ಕಳಿಸಿದೆವು. ಆ ಮನೆಯ ಮಾಲಕನ ಕಡೆಗೆ ಬೀಗದ ಕೈ ಇದ್ದುದರಿಂದ ಅವನು ಬೀಗ ತೆಗೆದು, ಬಾಗಿಲ ತೆರೆದು, ನಮಗೆ ಮನೆಯನ್ನು ಒಪ್ಪಿಸಿದನು. ಎಲ್ಲ ಸಾಮಾನುಗಳನ್ನು ಆ ಮನೆಯಲ್ಲಿರಿಸಿ ಅವುಗಳನ್ನು ವ್ಯವಸ್ಥಿತವಾಗಿಡಲು ನಮ್ಮ ತಾಯಿ ಹವಣಿಸತೊಡಗಿದಳು. ನಮ್ಮ ಬೆಟಗೇರಿಯ ಮನೆಯ ದೃಷ್ಟಿಯಿಂದ, ಅದು ತುಂಬ ಅನನುಕೂಲವಾದ ಸಣ್ಣ ಮನೆ. ಆದರೂ ಅಂತಹದರಲ್ಲಿಯೇ ನಾವು ಇರಬೇಕಾದ ಪ್ರಸಂಗ ಬಂದಿತು. ಮನೆಯಲ್ಲಿ ಎರಡೇ ಭಾಗಗಳು. ಮನೆಯನ್ನು ಪ್ರವೇಶಿಸಿದೊಡನೆ ಒಂದು ತಗ್ಗಿನ ಪಡಶಾಲೆ. ಎಡಗಡೆಯ ಮೂಲೆಯಲ್ಲಿ ಸ್ನಾನ ಮಾಡುವ ಬಚ್ಚಲು, ಆ ಪಡಶಾಲೆಯ ಭಾಗದಲ್ಲಿಯೇ ಒಂದು ಕಟ್ಟೆಯನ್ನು ಹಾಕಿದ್ದು, ಅದರ ಮೇಲೆಯೂ ಸ್ವಲ್ಪ ಸ್ಥಳವಿದ್ದಿತು. ಒಳಗೆ ಹೋದರೆ ಅಡಿಗೆಯ ಮನೆ. ಅದೇ ಸ್ವಲ್ಪ ವಿಶಾಲವಾಗಿದ್ದಿತು. ರೈತರ ಮನೆಯದು. ಬ್ರಾಹ್ಮಣರ ವಸತಿಗೆ ಅದು ತೀರ ಚಿಕ್ಕದೆಂದೇ ಹೇಳಬಹುದು. ನಮ್ಮ ತಾಯಿ ಒಲೆಯ ವ್ಯವಸ್ಥೆಯನ್ನು ಮಾಡುತ್ತಿರುವಾಗಲೇ ನಮ್ಮ ಹಣಮಣ್ಣ, ಬಲರಾಮಣ್ಣ ಕೂಡಿಯೇ ಅಲ್ಲಿಗೆ ಬಂದರು. ನಮ್ಮ ತಾಯಿ ಆತುರದಿಂದ ಮನೆಯಲ್ಲಿ ಸುತ್ತಾಡುವುದನ್ನು ನೋಡಿದ ನಮ್ಮ ಹಣಮಣ್ಣ–"ಇದು ಪೇಟೆಯ ಊರು. ಜನರ ಗದ್ದಲ ಬಹಳ, ಎಷ್ಟು ಹುಡುಕಿದರೂ ಒಳ್ಳೆಯ ಮನೆ ಸಿಕ್ಕಲಿಲ್ಲ" ಎಂದು ನುಡಿದ. "ಇರಲಿ ಬಿಡು, ಒಂದು ಚಾಟು ಇದೆ ಸಾಕು. ಇಷ್ಟರಲ್ಲಿಯೇ ಇರೋಣ" ಎಂದು ನಮ್ಮ ತಾಯಿ ಸಮಾಧಾನದ ಮಾತುಗಳನ್ನಾಡಿದಳು.

ಮನೆಯ ಮುಂಗಡೆಯಲ್ಲಿಯೇ ಬಳಕೆಯ ನೀರಿನ ಬಾವಿಯಿದ್ದಿತು. ಅದರ ನೀರು ಕುಡಿಯುವಂತೆ ಇರಲಿಲ್ಲ. ಬರೀ ಸವುಳು. ಅದೇ ನೀರನ್ನು ತಂದು ನಾನು, ನಮ್ಮ ಬಲರಾಮಣ್ಣನು, ಮನೆಯಲ್ಲಿಯ ಪಾತ್ರೆಗಳನ್ನು ತುಂಬಿಕೊಂಡೆವು. ನಮ್ಮ ಬಲರಾಮಣ್ಣನು ನನಗಿಂತಲೂ ಎರಡೂವರೆ ವರ್ಷಕ್ಕೆ ಹಿರಿಯನಾದುದರಿಂದ ಅವನೇ ಸಿಹಿನೀರಿನ ಬಾವಿಯಿಂದ ಎರಡು ಕೊಡ ನೀರನ್ನು ತಂದು ಇಳಿಸಿದನು. ಆಯಿತು. ಈ ಹೊಸಮನೆಯ ವಾಸಕ್ಕೆ ನಾವೆಲ್ಲರೂ ಅಣಿಗೊಂಡೆವು.

ಒಂದು ವಿಶೇಷವಾಗಿ ಹೇಳಬೇಕಾದ ಮಾತೇಂದರೆ ನಮ್ಮ ಸಮೀಪದ ಮನೆಯೊಂದರಲ್ಲಿಯೇ ಒಂದು ಮದುವೆ ನಡೆದಿದ್ದಿತು. ಅದಕ್ಕಾಗಿ ಬಂದ ನಮ್ಮ ಧಾರವಾಡದಲ್ಲಿ ಪರಿಚಿತಳಾದ ದೊಡ್ಡಮ್ಮನು, ಕೊಲ್ಲಾಪುರದಿಂದ ಅಲ್ಲಿಗೆ ಬಂದಿದ್ದಳು. ನಮ್ಮ ತಾಯಿ ಅಲ್ಲಿಗೆ ಬಂದಿರುವರೆಂಬ ಸುದ್ದಿ ತಿಳಿದು ತಂಗಿಯನ್ನು ಕಾಣಬೇಕೆಂಬ ಅಪೇಕ್ಷೆಯಿಂದ ಅವಸರದಿಂದಲೇ ಆಕೆ ಈ ಹೊಸಮನೆಗೆ ಬಂದಳು. ನಿಜವಾಗಿ ನೋಡಿದರೆ ಸಂಪ್ರದಾಯದಂತೆ ಅವರಿಬ್ಬರ ಭೇಟಿಯು ಒಂದು ದೇವರಗುಡಿಯಲ್ಲಿ ದೀಪದ ಪ್ರಣತಿಯ ಎಣ್ಣೆಯಲ್ಲಿ ಮುಖವನ್ನು ನೋಡಿ ಆಮೇಲೆ ಪ್ರತ್ಯಕ್ಷವಾಗಿ ಮಾತನಾಡಬೇಕಾಗಿತ್ತು. ಏಕೆಂದರೆ ಅವರಿಬ್ಬರ ಭೇಟಿಯಾಗಿ 30 ವರ್ಷಗಳು ಕಳೆದುಹೋಗಿದ್ದವು. ಆದರೂ ಆ ಸಂಪ್ರದಾಯವನ್ನು ಲಕ್ಷಿಸದೆ ನಮ್ಮ ಆ ದೊಡ್ಡಮ್ಮನು ನಮ್ಮ ಮನೆಗೆ ಬಂದು ತಾಯಿಯನ್ನು ನೋಡಿಯೇ ಬಿಟ್ಟಳು. ಬಹಳ ದಿನದ ದರ್ಶನದಿಂದ ಇಬ್ಬರಿಗೂ ಅಳು ಉಕ್ಕೇರಿ ಬಂದು, ಸ್ವಲ್ಪ ಹೊತ್ತು ಅತ್ತರು. ಆಮೇಲೆ ಸಮಾಧಾನ ತಂದುಕೊಂಡು ಇಬ್ಬರೂ ಅಂತಃಕರಣದ ಮಾತನಾಡಿದರು. ಕೆಲವು ಹೊತ್ತು ಅಲ್ಲಿಯೇ ಕುಳಿತು ದೊಡ್ಡಮ್ಮನು ತಾನು ಉಳಿದಲ್ಲಿಗೆ ಹೊರಟು ಹೋದಳು. ಸಾಂಪ್ರದಾಯಿಕ ಭಾವನೆಯ ನಮ್ಮ ತಾಯಿಗೆ ಆಮೇಲೆ ಆ ಭೇಟಿಯು ವಿಷಮಯವಾಗಿ ತೋರಿತು. ಆದ ಕಳವಳವನ್ನು ಸಹಿಸಿಕೊಂಡು ಒಳಗೊಳಗೆ ಮಿಡುಕುತ್ತಿದ್ದಳು, ಒಂದೆರಡು ದಿನದ ಹಳಿಯ ಮಾತಾದ ಮೇಲೆ ಈ ಕಳವಳವು ಮರೆಯಾಗಿ ಹೋಯಿತು. ನಮ್ಮ ದೊಡ್ಡಮ್ಮನು ಬೀಗರೊಡನೆ ಬಂದುದರಿಂದ ಬೇಗನೆ ಅವರೊಡನೆ ಕೊಲ್ಲಾಪುರಕ್ಕೆ ಹೊರಟು ಹೋದಳು.

ನಮ್ಮ ಮನೆಯು ಅಷ್ಟೊಂದು ಅನುಕೂಲವಾಗಿರದಿದ್ದರೂ ಮನೆಯ ಮಾಲಿಕನಾದ ಸತ್ಯಪ್ಪ ಮಾಳಿ ಎಂಬುವನು, ಅವನ ಹೆಂಡತಿಯೂ ಅನುಕೂಲರಾಗಿ ವರ್ತಿಸಿದರು. ನಮಗೆ ಬೇಕಾದ ಪದಾರ್ಥಗಳನ್ನು ಬೇಗನೆ ನಮಗೆ ಒದಗಿಸಿದರು. ತಮಗೆ ಗೊತ್ತಿರುವ ಮನೆಯಿಂದ ಹಾಲು ಮೊಸರುಗಳನ್ನು ಕೊಡಿಸಿದರು. ಉರುವಲದ ಅಭಾವವು ಆ ಊರಲ್ಲಿ ಬಹಳವಾಗಿದ್ದರೂ ನಾಲ್ಕಾರು ದಿನದ ಉರುವಲನ್ನು ನಮಗೆ ಒದಗಿಸಿಕೊಟ್ಟರು ತಮ್ಮ ತೋಟದಿಂದ ಬಾಳೆ ಎಲೆಗಳನ್ನು ತಂದು ಅಂದಿನ ನಮ್ಮ ಊಟಕ್ಕೆ ಒದಗಿಸಿದರು

ಎಲ್ಲವೂ ಅನುಕೂಲವಾಯಿತು. ಮರುದಿನದಿಂದ ನಮ್ಮದು ಮೂಡಲಗಿಯ ಬೀದಿ ಬೀದಿಗಳಲ್ಲಿ ಓಡಾಟ. ಊರು ಅಷ್ಟೊಂದು ದೊಡ್ಡದಲ್ಲದಿದ್ದರೂ ದನದ ಪೇಟೆಯು ಊರಾದುದರಿಂದ ಮಿಕ್ಕ ಅಂಗಡಿಗಳು ಪೇಟೆಯಲ್ಲಿ ಸಾಲುಗೊಂಡು ಶೋಭಿಸುತ್ತಿದ್ದವು. ಆ ಅಂಗಡಿಯ ಸಾಲು ಹಳ್ಳಿಯುವರಿಂದ ಹೋದ ನಮಗೆ ಹೊಸವಾಗಿಯೇ ಕಂಡಿತು, ಎಲ್ಲ ಅಂಗಡಿಗಳನ್ನು ನಾವು ನೋಡಿದೆವು. ಆದೇ ಊರಲ್ಲಿ ಒಂದು ಗೃಹಸ್ಥ-ಮಠವಿದ್ದಿತು. ಆದರ ಯಜಮಾನರಾದ ಸ್ವಾಮಿಗಳ ಹೆಸರು ರಂಗಬೋಧ ಎಂದು. ನಾನು ನೋಡಿದಾಗ ಅವರು ತೀರ ಮುಪ್ಪಿನ ವಯಸ್ಸಿನವರು. ಮಠವು ವಿಶಾಲವಾದುದು. ಐದಾರು ನೂರು ಜನರು ಊಟಕ್ಕೆ ಕುಳಿತರೂ ಸಾಲುವಷ್ಟು ಸ್ಥಳ. ಅದು ಚೌಕಿನ ಮನೆ. ನಡುವೆ ಅಂಗಳ. ಅದರ ನಾಲ್ಕೂ ಕಡೆಗೂ ದೊಡ್ಡ ದೊಡ್ಡ ಪಡಸಾಲೆ. ಸಣ್ಣ-ಬಣ್ಣ ಹೆಜ್ಜೆ ಸಜ್ಜುಗೊಳಿಸಿದ ಪಡಸಾಲೆಯದು,

ಆ ಸ್ವಾಮಿಗಳ ತಂಗಿಯೊಬ್ಬಳು ನಮ್ಮ ಆಪ್ತ ವರ್ಗಕ್ಕೆ ಸೇರಿದವಳು. ಪುಲ್ಲಗಡ್ಡೆ ಎಂಬ ಘಟಪ್ರಭಾ ತೀರದ ಹಳ್ಳಿಯೊಂದು ಆಕೆಯ ಅತ್ತೆಯ-ಮನೆಯಾಗಿದ್ದಿತು. ಕಾಶೀಬಾಯಿ ಎಂದು ಆಕೆಯ ಹೆಸರು. ಆಕೆ ನಮ್ಮ ಚಿಕ್ಕಮ್ಮನೊಬ್ಬಳ ನಾದಿನಿಯಾಗಿದ್ದಳು. ಈ ಚಿಕ್ಕಮ್ಮನ ಗುರುತನ್ನು ತಮಗೆ ಮಾಡಿಕೊಟ್ಟಿಲ್ಲ. ಏಕೆಂದರೆ ನಮ್ಮ ಊರಲ್ಲಿ ಆಕೆ ಇರುತ್ತಿರಲಿಲ್ಲ. ಚಿಕ್ಕಪ್ಪ ಸತ್ತಾಗಿನಿಂದ ವಿಧವೆಯಾಗಿದ್ದ ಅವಳು ತನ್ನ ತವರೂರಾದ ಪುಲ್ಲಗಡ್ಡೆಯಲ್ಲಿಯೇ ಇರುತ್ತಿದ್ದಳು. ನಮ್ಮ ಚಿಕ್ಕಪ್ಪ ರಾಮರಾಯ ಎಂಬವರು ಹೈದರಾಬಾದದ ಕಡೆಗೆ ಮೋಜಣಿ ಕೆಲಸವನ್ನು ಮಾಡುತ್ತಿದ್ದರಂತೆ. ನಾನು ಹುಟ್ಟುವುದಕ್ಕೆ ಎಷ್ಟೋ ವರ್ಷ ಮೊದಲೇ ಆ ಚಿಕ್ಕಪ್ಪ ಸತ್ತು ಹೋಗಿದ್ದನು. ಅವನ ಹೆಂಡತಿ ಸೀತಾಬಾಯಿ ಅನಿವಾರ್ಯವಾಗಿ ತನ್ನ ಅಣ್ಣನ ಮನೆಯಲ್ಲಿ ವಾಸಿಸುತ್ತಿದ್ದಳು. ಅಣ್ಣನ ಮನೆಯೆಂದರೆ ಘಟಪ್ರಭಾ ತೀರದಲ್ಲಿಯ ಪುಲ್ಲಗಡ್ಡೆ ಎಂಬ ಊರಲ್ಲಿ. ಬೆಟಗೇರಿಯಿಂದ ಅದು ಆರೇಳು ಮೈಲು. ಹತ್ತಿರದಲ್ಲಿಯೇ ಆದರೂ ನಮ್ಮ ಚಿಕ್ಕಮ್ಮನನ್ನು ನಾವು ಎಂದೂ ನೋಡಿರಲಿಲ್ಲ. 'ಇದ್ದಾಳೆ' ಎಂಬ ವರ್ತಮಾನವನ್ನು ಮಾತ್ರ ನಾವು ಕೇಳಿದ್ದೆವು. ಅವರ ನಾದಿನಿಯೇ ಸ್ವಾಮಿಗಳ ತಂಗಿಯಾದ ಕಾಶೀಬಾಯಿ. ನಮ್ಮ ಚಿಕ್ಕಮ್ಮ ಸತ್ತುಹೋಗಿದ್ದರೂ ಅವಳ ತಮ್ಮನ ಹೆಂಡತಿಯಾದ ಈ ಕಾಶೀಬಾಯಿ ಹೊಸತಾಗಿ ಹೋದ ನಮಗೆ ಮೂಡಲಗಿಯಲ್ಲಿ ಆತ್ಮೀಯಳಾಗಿ ನೆರವನ್ನು ಕೊಟ್ಟಳು. ಆ ನೆರವೆಂದರೆ ಅಂತಹ ಇಂತಹದಲ್ಲ. ತೀರ ಹತ್ತಿರದ ಬಳಗದವರಂತೆ ಅವಳು ನಮ್ಮನ್ನು ನೋಡಿಕೊಂಡಳು. ನಮಗೆ ತೋಂದರೆ ಇದ್ದ ದಿನ ನಮ್ಮ ಮನೆಯ ಜನರನ್ನೆಲ್ಲ ತಮ್ಮಲ್ಲಿಯೇ ಊಟಕ್ಕೆ ಕರೆಯುತ್ತಿದ್ದಳು. ಹಬ್ಬದ ದಿನಗಳಲ್ಲಂತೂ ಹೋಳಿಗೆ ಊಟವು ಅವಳ ಮನೆಯಲ್ಲಿಯೇ. ಹೀಗಾಗಿ, ನಮಗೆ ದೂರದ ಸಂಬಂಧಿಯಾಗಿದ್ದರೂ ಕಾಶೀಬಾಯಿ ಹತ್ತಿರದವಳಾದಳು. ಅವಳ ಆತ್ಮೀಯತೆಯನ್ನು ಕಂಡ ಅವಳ ಮನೆಯವರು ಆತ್ಮೀಯರೇ ಆದರು. ನಮಗೆ ಆ ರಂಗ

ಜೋಧ ಸ್ವಾಮಿಗಳ ಪರಿಚಯವಾದುದು ಆ ಕಾಶೀಬಾಯಿ ಮುಖಾಂತರವೇ. ಅವಳ ಮಗನೊಬ್ಬ ಹಣಮಣ್ಣನ ಶಾಲೆಗೆ ಹೋಗುತ್ತಿದ್ದ. ಅವನು ಕೂಡ ಮನೆಯವರಂತೆ ವರ್ತಿಸತೊಡಗಿ ಆಗಾಗ ನಮಗೆ ಬೇಕಾದ ಪದಾರ್ಥಗಳನ್ನು ಒದಗಿಸಿಕೊಡುವ ಕಾರ್ಯದಲ್ಲಿ ಸಹಾಯ ಮಾಡುತ್ತಿದ್ದ. ಎಲ್ಲವೂ ಸುಯಂತ್ರಿತವಾಗಿ ನಡೆಯಿತು.

ನಮ್ಮ ಮನೆ ಸಣ್ಣದಾಗಿದ್ದುದರಿಂದ ಮಧ್ಯಾಹ್ನ ವೇಳೆಯಲ್ಲಿ ಊಟವಾದ ಮೇಲೆ ಹೆಂಗಸರ ಹರಟೆಗೆಂದು ನಮ್ಮ ತಾಯಿ ಕಾಶೀಬಾಯಿಯ ಮನೆಗೆ ಹೋಗುತ್ತಿದ್ದಳು. ಮಠದಲ್ಲಿಯ ಒಂದು ಭಾಗವೇ ಕಾಶೀಬಾಯಿಯ ಮನೆ. ನಾನು ಶಾಲೆಯಿಲ್ಲದೆ ನಿರುದ್ಯೋಗಿಯಾಗಿ ಕುಳಿತುದರಿಂದ ನನ್ನಿಂದ ಆ ಹೆಂಗಸರ ಸಭೆಯಲ್ಲಿ ಭಾರತ, ರಾಮಾಯಣ, ಜೈಮಿನಿ-ಭಾರತ, ಕತೆ ಕಾದಂಬರಿಗಳನ್ನು ಓದಿ ತೋರಿಸಿ, ಅಲ್ಲಿ ಬರುವ ಹೆಂಗಸರಿಗೆಲ್ಲ ವಾಚನಾಭಿರುಚಿಯನ್ನು ಹಚ್ಚಿದಳು. ನನ್ನ ವಾಚನವನ್ನು ಕೇಳುವುದಕ್ಕೆ ಅನೇಕ ಜನ ಹೆಣ್ಣುಮಕ್ಕಳೂ, ಕೆಲವೊಂದು ಜನ ಗಂಡಸರೂ ಮಠದಲ್ಲಿಯೇ ಕೂಡತೊಡಗಿದರು. ನಾನು ಓದುವುದನ್ನೆಲ್ಲ ಆ ಮುಪ್ಪಿನ ಸ್ವಾಮಿಗಳು ದೂರದಿಂದಲೇ ಕೇಳಿ, ಕೇಳಿ, ನನ್ನನ್ನು ತುಂಬ ಪ್ರೀತಿಯಿಂದ ಕಾಣತೊಡಗಿದರು. ಅವರು ಅನೇಕ ವೇದಾಂತ ಪುಸ್ತಕಗಳನ್ನು ನನ್ನಿಂದ ಓದಿಸಿ ಕೇಳಿದರು. ಸಂತೃಪ್ತರಾಗಿ ನನ್ನನ್ನು ಮಗನಂತೆ ಪ್ರೀತಿಸತೊಡಗಿದರು. ಆ ಸ್ವಾಮಿಗಳು ಜನರ ಭೀತಿಗೆ ಕಾರಣರಾಗಿದ್ದರೂ ನನಗೆ ಆತ್ಮೀಯ ಹಿರಿಯರಾಗಿ ಕಂಡರು. ಮನೆಯಲ್ಲಿದ್ದ ತಂಬೂರಿ, ತಬಲಾಗಳನ್ನು ಉಪಯೋಗಿಸಲು ನನಗೆ ನಿತ್ಯವೂ ಕೊಡುತ್ತಿದ್ದರು. ಇಷ್ಟೊಂದು ನಾನು ಅವರ ಪ್ರೀತಿಗೆ ಪಾತ್ರನಾದುದನ್ನು ಕಂಡು ಅವರಿಗೆ ಅಂಜಿ ನಡೆಯುವ ಜನರೆಲ್ಲ ಆಶ್ಚರ್ಯಪಡುತ್ತಿದ್ದರು.

ಆ ಊರಲ್ಲಿ ಒಬ್ಬ ಇಂಗ್ಲಿಷ್-ಶಿಕ್ಷಕನು ಬಂದು ವಾಸವಾಗಿದ್ದನು. ಹುಡುಗರನ್ನು ಮೂರನೇ ತರಗತಿಯವರೆಗೆ ತರಬೇತುಗೊಳಿಸಿ ಮುಂದೆ ಅವರು ಹೈಸ್ಕೂಲಿಗೆ ನಾಲ್ಕನೇ ತರಗತಿಗೆ ಹೋಗುವಂತೆ ವ್ಯವಸ್ಥೆಗೊಳಿಸುತ್ತಿದ್ದರು. ನಮ್ಮ ಅಣ್ಣ ಈ ಮಾಸ್ತರರಿಗೆ ಹೇಳಿ ಅವರ ಬಳಿಯಲ್ಲಿಯೇ ನಾನು, ನನ್ನ ತಮ್ಮ ಗೋಪಾಲ, ಇಬ್ಬರೂ ಇಂಗ್ಲಿಷ್ ಕಲಿಯುವಂತೆ ಏರ್ಪಾಡು ಮಾಡಿದನು. ಮಾಸ್ತರು ಪ್ರೀತಿಯಿಂದ ನಮಗೆ ಇಂಗ್ಲೀಷ್ ಕಲಿಸುವ ಕೆಲಸವನ್ನು ಮಾಡತೊಡಗಿದರು. ಪ್ರಾರಂಭದ ದಿವಸ ಪೂಜೆಯನ್ನು ಮಾಡಿ ನಮ್ಮ ಇಂಗ್ಲಿಷ್ ಶಿಕ್ಷಣಕ್ಕೆ ಮೊದಲಾಯಿತು. ನಮ್ಮ ಮಾಸ್ತರು ಹಳೆಯ ವಿದ್ಯಾರ್ಥಿಗಳಿಂದಲೇ ಸಂಪಾದಿಸಿ 'ಕಿಂಗ್ಸ್ ಪ್ರೈಮರ್' ಒಂದನ್ನು, ಸಂಗಪ್ಪ ಮಲ್ಲಪ್ಪ ಅಂಕಲಿಯವರ 'ಭಾಷಾಂತರ ಪಾಠಮಾಲೆ' ಎಂಬ ಪುಸ್ತಕವನ್ನು ಒದಗಿಸಿಕೊಟ್ಟರು. ನಮ್ಮ ಇಂಗ್ಲಿಷ್ ಶಿಕ್ಷಣವು ಆ ಪುಸ್ತಕದ ಪಾಠಗಳಿಂದಲೇ ಆರಂಭವಾಯಿತು. ನಮ್ಮ ಇಂಗ್ಲಿಷ್-ಮಾಸ್ತರು ನಿತ್ಯವೂ ಸಂಜೆಯ ಐದು ಗಂಟೆಗೆ

ಬಂದು ನಾವು ಓದಿಕೊಳ್ಳಬೇಕಾದ ಪಾಠಗಳನ್ನು ಹೇಳಿ ಕೊಡುತ್ತಿದ್ದರು. ಪ್ರೈಮರ್‌ನಲ್ಲಿಯ ಒಂದು ಪಾಠ, ಭಾಷಾಂತರ ಮಾಲೆಯ ವ್ಯಾಕರಣದ ನಿಯಮ ಮತ್ತು ಶಬ್ದಾರ್ಥ ಸಂಗ್ರಹ. ನಮ್ಮ ತಮ್ಮನ ಒಲವು ಚಿತ್ರಕಲೆಯ ಕಡೆಗೆ ಇದ್ದುದರಿಂದ ಈ ಪಾಠ ಮಾಡುವ ವಿಷಯದಲ್ಲಿ ಅವನು ಯಾವಾಗಲೂ ಹಿಂದೆ. ನಾನು ಮಾಸ್ತರರು ಕೊಟ್ಟ ಪಾಠಗಳನ್ನು ಉರುಹೊಡೆದು, ಎಲ್ಲವನ್ನು ದಿನದಿನವೂ ಒಪ್ಪಿಸುತ್ತಿದ್ದೆ. ಮಾಸ್ತರರು ಮುಂದಿನ ಪಾಠವನ್ನು ನನಗೆ ಕಲಿಸಿ ಹೋಗುತ್ತಿದ್ದರು. ನಾನು ಈ ಇಂಗ್ಲಿಷ್ ಪಾಠದಲ್ಲಿ ಯಾವಾಗಲೂ ಆತುರವಾದ ಮನಸುಳ್ಳವನು, ಹೇಳಿದಂತೆಯೇ ಎಲ್ಲ ಪಾಠಗಳನ್ನೂ ಓದಿ, ನಮ್ಮ ಮಾಸ್ತರರಿಗೆ ಒಪ್ಪಿಸುತ್ತಿದ್ದೆ. ಅದರಿಂದ ನನ್ನ ಮೇಲೆ ಆ ಮಾಸ್ತರರ ಮೆಚ್ಚುಗೆಯೂ ಹೆಚ್ಚಾಯಿತು. ಒಂದು ತಿಂಗಳವರೆಗೆ ಸುಯಂತ್ರಿತವಾಗಿ ನಮ್ಮ ಇಂಗ್ಲಿಷ್ ಪಾಠ ನಡೆಯಿತು. ೧೪-೧೫ ಪ್ರೈಮರ್‌ನೊಳಗಿನ ಪಾಠಗಳು, ೧೫-೧೬ರಷ್ಟು ಭಾಷಾಂತರ ಪಾಠಗಳೂ ನನಗೆ ಅವಗತವಾಗಿದ್ದವು. ನಮ್ಮ ಇಂಗ್ಲಿಷ್-ಮಾಸ್ತರರು ಶೂರ್ಪಾಲಿಯವರು. ಅವರು ತಮ್ಮ ಹೆಂಡರು-ಮಕ್ಕಳನ್ನು ಶೂರ್ಪಾಲಿಯಲ್ಲಿಯೇ ಇಟ್ಟು ತಾವೊಬ್ಬರೇ ಯಾರಲ್ಲಿಯೋ ಊಟ ಮಾಡಿಕೊಂಡು ಇಲ್ಲಿ ಇರುತ್ತಿದ್ದರು. ತಿಂಗಳ ಕೊನೆಗೆ ನಮ್ಮ ಹಣಮಣ್ಣ ನಮ್ಮ ಕೈಯಿಂದಲೇ ಎರಡೆರಡು ರೂ. ಗಳನ್ನು ಆ ಇಂಗ್ಲಿಷ್-ಶಿಕ್ಷಕರಿಗೆ 'ಫೀ' ಎಂದು ಕೊಡಿಸಿದನು.

ಮುಂದೆ ೩-೪ ದಿನಗಳಲ್ಲಿಯೇ ನಮ್ಮ ಶಿಕ್ಷಕರು ತಮ್ಮ ಊರಿಗೆ ಹೋಗಿ ಬರುವೆನೆಂದೂ, ಬಹಳ ದಿನ ತಡೆದು ನಿಲ್ಲುವುದಿಲ್ಲವೆಂದೂ ಹೇಳಿ ಶೂರ್ಪಾಲಿಗೆ ಹೋದರು. ನಮ್ಮ ದುರ್ದೈವವೇ ಎನ್ನಬೇಕು. ಅವರಿಂದ ೪-೫ ದಿವಸಗಳಲ್ಲಿಯೇ ಪತ್ರವೊಂದು ಬಂದಿತು. ಅದರಲ್ಲಿ ತಮ್ಮ ಹೆಂಡತಿ ಇದ್ದುದಿದ್ದ ಹಾಗೆಯೇ ಸತ್ತುಹೋದಳೆಂದೂ, ತಮಗಿನ್ನು ಮೂಡಲಗಿಗೆ ಬರಲಿಕ್ಕೆ ಸಾಧ್ಯವಾಗುವುದಿಲ್ಲವೆಂದೂ ತಿಳಿಸಿದ್ದರು. ನಮ್ಮ ಹಣಮಣ್ಣನಿಗೆ ವ್ಯಸನವಾಯಿತು. ನಾವು ಹುಡುಗರಾದುದರಿಂದ ಆ ಶಿಕ್ಷಣದ ಬೆಲೆಯನ್ನು ಸರಿಯಾಗಿ ಅರಿತುಕೊಂಡಿರಲಿಲ್ಲ. ಅಂತೂ ನಮಗೆ ೪ ರೂ.ಗಳ ಬೆಲೆಯ ಇಂಗ್ಲಿಷ್ ಶಿಕ್ಷಣವು ದೊರೆಯಿತು. ಮತ್ತೆ ನಮಗೆ ತೆರವು ಸಿಕ್ಕು ಶಿಕ್ಷಣದ ದಾರಿಯನ್ನು ಕಾಯುತ್ತಿದ್ದೆವು. ನಮ್ಮ ಬಲರಾಮಣ್ಣನು ಮಾತ್ರ ಅದೇ ಊರ ಕನ್ನಡ ಶಾಲೆಯಲ್ಲಿ ಏಳನೇ ತರಗತಿಗೆ ಹೆಸರು ಹಚ್ಚಿ ಮುಲ್ಕಿ ಪರೀಕ್ಷೆಯ ಅಭ್ಯಾಸ ಮಾಡುತ್ತಿದ್ದನು. ನಮ್ಮ ಹಣಮಣ್ಣನಿಗೆ ಹೇಗಾದರೂ ಮಾಡಿ ನಮ್ಮಿಬ್ಬರನ್ನೂ ಇಂಗ್ಲಿಷ್ ಶಾಲೆಗೆ ಕಳಿಸಬೇಕೆಂಬ ಮಹಾತ್ವಾಕಾಂಕ್ಷೆ ಇದ್ದುದರಿಂದ ನಾವಿಬ್ಬರೂ ಶಾಲೆಯಿಲ್ಲದೆ ತಿರುಗಾಡುತ್ತಿದ್ದೆವು. ನನಗೆ ಮತ್ತೆ ಮೊದಲಿನಂತೆ ಸ್ವಾಮಿಗಳ ಮಠದಲ್ಲಿ ಪುಸ್ತಕಗಳನ್ನು ಓದುವ, ಗಳಿಕೆಯಿಲ್ಲದ ಕೆಲಸ ಸಿಕ್ಕಿತು. ಅವರ ಪ್ರೀತಿಯೇ ನನ್ನ ಗಳಿಕೆಯಾಗಿ ಅವರೆಲ್ಲರ ಸಂತೋಷದಿಂದಲೇ ನಾನು ಸಮಾಧಾನಪಡತೊಡಗಿದೆ. ಎಷ್ಟೆಷ್ಟೊ ಪುಸ್ತಕಗಳನ್ನು ಆಗ ನಾನು ಓದಿದೆನು. ಸ್ವಾಮಿಗಳು ಕೊಟ್ಟು ಓದಿಸಿದ ವೇದಾಂತ

ಪುಸ್ತಕಗಳ ಜ್ಞಾನವು ನನಗೆ ಇರಲಿಲ್ಲವಾದರೂ ಅವರು ಮಧ್ಯೆ ಮಧ್ಯೆ ಹೇಳಿಕೊಟ್ಟು
ದರಿಂದ ವೇದಾಂತದ ಪರಿಚಯವನ್ನು ನಾನು ಪಡೆದುಕೊಂಡೆ.

ನಾವು ಮೂಡಲಗಿಗೆ ಹೋಗಿ ಮೂರು ತಿಂಗಳಾಗಿರಬಹುದು. ಆಷಾಢದಲ್ಲಿ ಮಳೆಗಾಲವು ಸ್ವಲ್ಪವೂ ತನ್ನ ಗುರುತನ್ನು ತೋರಿಸಲಿಲ್ಲ. ನಾನು ಸುಮ್ಮನೆ ಊರಲ್ಲಿ ಕೂಡುವುದೇನೆಂದು ಹತ್ತಿರದ ಧರಮಟ್ಟಿಗೆ ಹೋಗಿ ಅಲ್ಲಿಯೇ ನಮ್ಮ ಅಕ್ಕನ ಮನೆಯಲ್ಲಿ ನಿಂತುಕೊಂಡಿದ್ದೆ. ಹಠಾತ್ತಾಗಿ ಮಳೆಗಾಲ ಪ್ರಾರಂಭವಾದುದು ಸಂತತ ಧಾರೆಯನ್ನು ಸುರಿಸತೊಡಗಿತು. ಈ ಧಾರೆಯಿಂದ ನಮ್ಮ ಕಡೆಯ ಮಾಳಿಗೆಯ ಮನೆಗಳೆಲ್ಲ ಸೋರಿ, ಮನೆಯೆಲ್ಲ ಕೆಸರು ಕೆಸರಾಯಿತು.

ಧರಮಟ್ಟಿ ಗ್ರಾಮದಲ್ಲಿ ೧೫-೧೬ರಷ್ಟು ಬ್ರಾಹ್ಮಣರ ಮನೆಗಳಿದ್ದವು. ಎಲ್ಲ ಮನೆಯ ಹಿರಿಯರೂ ಕೋರ್ಟಿನ ಕೆಲಸಕ್ಕಾಗಿ ಗೋಕಾವಿಗೆ ಹೋಗಿದ್ದರು. ಇನ್ನೂ ಮರಳಿ ಊರಿಗೆ ಬಂದಿರಲಿಲ್ಲ. ಅಷ್ಟರಲ್ಲಿಯೇ ರಭಸದ ಮಳೆಗಾಲ ಸುರುವಾಗಿ ಅವರ ಅವರ ಬರುವಿಕೆಗೆ ತಡೆಯನ್ನೊಡ್ಡಿತು. ಅಂದು ಶ್ರಾವಣದ ಮೊದಲನೇ ಶುಕ್ರವಾರ. ಮನೆಗಳಲ್ಲಿ ಗೌರಿಪೂಜೆ ನಡೆಯಬೇಕು. ಅದಕ್ಕಾಗಿ ಗೋಕಾವಿಗೆ ಹೋದವರು ಬಂದೇ ಬರುವರೆಂದು ಎಲ್ಲ ಮನೆಯವರೂ ದಾರಿಯನ್ನು ಕಾಯುತ್ತಿದ್ದರು. ಇದ್ದುದಿದ್ದ ಹಾಗೆಯೇ ಬಿರುಗಾಳಿಯಂತೆ ಸುದ್ದಿಯೊಂದು ಬಂದಿತು. ಗೋಕಾವಿಯ ಮುಂದೆ, ನದಿಯನ್ನು ದಾಟಿಸುವ ನಾವು, ಮಹಾಪೂರದಲ್ಲಿ ಮುಳುಗಿಹೋಯಿತೆಂಬ ಆ ಸುದ್ದಿಯನ್ನು ಕೇಳಿ ಧರಮಟ್ಟಿಯ ಜನರೆಲ್ಲರೂ ಗಾಬರಿಗೊಂಡರು. ಕೆಲವು ಮನೆಗಳಲ್ಲಿ ಅಳುವ ಸ್ವರವೂ ನನಗೆ ಕೇಳಿಸಿತು. ಆ ನಾವಿನಿಂದಲೇ ಹೊಳೆಯನ್ನು ದಾಟಿ ಕೋರ್ಟಿಗೆ ಹೋದ ಧರಮಟ್ಟಿಯ ಜನರೆಲ್ಲರೂ ಬರುವವರಿದ್ದರು. ಈ ನಾವು ಮುಳುಗಿದ ಸುದ್ದಿ ಅವರೆಲ್ಲರಿಗೂ ಒಂದು ಬಗೆಯ ಆಘಾತವನ್ನೇ ತಂದೊಡ್ಡಿತು. ಏನು ಸುದ್ದಿ ಬರುವುದೋ ಎಂದು ಎಲ್ಲರೂ ಆತುರದಿಂದ ದಾರಿಯನ್ನೇ ಕಾಯುತ್ತಿದ್ದರು.

ಘಟಪ್ರಭಾ ನದಿಯು ತುಂಬಿ ಹರಿದು ಎರಡೂ ದಂಡೆಗಳನ್ನು ದಾಟಿ ಒಂದು ಸಾಗರದ ನೀರಿನಂತೆ ಕಾಣುತ್ತಿತ್ತು. ಅದನ್ನು ನಾನು ಪ್ರತ್ಯಕ್ಷವಾಗಿಯೇ ಧರಮಟ್ಟಿಯ ಬಳಿಯಲ್ಲಿಯೇ ಇರುವ ಪುಲ್ಲಗಡ್ಡೆಯನ್ನು ನೋಡಿ, ಅನುಭವಿಸಿದೆನು. ಪುಲ್ಲಗಡ್ಡೆಯ ಊರು ಹೊಳೆಯ ಬಳಿಯಲ್ಲಿಯೇ ಇದ್ದುದರಿಂದ ಆ ಊರೆಲ್ಲವೂ ಮುಳುಗಿ ಹೋಗಿತ್ತು. ಜನರು ಮೊದಲೇ ಎಚ್ಚರಾಗಿ ಆ ಊರನ್ನು ಬಿಟ್ಟು ಸಮೀಪದ ಹಳ್ಳಿಗಳಲ್ಲಿ ವಾಸವಾಗಿದ್ದರು. ಹೋಗುವಾಗ ಜೊತೆಗೆ ತಂದ ಸಾಮಾನುಗಳೆಷ್ಟೋ ಅಷ್ಟೆ ಅವರವು. ಮಿಕ್ಕುವೆಲ್ಲ ಘಟಪ್ರಭೆಯ ಪಾಲಾಗಿದ್ದವು. ತುಂಬಿದ ಹಗೆ, ಒಟ್ಟಿದ ಬಣವೆ. ಮನೆಯಲ್ಲಿಯ ಜೀವನ-ಸಾಮಗ್ರಿಗಳು, ಎತ್ತಿನ-ಬಂಡಿಗಳು, ಎಲ್ಲವೂ ನದಿಯ ನೀರಿನಲ್ಲಿ ತೇಲಿಹೋಗಿದ್ದವು. ಆ ಊರನ್ನು ಕಣ್ಣಾರೆ ಕಂಡ ನನಗೆ ಅಂದು ಆ ಗೋಕಾವಿಯ ನಾವು ಮುಳುಗಿ ಹೋದ ಸುದ್ದಿಯನ್ನು ಕೇಳಿ, ಮನಸ್ಸಿನ ಮೇಲೆ ಒಂದು ದೊಡ್ಡ ಭೀತಿಯ ಆಘಾತವೇ ಆದಂತಾಗಿತ್ತು,

ಅಂದು ಸಂಪತ್ ಶುಕ್ರವಾರ. ಧರವಮಟ್ಟಿಯ ಯಾವ ಮನೆಯಲ್ಲಿಯೂ ಊಟವೇ ಇಲ್ಲ. ದುಃಖದಿಂದ ಅವರು ಹೊಟ್ಟೆಯನ್ನು ತುಂಬಿಸಿಕೊಂಡಿದ್ದರು. ಎಲ್ಲರೂ ತಮ್ಮ ತಮ್ಮ ಮನೆಯ ಹಿರಿಯರ ದಾರಿಯನ್ನೇ ನೋಡುತ್ತ ಕುಳಿತಿದ್ದರು. ಗೋಕಾವಿಗೆ ಹೋದ ಧರವಮಟ್ಟಿಯ ಜನರೆಲ್ಲರೂ ಒಬ್ಬ ಅಂಬಿಗನನ್ನೇ ಕಳಿಸಿ ತಾವು ಬದುಕಿದ ಸುದ್ದಿಯನ್ನು ಒಂದು ಪತ್ರ ಬರೆದು ತಿಳಿಸಿದರು. ಎಲ್ಲರೂ ಆ ಪತ್ರದಲ್ಲಿಯ ಸಂಗತಿಯನ್ನು ಓದಿ ಸಮಾಧಾನದ ನಿಟ್ಟುಸಿರನ್ನು ಬಿಟ್ಟರು. ಆ ಪತ್ರದಿಂದ ಅವರು ಬದುಕಿದ ವಿಷಯ ಗೊತ್ತಾಯಿತು. "ನಾವು ಇಂದು ಮೊದಲನೆಯ ನಾವಿನಿಂದಲೇ ನದಿಯನ್ನು ದಾಟಿ ಧರವಮಟ್ಟಿಗೆ ಬರಬೇಕೆಂದು ಯೋಚಿಸಿದ್ದೆವು. ಆದರೆ ಗೋಕಾವಿಯ ದ್ಯಾಮವ್ವನ ಜಾತ್ರೆಯಾದುದರಿಂದ ಮೊದಲನೆಯ ನಾವೆಗೆ ತುಂಬ ಗದ್ದಲವಾಯಿತು. ಅದರಲ್ಲಿ ನುಗ್ಗಿ ಹೋಗಲು ನಮ್ಮಿಂದ ಸಾಧ್ಯವಾಗಲಿಲ್ಲ. ಮೊದಲನೆಯ ನಾವೆ ಜನರಿಂದ ತುಂಬಿ ನದಿಯನ್ನು ದಾಟುವುದರಲ್ಲಿಯೇ ಮಧ್ಯಕ್ಕೆ ಹೋದಾಗ ತುಂಬಿದ ಹೊಳೆಯಲ್ಲಿ ಆ ನಾವೆ ಮುಳುಗಿಹೋಯಿತು. ಬೇರೆ ನಾವಿನ ವ್ಯವಸ್ಥೆಯಾಗುವ ವರೆಗೂ ನಾವು ಅನಿವಾರ್ಯವಾಗಿ ಇಲ್ಲಿಯೇ ಉಳಿಯಬೇಕಾಗಿದೆ. ನಮ್ಮ ಸಲುವಾಗಿ ನೀವು ಯಾವ ಚಿಂತೆಯನ್ನೂ ಮಾಡಕೂಡದು. ಇಂದು ಸಂಪತ್–ಶುಕ್ರವಾರ ವೆಂಬುದು ನಮಗೆ ಗೊತ್ತು. ಪೂಜೆ–ಪುರಸ್ಕಾರಗಳನ್ನು ನಾವು ಬಂದ ಮೇಲೆಯೇ ನಡೆಸಬೇಕಾಗಿತ್ತು. ಆದರೆ ಅನಿವಾರ್ಯವಾದ ಪರಿಸ್ಥಿತಿಯಲ್ಲಿ ನಾವು ಸಿಕ್ಕಿ ಬಿದ್ದುದರಿಂದ ನಮಗೆ ಬರಲು ಸಾಧ್ಯವಾಗುವುದಿಲ್ಲ. ನೀವೇ ನಿಶ್ಚಿಂತೆಯಿಂದ ಇಂದು ಆ ಹಬ್ಬವನ್ನು ಆಚರಿಸಬೇಕು" ಎಂದು ಆ ಪತ್ರದಲ್ಲಿದ್ದಿತು. ಓದಿ ಧರವಮಟ್ಟಿಯ ಮನೆಗಳವರೆಲ್ಲರೂ ಸಮಾಧಾನಗೊಂಡರು. ಅಂದಿನ ಊಟವಾಗಬೇಕಾದರೆ ಅವರೆಲ್ಲರಿಗೂ ೩ ಗಂಟೆ ವೇಳೆಯನ್ನು ಮೀರಿ ಹೋಗಿತ್ತು.

ಮುಂದೆ ನಾನು ಸಂತೆ–ಚಕ್ಕಡಿಯಲ್ಲಿ ಕುಳಿತು ಮೂಡಲಗಿಗೆ ಹೋದೆ. ಅಲ್ಲಿ ಹೋದರೂ ನನ್ನಿಂದ ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಆಗಲಿಲ್ಲ. ನದಿಯ ನೀರು ಮೂಡಲಗಿಯವರೆಗೂ ಬಂದು ಬಿಟ್ಟಿದ್ದಿತು. ನಮ್ಮಿಂದ ಎರಡು ಮೈಲುಗಳ ಮೇಲಿರುವ ಕಮಲದಿಣ್ಣೆ ಎಂಬ ಗ್ರಾಮದ ದುಸ್ಥಿತಿಯನ್ನು ಜನರು ಮಾತ ನಾಡುತ್ತಲೇ ಇದ್ದರು. ಅದನ್ನು ಕಣ್ಣಾರೆ ಕಾಣಬೇಕೆಂದು ಆತುರ ನನಗೆ. ಮಳೆ ಮೇಲೆ ಹತ್ತಿದ್ದರೂ ನಾನು ಛತ್ರಿಯ ಸಹಾಯದಿಂದ ಕಮಲದಿಣ್ಣೆಯ ಬಳಿ ಹೋಗಿ ನೋಡಿದೆ. ಊರೆಲ್ಲವೂ ನದಿ ಮಧ್ಯದಲ್ಲಿ ಅರ್ಧಕ್ಕಿಂತ ಹೆಚ್ಚು ಮುಳುಗಿದ ಮನೆ ಗಳೊಂದಿಗೆ ದೂರದಿಂದಲೇ ಕಾಣುತ್ತಿದ್ದಿತು. ಜನರೆಲ್ಲರೂ ಮನೆಯಲ್ಲಿರಲು ಸಾಧ್ಯ ವಾಗದೆ ಮಾಳಿಗೆಯ ಮೇಲೆ ಗುಡಾರಗಳನ್ನು ಕಟ್ಟಿಕೊಂಡು ಕೆಲವು ಜನರು ವಾಸ ವಾಗಿದ್ದರು ; ಅನೇಕ ಜನರು ಊರನ್ನೂ ಬಿಟ್ಟು ಹೋಗಿದ್ದರು. ಒಂದು ಮೊಳ– ಎರಡು ಮೊಳದಷ್ಟೇ ಮುಳುಗದೆ ಉಳಿದ ಮನೆಯ ಜನರಿಗೆ ಊಟಕ್ಕೆ ಅವಕಾಶವೆಲ್ಲಿ?

ಅವರಾಗ ಏನು ತಿಂದು ಬದುಕಿದರೋ ಗೊತ್ತಾಗುವಂತಿರಲಿಲ್ಲ. ಬ್ರಿಟಿಶ್ ಆಡಳಿತದ ಸರಕಾರವೂ ತೀವ್ರವಾಗಿ ಈ ಜನರಿಗೆ ಸಹಾಯ ಮಾಡುವ ಯೋಚನೆಯಲ್ಲಿರಲಿಲ್ಲ. ಅತಿಶಯವಾದ ಮಳೆ. ಮಾಳಿಗೆಯ ಮೇಲಿನ ಛಳಿ ಇವುಗಳ ಮೂಲಕ ಎಷ್ಟೋ ಜನರಿಗೆ ಮಲೇರಿಯ ಜ್ವರ ಬಂದು ಬಳಲುತ್ತಿದ್ದರು. ಔಷಧದ ನೆರವೂ ಯಾವುದೂ ಸಿಕ್ಕುವಂತಿರಲಿಲ್ಲ. ಇನ್ನೊಂದು ವಿಷಯವೆಂದರೆ ಕಮಲದಿಣ್ಣೆಯಲ್ಲಿ ಗೋಧಿ, ಬಿಳಿ ಜೋಳಗಳ ಬೆಳೆ ಹೆಚ್ಚು. ಅವುಗಳನ್ನು ಅವರು ಬೇಸಿಗೆಯಲ್ಲಿಯೇ ಹಗೇವುಗಳಲ್ಲಿ ತುಂಬಿ ತುಂಬಿ ಇಟ್ಟು ಪಂಚಮಿ ಹಬ್ಬದ ಮುಂದೆ ಮಾರಾಟ ಮಾಡಿ ಲಾಭ ಪಡೆಯ ಬೇಕೆಂಬ ಕನಸನ್ನು ಕಾಣುತ್ತಿದ್ದರು. ಈ ಮಳೆಯ ಜಲಪ್ರಳಯದ ಕಲ್ಪನೆಯು ಅವರಿಗೆಲ್ಲಿ ? ಎಲ್ಲ ಹಗೇವುಗಳಲ್ಲಿಯೂ ನದಿಯ ನೀರು ಸೇರಿ ಗೋಧಿ, ಬಿಳಿಜೋಳ ಗಳೆಲ್ಲ ಕೊಳೆತು ಹೋದವು. ಒಟ್ಟಿದ ದೊಡ್ಡ ದೊಡ್ಡ ಬಣವೆಗಳೆಲ್ಲ ನದಿಯ ನೀರಲ್ಲಿ ತೇಲಿ ಹೋದುವು. ಕೃಷಿಯ ಸಾಮಾನುಗಳಾದ ನೇಗಿಲು, ರೆಂಟೆ-ಕುಂಟೆಗಳೆಲ್ಲ ನದಿಯ ನೀರಿನ ಪಾಲಾಗಿದ್ದವು. ಆ ಜನರ ಭವಿಷ್ಯಕ್ಕಾಗಿ ಯಾರೂ ಕಲ್ಪನೆ ಮಾಡು ವಂತಿರಲಿಲ್ಲ. ಈ ದೃಶ್ಯವನ್ನು ನೋಡಿದ ನನಗೆ ಆ ದಿವಸ ಊಟದಲ್ಲಿ ರುಚಿ ಕಾಣಲಿಲ್ಲ. ರಾತ್ರಿಯಲ್ಲಿ ನಿದ್ದೆ ಹತ್ತಲಿಲ್ಲ. ಇಂತಹವೇ ಎಷ್ಟೆಷ್ಟೋ ಭೀಕರ ವರ್ತಮಾನಗಳು ನನ್ನ ಕಿವಿಗೆ ಬಂದು ಅಪ್ಪಳಿಸಿದವು. ಗೋಕಾವಿಯ ನಾವೆಯಲ್ಲಿ ಕುಳಿತ ಬಸಿರು ಹೆಣ್ಣುಮಗಳೊಬ್ಬಳು ಅದು ಮುಣುಗಿದಾಗ ತೇಲುತ್ತ ಹೋಗಿ ಒಂದು ಗಿಡವನ್ನು ಆಶ್ರಯಿಸಿ ಕುಳಿತಳಂತೆ. ಅಲ್ಲಿಯೇ ಅವಳಿಗೆ ಪ್ರಸವ ವೇದನೆ ಸುರುವಾಗಿ ಗಂಡು ಕೂಸಿಗೆ ಜನ್ಮವಿತ್ತಳಂತೆ. ಮಳೆಯ ನೀರೇ ಆ ಕೂಸಿಗೆ ಬೆಚ್ಚು ನೀರಾಯಿತು. ಇಂತಹ ಚಳಿಯಲ್ಲಿ ಆ ಕೂಸು ಹೇಗೆ ಬದುಕಿ ಉಳಿಯಿತೋ, ಅದನ್ನು ಹುಟ್ಟಿಸಿದವನೇ ಬಲ್ಲ. ಮುಂದೆ ಈಚೆ ದಂಡೆಯ ಜನರು ತೆಪ್ಪವನ್ನು ಬಿಟ್ಟು ಗಿಡದ ಮೇಲೆ ಹೆರಿಗೆ ಯಾದ ಆ ಹೆಣ್ಣುಮಗಳನ್ನು ಮಹಾಪೂರದಿಂದ ಮಗುಸಹಿತ ಪಾರುಮಾಡಿದರಂತೆ. ಆ ಮೇಲೆ ಆ ಊರ ಜನರ ಸಹಾಯದಿಂದ ಆಕೆಗೆ ಬೆಚ್ಚಗಿನ ಎಡೆಯು ದೊರೆತಿರ ಬಹುದು ; ಆ ಕೂಸಿಗೆ ಬಿಸಿನೀರಿನ ಸ್ನಾನವೂ ಸಿಕ್ಕಿರಬಹುದು.

ಮತ್ತೆ ಕೆಲವು ನೌಕಾಯಾತ್ರಿಗಳು ಕುಳಿತ ಗಿಡದ ಮೇಲೆ ನೀರಲ್ಲಿ ಆಡುತ್ತಿದ್ದ ನಾಗರಹಾವುಗಳು ಬುಸ್ಸೆಂದು ಹತ್ತಿರವೇ ಬಂದು ಬೆದರಿಸುತ್ತಿದ್ದುವಂತೆ. ಎಷ್ಟೋ ಮಂದಿ ನದಿಯ ನೀರಿನ ಸಾವಿನಿಂದ ಪಾರಾದವರು ಈ ಹಾವುಗಳ ಕಡಿತದ ವಿಷದಿಂದ ಹೋದರಂತೆ. ಅವರಿಗೆ ಅಲ್ಲಿಯೇ ಜಲಸಮಾಧಿ. ಮುಂದೆ ನೌಕೆಯು ಹೇಗೆ ಮುಳುಗಿತು ? ಎಷ್ಟು ಜನರು ನಾವೆಯಲ್ಲಿದ್ದರು ? ಅವರಲ್ಲಿ ಸತ್ತವರೆಷ್ಟು ? ಬದುಕಿ ಉಳಿದ ಜನರೆಷ್ಟು ?-ಎಂದು ಸರ್ಕಾರವು ವಿಚಾರಣೆಯನ್ನು ನಡೆಸಿತು. ಆದರೆ ಈ ಪ್ರಳಯದಲ್ಲಿ ಸಿಕ್ಕ ಜನರಿಗೆ ಅದರಿಂದ ಏನು ಪ್ರಯೋಜನ ? ಕಮಲದಿಣ್ಣೆಯ ಜನರ ನೆನಪಾದರಂತೂ ಹೊಟ್ಟೆಯಲ್ಲಿ ಸಂತಾಪವು ಉರಿಯತೊಡಗುವುದು. ಹಸಿವಿನಿಂದ ಅವರು ಜೋಳದ ಕಾಳನ್ನೇ ಮುಕ್ಕಿ, ತಮ್ಮ ಹಸಿವನ್ನು ಕಡಿಮೆಮಾಡಿಕೊಂಡಿರ

ಬಹುದು. ಹಸಿ ಎಲೆಗಳನ್ನಾದರೂ ತಿಂದು ಬದುಕಬೇಕೆಂದರೆ ಆ ವಿಶಾಲವಾದ ಪ್ರವಾಹದಲ್ಲಿ ಎಲೆಯಿದ್ದ ಗಿಡಗಳೂ ಕೈಗೆ ಎಟಕುವಂತಿರಲಿಲ್ಲ. ಹತ್ತಿರದ ಹಳ್ಳಿಯವರು ಹರಗೋಲು ತೆಪ್ಪಗಳನ್ನು ಬಿಟ್ಟು ಆ ಜನರನ್ನು ಮಹಾಪೂರದಿಂದ ಪಾರು ಮಾಡಿ, ತಮ್ಮ ತಮ್ಮ ಹಳ್ಳಿಗಳಿಗೆ ಕರೆದುಕೊಂಡು ಹೋಗಿ ಅವರನ್ನು ಅನೇಕ ದಿನ ಪೋಷಿಸಿದರು. ಜನರು ಬದುಕಿದರೂ. ಮನೆಯೊಂದೂ ಉಳಿಯಲಿಲ್ಲ. ಗೋಡೆಗಳೆಲ್ಲ ಸಡಲಿ, ನೀರಿನ ಪ್ರವಾಹಕ್ಕೆ ಸಿಕ್ಕು ಎಲ್ಲವೂ ನದಿಯೊಂದಿಗೆ ಹರಿದು ಹೋಗಿ ಊರೆಲ್ಲವೂ ಹಾಳು ಕೊಂಪೆಯಾಯಿತು. ನಿಸರ್ಗವು ತಂದ ಆಪತ್ತಿಯದು. ಅದಕ್ಕೆ ಪ್ರತಿಯಾಗಿ ಮಾನವರು ಎಷ್ಟೆಂದು ಸಹಿಸಿ ನಿಲ್ಲಬಹುದು ? ಆದರೂ ಜನರಲ್ಲಿ ಅಡಗಿದ ಒಂದು ಮನುಷ್ಯತ್ವದ ಕಾರಣದಿಂದಲೇ ಆ ಆಪತ್ತಿನಿಂದ ಕೆಲವೇ ಜನರು ಹೋದರೂ ಮಿಕ್ಕ ಜನರು ಬದುಕಿ ಉಳಿದರು.

ಪುನರ್ವಸು ಮಳೆಯು ಹೋಗಿ ಪುಷ್ಯ ಮಳೆಯ ನಾಲ್ಕೂ ಚರಣಗಳೂ ಆನೆಯ ಸೊಂಡಿಲದಂತೆ ಮಳೆಯನ್ನು ಸುರಿಸಿದವು. ಯಾವ ಹಳ್ಳಿಗೂ ಜನರು ಹೋಗುವಂತಿರಲಿಲ್ಲ. ಅಲ್ಲಲ್ಲಿಯ ಹಳ್ಳ–ಸರಿವುಗಳು ತುಂಬಿ ಹರಿದು ಜನರ ದಾರಿಗಳನ್ನೇ ಕಟ್ಟು ಮಾಡಿದ್ದವು. ಯಾವುದೇ ಹಳ್ಳಿಯಲ್ಲಿ ಎಂತಹ ದೊಡ್ಡ ಮನುಷ್ಯನು ತೀರಿಹೋದರೂ ಅವರ ಬಳಗ ಎಷ್ಟೇ ದೊಡ್ಡದಿದ್ದರೂ ಅವರ ಕೊನೆಯ ಭೇಟಿಯನ್ನು ಕಾಣದೆ ಸತ್ತು ಹೋಗುತ್ತಿದ್ದನು. ಸತ್ತವರನ್ನು ಸ್ಮಶಾನದಲ್ಲಿ ದಹಿಸುವುದಕ್ಕೂ ಮಳೆಯು ತೆರವು ಕೊಡುತ್ತಿರಲಿಲ್ಲ. ಜನರು ಮಳೆಯನ್ನು ಬೇಡುತ್ತಿದ್ದರು. ಆಗ ಕೊಡದ ದೇವರು ಈಗ ಹತ್ತು ಕೈಗಳಿಂದ, ನೂರು ಕೈಗಳಿಂದ ನೀರನ್ನು ಸುರಿಸಿ ಜನರನ್ನು ಸಂಕಟಕ್ಕೆ ಗುರಿಮಾಡಿದ. ಆ ವರ್ಷ ಬೆಳೆದ ಬೆಳೆಯೂ ಅಪಾರವಾಗಿದ್ದಿತು. ಮುಂಗಾರಿಯ ಬೆಳೆಗಳೆಲ್ಲ ಬಿತ್ತದೆ ಹೋದರೂ ಹಿಂಗಾರಿಯ ಬೆಳೆಯನ್ನು ಆ ಮಳೆಯು ಸಮೃದ್ಧವಾಗಿ ಬೆಳೆಸಿ ಒದಗಿಸಿತು. ಆದರೆ ನೀರಿನಲ್ಲಿ ತೋಯ್ದ ಕಾಳುಗಳು ಕೊಳೆತು ಅದರ ವಾಸನೆ ಎಲ್ಲ ಊರುಗಳಲ್ಲಿಯೂ ಜನರನ್ನು ಬೇಸರಿಸಿತು. ಆ ಕೊಳೆತ ಕಾಳನ್ನು ತಿನ್ನುವ ಜನರಾರು ? ದನಗಳು ಕೂಡ ಆ ಕಾಳನ್ನು ತಿನ್ನಲು ಹಿಂಜರಿಯುತ್ತಿದ್ದವು.

ಆದರೆ ಮನುಷ್ಯ ತನ್ನ ಹಸಿವನ್ನು ಹಿಂಗಿಸಿಕೊಳ್ಳಲು ಅಂತಹ ಕೊಳೆತ ಕಾಳನ್ನೇ ಹೊಸ ಕಾಳುಗಳು ಬರುವವರೆಗೆ ಉಪಯೋಗಿಸಿಕೊಳ್ಳಬೇಕಾಯಿತು. ಪೇಟೆಯಲ್ಲಿಯೂ ಅಂತಹ ಕೊಳೆತ–ಕಾಳುಗಳ ವ್ಯಾಪಾರ ನಡೆಯಿತು. ಒಂದು ರೂ. ಕೊಟ್ಟರೆ ೧೬ ಸೇರು, ಇನ್ನೂ ಹೆಚ್ಚು ಆ ಕೊಳೆತ–ಕಾಳಿಗೆ ಧಾರಣೆ ಸಿಗುತ್ತಿತ್ತು. ಮೂಡಲಗಿ ಪೇಟೆಯಲ್ಲಿ ಎಷ್ಟೋ ದಿನ ತಿರುಗಾಡಲಿಕ್ಕೆ ಮಾರ್ಗವಿರಲಿಲ್ಲ. ಅಷ್ಟೊಂದು ಕಾಳುಗಳು ತುಂಬಿ, ಜನರಿಗೆ ತಮ್ಮ ಕೊಳಕು ವಾಸನೆಯಿಂದ ಹೇಸಿಗೆ ಬರಿಸುತ್ತಿದ್ದವು, ೧೯೧೪ನೇ ಇಸವಿಯಂತಹ ಜಲಪ್ರಳಯವನ್ನು ಅವರ ಏಟಿಗೆ ಸಿಕ್ಕಂತಹ ಜನರನ್ನೂ, ಇದುವರೆಗೂ ನಾನು ನೋಡಿಲ್ಲ. ಅಂತಹ ಕಾಲದಲ್ಲಿ ನಾನು ಬದುಕಿ ಉಳಿದೆ. ❀

ಹೊಸ ಓದು

ಕನ್ನಡ ಜಾನಪದ: ಕೆಲವು ಮುಖಗಳು

ಲೇಖಕರು: **ಟಿ. ಎಸ್. ಸತ್ಯನಾಥ್**

ಪ್ರಕಾಶಕರು: ಶಾರದ ಪ್ರಕಾಶನ, ಗಾಂಧಿ ನಗರ, ಬೆಂಗಳೂರು – 560 009

ಪುಟ 220. ಬೆಲೆ: 25 ರೂಪಾಯಿ

ಈ ಗ್ರಂಥವು ಒಟ್ಟು 8 ಲೇಖನಗಳನ್ನು ಒಳಗೊಂಡಿದೆ. ಈ ಲೇಖನಗಳನ್ನು ಕಳೆದ ಹನ್ನೆರಡು ವರ್ಷಗಳಲ್ಲಿ ಬರೆಯುತ್ತ ಬಂದವುಗಳೆಂದು ಲೇಖಕರು ಮೊದಲ ನುಡಿಯಲ್ಲಿ ಹೇಳುತ್ತಾರೆ. ಹೀಗಾಗಿ ಜಾನಪದ ಅಧ್ಯಯನವನ್ನು ಕುರಿತ ತಾತ್ವಿಕ ಚರ್ಚೆಯನ್ನು ಮಂಡಿಸುವಾಗ ಹಲವು ಕಡೆಗಳಲ್ಲಿ ಪುನರಾವರ್ತನೆಗಳು ತೋರುವುದು ಸಹಜವಾಗಿದೆ. ಈ ಸಂಕಲನದ ಎಂಟು ಲೇಖನಗಳಲ್ಲಿ ಐದು ಲೇಖನಗಳು ಜಾನಪದ ಅಧ್ಯಯನ ಕ್ರಮವನ್ನೂ, ಸಂಸ್ಕೃತಿಯ ಸ್ವರೂಪವನ್ನೂ ಅರಿಯಲು ಪ್ರಯತ್ನಿಸುತ್ತವೆ. ಇನ್ನು ಮೂರು ಲೇಖನಗಳು–'ಆಟದ ವಿಶ್ಲೇಷಣೆ', 'ಅಂತ್ಯ ಸಂಸ್ಕಾರ–ಆಚರಣೆಯ ವಿಶ್ಲೇಷಣೆ', ಹಾಗೂ 'ಕಪೋತಾಖ್ಯಾನ' ಕಥೆಯ ರಚನೆಯ ಸ್ವರೂಪವನ್ನು ವಿಶ್ಲೇಷಿಸುವ ಕೆಲಸವನ್ನು ಮಾಡುತ್ತವೆ.

ಸಂಕಲನದ ಮೊದಲ ಮೂರು ಲೇಖನಗಳು ಜಾನಪದ ಅಧ್ಯಯನವನ್ನು ಕುರಿತು ಚರ್ಚೆಯನ್ನು ಮಂಡಿಸುತ್ತವೆ. ಮೊದಲ ಲೇಖನ 'ಕನ್ನಡ ಜಾನಪದ ವರ್ಗೀಕರಣ–ಒಂದು ಸಲಹೆ', ಕನ್ನಡ ಜಾನಪದದ ವರ್ಗೀಕರಣವನ್ನು ಕುರಿತ ಹಾಗೆ ಉಪಯುಕ್ತ ಚರ್ಚೆಯನ್ನು ಮಂಡಿಸುತ್ತದೆ. "ನಮ್ಮ ಜಾನಪದ ಪ್ರಕಾರಗಳು ತಮ್ಮ ಶಾಬ್ದಿಕ ಜಾನಪದವನ್ನಷ್ಟೇ ಅಲ್ಲದೆ ಅದರ ಜೊತೆಗೆ ವಿಶಿಷ್ಟ ಸಂದರ್ಭದ ಪೂಜೆ, ವಿಧಿವಿಧಾನಗಳನ್ನು ಉಳಿಸಿಕೊಂಡಿರುವ ಆಚರಣೆಗಳಾಗಿವೆ. ಇವುಗಳು ಒಂದು ನಿರ್ದಿಷ್ಟ ಪರಿಸರದಲ್ಲಿ ಆಚರಿಸಲ್ಪಟ್ಟು ಒಂದು ಪ್ರಕಾರವೆಂದೆನಿಸಿಕೊಳ್ಳುತ್ತವೆ. ಇವನ್ನು ಸಾಂದರ್ಭಿಕ ಜಾನಪದ ಎಂದು ಕರೆಯಬಹುದು. ಇಂಥ ಸಾಂದರ್ಭಿಕ ಪರಿಸರವಿಲ್ಲದ ಪ್ರಕಾರಗಳನ್ನು ಅಸಾಂದರ್ಭಿಕ ಜಾನಪದ ಎಂದು ಕರೆಯಬಹುದು" ಎಂದು ಲೇಖಕರು ಹೇಳುತ್ತಾರೆ. ಎರಡೂ ವಿಭಾಗಗಳಲ್ಲಿ ಬರುವ ಜಾನಪದ ಪ್ರಕಾರ

ಗಳನ್ನು 6 ಜನಪದ ಅಂಶಗಳ ಮೂಲಕ ವಿಶಿಷ್ಟ ಸ್ವರೂಪವನ್ನು ಅರಿಯುವ ಅಧ್ಯಯನ ಕ್ರಮವನ್ನು ಲೇಖಕರು ಸೂಚಿಸುತ್ತಾರೆ. ಈ ಅಂಶಗಳನ್ನು ಕ್ರಮವಾಗಿ, ಸಂದರ್ಭ, ಹಾಡುಗಾರಿಕೆ, ನಿರೂಪಣೆ, ಅಭಿನಯ, ಪಾದ್ಯ ಮತ್ತು ಭಾಗವಹಿಸುವಿಕೆ ಎಂದು ವಿಂಗಡಿಸಿಕೊಳ್ಳುತ್ತಾರೆ. ಕಂಪ್ಯೂಟರ್‌ಗೆ ಅಳವಡಿಸುವ ವಿನ್ಯಾಸವನ್ನು ಕುರಿತಂತೆ ಸಂಖ್ಯಾಕ್ರಮವನ್ನು ಸೂಚಿಸುತ್ತಾರೆ.

ಕನ್ನಡ ಜಾನಪದ ಕೇವಲ ಸಂಗ್ರಹ ಹಾಗೂ ವೈಭವೀಕರಿಸಿದ, ರಸನಿಷ್ಠ ವಿವರಣೆಯ ಅಂಗವಾಗಿ ಹೋಗಿರುವ ಸಂದರ್ಭದಲ್ಲಿ ಜಾನಪದ ಅಧ್ಯಯನಕ್ಕೆ ಒಂದು ಕ್ರಮವೊದಗಿಸುವ ವರ್ಗೀಕರಣ ಮಾಡುವ ಒಂದು ಪ್ರಯತ್ನವು ಇದು ಎಂದು ಲೇಖಕರು ಹೇಳುತ್ತಾರೆ.

'ಜಾನಪದದಲ್ಲಿ ಕ್ಷೇತ್ರಕಾರ್ಯ-ಕೆಲವು ವಿಚಾರಗಳು' ಎಂಬ ಎರಡನೇ ಲೇಖನವು ಕ್ಷೇತ್ರ ಕಾರ್ಯ ಮಾಡುವಾಗ "ಸಾರ್ವತ್ರಿಕವಾಗಿ ಪ್ರಕಟವಾದ ಮತ್ತು ಒಪ್ಪಿಗೆಯಾದ ಕ್ಷೇತ್ರಕಾರ್ಯ ಪ್ರಶ್ನಾವಳಿ ಇಲ್ಲ" ಎನ್ನುವ ಕಾರಣಕ್ಕಾಗಿ ಸಂಗ್ರಾಹಕರ ಅವಗಾಹನೆಗಾಗಿ ಪ್ರಶ್ನಾವಳಿಯನ್ನು ಸಿದ್ಧಪಡಿಸಲಾಗಿದೆ. ಪ್ರಶ್ನಾವಳಿ ಮುಖ್ಯವಾಗಿ ಪ್ರದರ್ಶಕರು ಹಾಗೂ ಪ್ರೇಕ್ಷಕರು ಇವರಿಗೆ ಸಂಬಂಧಿಸಿದ್ದಾಗಿದೆ. ವಾಸ್ತವವಾಗಿ ಈ ಪ್ರಶ್ನಾವಳಿ ಮುಖ್ಯವಾಗಿ ಪ್ರದರ್ಶನ ಕಲೆಗಳಿಗೆ ಸಂಬಂಧಿಸಿದ್ದು ಜನಪದ ಆಚರಣೆಯ ಅಧ್ಯಯನ ಕ್ರಮಕ್ಕೆ ಇದು ಅನ್ವಯವಾಗುವ ರೀತಿಯು ಬಹಳ ಕ್ವಚಿತ್ತೇದೇ ಹೇಳಬೇಕು. ಲೇಖಕರು ಈ ಲೇಖನದಲ್ಲಿ ಪಾಶ್ಚಿಮಾತ್ಯ ಅಧ್ಯಯನ ಕ್ರಮದ ಮಾದರಿಯನ್ನೇ ಪರಿಪೂರ್ಣವೆಂದು ಭಾವಿಸಿದಂತಿದೆ. ಹೀಗಾಗಿ ಕ್ಷೇತ್ರಕಾರ್ಯವನ್ನು ಹೆಚ್ಚು ತಾಂತ್ರಿಕತೆಗೆ ಗುರಿ ಮಾಡುವ, ಹೊರರೂಪಗಳಿಗೆ ಹೆಚ್ಚು ಮಹತ್ವಕೊಡುವ ಅಪಾಯಕ್ಕೆ ಗುರಿ ಮಾಡುವ ಸಾಧ್ಯತೆಯು ಇಂಥ ಕಡೆಗಳಲ್ಲಿ ಹೆಚ್ಚಾಗುತ್ತದೆ. ಜಾನಪದ ಅಭಿವ್ಯಕ್ತಿ ಮತ್ತು ಆಚರಣೆಯನ್ನು ನಾವು ಸಂಸ್ಕೃತಿಗಳ ಅಭಿವ್ಯಕ್ತಿಯ ನೆಲೆಗಟ್ಟಿನಿಂದಲೇ ನೋಡಬೇಕಾಗುತ್ತದೆ. ಜಾನಪದವು ನಮಗೆ ಸಾರ್ವತ್ರಿಕವಾದ ಸಾಂಸ್ಕೃತಿಕ ಅಂಶವನ್ನೂ ಕೊಡುವುದಿಲ್ಲ. ಬದಲಿಗೆ ಸಂಸ್ಕೃತಿಗಳ ಹಲವು ಪದರುಗಳ, ಅನೇಕ ಸೂಕ್ಷ್ಮಗಳ, ವೈಲಕ್ಷಣಗಳ ನೋಟಗಳನ್ನು ಕೊಡುತ್ತದೆ. ಅಧ್ಯಯನವನ್ನೂ ಜನಪದ ಆಚರಣೆ, ಅದರ ವಿವಿಧ ಅಂಗಗಳ ಒಳಹೊಕ್ಕೇ ನೋಡಬೇಕಾಗುತ್ತದೆ. ಹೀಗಾಗಿ ಅಧ್ಯಯನ ಕ್ರಮದ ಸ್ವರೂಪವು ಯಾಂತ್ರೀಕವಾದ ವಿಭಾಗೀಕರಣದ ಕಡೆಗೆ ಹೋಗುವುದಕ್ಕಿಂತ ಅದರ ವಿರುದ್ಧ ದಿಕ್ಕಿನತ್ತ ಹೆಜ್ಜೆ ಹಾಕಬೇಕು. ಇದರ ಅರ್ಥ ಜಾನಪದ ಅಧ್ಯಯನ ಕ್ರಮದ ರೀತಿಯು-ಜಾನಪದ ಅಭಿವ್ಯಕ್ತಿಗಳ ಅಧ್ಯಯನದ ಅಂಗವಾಗಿಯೇ ರೂಪುಗೊಳ್ಳಬೇಕಾಗಿದೆ ನಮ್ಮ ಸಂದರ್ಭದಲ್ಲಿ. ಅದನ್ನು ಬಿಟ್ಟು ಹೇಳುವ ಎಲ್ಲ ಅಧ್ಯಯನ ಕ್ರಮದ ಪರಿಭಾಷೆಗಳು ನಾವು ಎಷ್ಟೇ ನಿರಾಕರಣೆ ಮಾಡಿದರೂ ಪಾಶ್ಚಿಮಾತ್ಯ ಜನಪದ

ವಿದ್ವಾಂಸರ ಮಾನದಂಡಗಳನ್ನೇ ಆಶ್ರಯಿಸುವಂತಾಗುತ್ತದೆ. ಶಿವರಾಮ ಕಾರಂತ ರಂಥವರ ಅಧ್ಯಯನಗಳು ಈ ದಿಸೆಯಲ್ಲಿ ನಮಗೆ ದಾರಿಯನ್ನು ತೋರಬಲ್ಲವುಗಳಾಗಿವೆ. ಸಂಗ್ರಹಗಳ ರಾಶಿಗಳು ಹೊರಬರುವ ವಿಧಾನವನ್ನೂ ಇಂಥ ಅಧ್ಯಯನದ ಧಾಟಿಯು ಪರಿಣಾಮಕಾರಿಯಾಗಿ ಪ್ರಶ್ನಿಸಬಹುದಾಗಿದೆ.

'ನಗರ ಜಾನಪದ–ಒಂದು ವಿಶ್ಲೇಷಣೆ' ಸಂಕಲನದ ಮೂರನೇ ಲೇಖನ. 'ನಗರ ಜಾನಪದ' ಎಂಬ ಪಾರಿಭಾಷಿಕ ಪದದ ಬಳಕೆಗೆ ಅನುಗುಣವಾದ ಅಂಥ ಜಾನ ಪದ ಬೆಳವಣಿಗೆ ಇದೆಯೇ ಎನ್ನುವ ಪ್ರಶ್ನೆಯ ಮೂಲಕ ಅಧ್ಯಯನವು ಇಲ್ಲಿ ನಡೆದಿದೆ. ಮೂರನೇ ಜಗತ್ತಿನ ಪ್ರಗತಿಶೀಲ ರಾಷ್ಟ್ರಗಳಲ್ಲಿನ ನಗರಗಳು ಪೂರ್ಣ ನಗರ ಸಂಸ್ಕೃತಿಯ ಘಟ್ಟವನ್ನು ಹೊಂದಿದವುಗಳೇನಲ್ಲ. ನಗರ–ಹಳ್ಳಿಗಳ ಜೀವನ ಸಂಬಂಧ, ಸಂಸ್ಕೃತಿಯ ಆಶಯಗಳು ಪರಸ್ಪರ ಚಲನೆಯಲ್ಲಿರುವ ಸ್ಥಿತಿ ಇಲ್ಲದುದು ಎಂದು ವಿವರಿಸುತ್ತ ಇಂಥ ಕಡೆಗಳಲ್ಲಿ 'ನಗರಗಳಲ್ಲಿ ಹಳ್ಳಿಯ ಜಾನಪದ ಕಂಡುಬರುತ್ತದೆ ಅಷ್ಟೆ. ಇದು ನಗರ ದಲ್ಲಿ ಹುಟ್ಟಿದ ಜಾನಪದ ಅಲ್ಲ ; ನಗರಕ್ಕೆ ವಿಸ್ತರಿಸಿದ ಜಾನಪದವಾಗಿದೆ' ಎನ್ನುವ ಅಭಿಪ್ರಾಯಕ್ಕೆ ಬರುತ್ತಾರೆ. ಸಂಕಲನದ ಲೇಖನಗಳಲ್ಲಿ ಇದು ಒಂದು ಮಹತ್ವವಾದ ಲೇಖನವೆನ್ನಬಹುದು. ಏಕೆಂದರೆ ಪಾಶ್ಚಾತ್ಯರ ಜಾನಪದ ಕಲ್ಪನೆಗಳು ನಮ್ಮಲ್ಲಿ ತಪ್ಪು ನಿರ್ವಚನಕ್ಕೆ ಹೇಗೆ ಕಾರಣವಾಗುತ್ತವೆ ಎನ್ನುವುದನ್ನು ಈ ಲೇಖನ ವಿವರಿಸು ತ್ತದೆ. ಆದರೆ ಒಂದು ಅಂಶವನ್ನು ಲೇಖಕರು ಗಮನಿಸಿದ್ದರೆ ಲೇಖನ ಇನ್ನೂ ಕೆಲವು ಮುಖ್ಯ ಆಶಯಗಳನ್ನು ಗಮನಕ್ಕೆ ತಂದುಕೊಳ್ಳಬಹುದಾಗಿತ್ತು. ಯಾವು ದೆಂದರೆ–ನಗರವಾಸಿಗಳಾದ ಇಲ್ಲಿಯ ಜನರ ಕೌಟುಂಬಿಕ ಬದುಕು, ನಂಬಿಕೆ ಮತ್ತು ತಾವು ದುಡಿಯುವ ಆರ್ಥಿಕ ವ್ಯವಸ್ಥೆಯ ವಾತಾವರಣವು, ಇವರಲ್ಲಿ ಎರಡು ಭಾವ ಗಳನ್ನು ಸೃಷ್ಟಿಸುತ್ತವೆ. ಮೊದಲನೆಯದರಲ್ಲಿ ಈಗಾಗಲೇ ಸಂಪ್ರದಾಯಗೊಂಡ ಚಕ್ರಾಕಾರ ಕಾಲದ ಪರಿಕಲ್ಪನೆ ಇವರ ಬದುಕಿನ ಹತ್ತು ಹಲವು ಆಚರಣೆ, ನಂಬಿಕೆ, ದೇವಾರಾಧನೆಗಳಲ್ಲಿ ತುಂಬಿರುತ್ತದೆ. ಇವರು ದುಡಿಯುವ ವಾತಾವರಣ ಮಾತ್ರ ಸರಳರೇಖಾತ್ಮಕ ಜೀವನ ಭೂಮಿಕೆಯ ಕಾಲಕ್ರಮವಾಗಿದೆ. ಇಂಥ ದ್ವಂದ್ವದಲ್ಲಿ ಹಳ್ಳಿಯ ಜಾನಪದ ನಗರ ಸಂದರ್ಭದ ಬದುಕಿನ ನಡುವೆ ಸಾಂಸ್ಕೃತಿಕ ಸ್ಥಿತ್ಯಂತರದ ಸ್ವರೂಪವನ್ನೇನಾದರೂ ಪ್ರತಿಪಾದಿಸುತ್ತದೆಯೇ ? ಹೇಗೆ ? ಈ ಅಭಿವ್ಯಕ್ತಿಗಳ ಸ್ವರೂಪಗಳ ಗಾಢವಾದ ಅಧ್ಯಯನ ಈ ದೃಷ್ಟಿಯಿಂದ ಆಗುವುದು ಅಗತ್ಯವಿದೆ. ವ್ಯಂಗ್ಯವೆಂದರೆ ನಮ್ಮಲ್ಲಿ ಈಗ ಪಟ್ಟಣದ ವಿದ್ಯಾವಂತ ಜಾನಪದ ವಿದ್ವಾಂಸರು ರಾಶಿ ಗಟ್ಟಲೆ ಕೂಡಿಹಾಕಿದ ಜಾನಪದ ಸಂಗ್ರಹಗಳು ಅರ್ಥಪೂರ್ಣತೆಯನ್ನು ಕಳೆದುಕೊಂಡು 'ನಗರ ಜಾನಪದ'ಗಳಾಗಿಬಿಟ್ಟಿವೆ.

ಈ ಸಂಕಲನದ ಎರಡು ಮುಖ್ಯ ಲೇಖನಗಳೆಂದರೆ 'ಆಟ'ಗಳನ್ನು ಕುರಿತ ಅಧ್ಯ ಯನ ಹಾಗೂ ಕಪೋತಾಖ್ಯಾನವನ್ನು ಕುರಿತ ರಾಚನಿಕ ಅಧ್ಯಯನ. ಆಟಗಳನ್ನು

ಕುರಿತ ಅಧ್ಯಯನವು ಮನೋವೈಜ್ಞಾನಿಕ ಹಾಗೂ ಸಂಸ್ಕೃತಿಯ ವೈಶಿಷ್ಟ್ಯತೆಯ ಹಿನ್ನೆಲೆಯಲ್ಲಿ ಆಟವನ್ನು, ಮನುಷ್ಯರ ಸಾಮಾಜಿಕ ವರ್ತನೆಗಳನ್ನು ವಿವರಿಸುತ್ತದೆ. ಅನೇಕ ಕಡೆಗಳಿಂದ ಈ ವಿವರಣೆಗೆ ನಿದರ್ಶನಗಳನ್ನು ನೀಡಲಾಗಿದೆ. ಶಾಬ್ದಿಕ, ಅಶಾಬ್ದಿಕ ಅಭಿವ್ಯಕ್ತಿಯ ಹಿನ್ನೆಲೆಯ ಸಂಸ್ಕೃತಿಯ ವೈಶಿಷ್ಟ್ಯವನ್ನು ಇಲ್ಲಿ ವಿವರಿಸ ಲಾಗಿದೆ. ಆಟದ ಮೂಲಕ ಸಂಸ್ಕೃತಿಯ ವೈಶಿಷ್ಟ್ಯತೆಗಳು ವ್ಯಕ್ತಿಯಲ್ಲಿ ಅಂತಸ್ಥ ಗೊಳ್ಳುವುದು ಹೇಗೆ ಎನ್ನುವುದನ್ನೂ ಇಲ್ಲಿ ವಿವರಿಸಲಾಗಿದೆ.

'ಕಪೋತಾಖ್ಯಾನ'ದ ರಾಚನಿಕ ಅಧ್ಯಯನವು-ಈ ಕಥೆಯ ವಿವಿಧ ಪಾಠಗಳು ವಿವಿಧ ಕಾಲದಲ್ಲಿ ಯಾವ ಮಹತ್ವದ ಅಂಶಗಳಿಗೆ ಒತ್ತು ಕೊಡುತ್ತವೆ, ಯಾವುದನ್ನು ಬಿಡುತ್ತವೆ ಎನ್ನುವ ಅಂಶಗಳ ಹಿನ್ನೆಲೆಯಲ್ಲಿ ಕಥೆಯ ಅಧ್ಯಯನ ಮಾಡುತ್ತದೆ. ಕಥೆಯ ಸ್ಥಿರಾಂಶ, ಚರಾಂಶಗಳನ್ನು ಗುರುತಿಸುತ್ತ-ಇವುಗಳು ಪ್ರವರ್ತಿಸುವ ಭಾಗ ಗಳು ಹೇಗೆ ಸಾಂಸ್ಕೃತಿಕವಾದ ಅಂಶಗಳನ್ನು ಬಿಟ್ಟುಕೊಡುತ್ತವೆ ಎನ್ನುವುದನ್ನು ಲೇಖನವು ಗುರುತಿಸುತ್ತದೆ.

ಬ್ರಾಹ್ಮಣರ ಅಂತ್ಯಸಂಸ್ಕಾರದ ಅಧ್ಯಯನವನ್ನು ಕುರಿತ ಲೇಖನ ಈ ಸಂಕಲನ ದಲ್ಲಿ ಕೊನೆಯ ಲೇಖನ. ಈ ಅಧ್ಯಯನಕ್ಕೆ ಇವರು ಹಾಕಿಕೊಂಡ ತಾತ್ವಿಕ ಹಿನ್ನೆಲೆ ಲೆವಿಸ್ಟ್ರಾಸ್‌ನ ರಾಚನಿಕ ಪಂಥ ಹಾಗೂ ಸಂಸ್ಕೃತಿಯ ಸಿಂಟಾಗ್ಮ್ಯಾಟಿಕ್ ಹಾಗೂ ಪ್ಯಾರಾ ಡಿಗ್ಮ್ಯಾಟಿಕ್ ಸಂಬಂಧಗಳ ನೆಲೆಯಲ್ಲಿ ರೂಪುಗೊಂಡಿದೆ. ಲೇಖನದಲ್ಲಿ ಚಕ್ರಾಕಾರದ ಕಾಲಪರಿಕಲ್ಪನೆ, ಸಾವು-ಮರುಹುಟ್ಟಿನ ನಂಬಿಕೆಗಳು, ಕರ್ಮ ಸಿದ್ಧಾಂತ, ಇವುಗಳ ಬಗ್ಗೆ ವಿವರವಾದ ಚರ್ಚೆಯಿದೆ. ಇದು 'ಅಂತ್ಯಸಂಸ್ಕಾರ'ದ ಅಧ್ಯಯನಕ್ಕೆ ಪೂರಕವಾದ ಹಿನ್ನೆಲೆಯಾಗಿದೆ ಲೇಖನದ ತಾತ್ವಿಕ ಚೌಕಟ್ಟೇ ಮೊದಲಿಗೆ ಪ್ರಶ್ನಾರ್ಹ. ಭಾರತದ ಜನಜೀವನದ ಸಂದರ್ಭದಲ್ಲಿ ಈ ಆಚರಣೆಯು ಸಾರ್ವತ್ರಿಕ ನೆಲೆಗಳನ್ನು ಗುರುತಿಸುವ ಧಾಟಿಯೇ ಪ್ರಶ್ನಾರ್ಹವಾಗಿದೆ. ಲೆವಿಸ್ಟ್ರಾಸ್‌ನ ತಾತ್ವಿಕ ಧಾಟಿಯನ್ನು ಈ ಹಿನ್ನೆಲೆ ಯಲ್ಲಿ ಬಳಸಿಕೊಳ್ಳುವುದು ಇಲ್ಲಿ ತಪ್ಪುದಾರಿಗೆ ಎಳೆಯುತ್ತದೆ. ಏಕೆಂದರೆ, ಕರ್ಮ ತತ್ವ ಮತ್ತು ಪುನರ್‌ಜನ್ಮ ಈ ಎರಡು ತಾತ್ವಿಕ ಕಲ್ಪನೆಗಳನ್ನು ಪ್ರಜ್ಞಾಪೂರ್ವಕವಾಗಿ ವಿರೋಧಿಸಿದ ಸುಸ್ಕೃತಿಯ ಸ್ತರಗಳು ಭಾರತದ ಸಂದರ್ಭದಲ್ಲಿ ಪ್ರಮುಖವಾಗಿವೆ. ಅನೇಕ ಜನಪದ ಅಭಿವ್ಯಕ್ತಿಗಳಲ್ಲಿ ಕರ್ಮ, ಸ್ವರ್ಗದ ಕಲ್ಪನೆಗಳ ವಿರೋಧವಿರುವುದನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿದರೆ ತಿಳಿಯಬಹುದು. ಬ್ರಾಹ್ಮಣವರ್ಗದ ಈ ಕಲ್ಪನೆ ಉಳಿದ ಸಾಮಾಜಿಕ, ಜನಜೀವನದ ಪ್ರಜ್ಞಾಪ್ರವಾಹದಲ್ಲಿ, ಬದುಕಿನಲ್ಲಿ ಪ್ರವಹಿಸಿದ್ದರೆ ಅದು ಯಾಕೆ ? ಹೇಗೆ ? ಎನ್ನುವ ಸಾಂಸ್ಕೃತಿಕ ಚರ್ಚೆಯ ಅಂಗವಾಗಿ ಈ ಅಂತ್ಯಸಂಸ್ಕಾರ ವಿಧಿಯ ಅಧ್ಯಯನ ತಳುಕು ಹಾಕಿಕೊಳ್ಳಬೇಕು. ಇಲ್ಲದಿದ್ದರೆ, ಬ್ರಾಹ್ಮಣ ಅಂತ್ಯಸಂಸ್ಕಾರ ವಿಧಿಯ ವಿವರಣೆಗಳು ವಿವರಣಾತ್ಮಕ ನೆಲೆಯಲ್ಲಿ ಉಳಿ

ಯುತ್ತವೆ ಹಾಗೂ ಉಳಿದ ಬ್ರಾಹ್ಮಣೇತರ ಪಂಥಗಳು, ಮಾಡುವ, ಅಂತ್ಯಸಂಸ್ಕಾರ ವಿಧಿಗಳನ್ನು ಕರ್ಮಸಿದ್ಧಾಂತ ತತ್ವದೊಡನೆ ಸಂಬಂಧ ಕೂಡಿಸಿ. ಹೋಲಿಸಿ-ಸಾರ್ವ ತ್ರಿಕ ನಿರ್ಣಯಗಳನ್ನು ಹೇಳುವ ಅಪಾಯಕ್ಕೆ ಈಡಾಗುತ್ತೇವೆ. ಸಂಸ್ಕೃತಿಯ ಅಧ್ಯಯನದ ಸೂಕ್ಷ್ಮಸ್ತರಗಳನ್ನು ಗಮನಿಸದೇ ಹೋಗುವ ಅಪಾಯ ಇಲ್ಲಿದೆ.

ಸತ್ಯನಾಥರ ಈ ಗ್ರಂಥವು 'ಆಟಗಳ ಅಧ್ಯಯನ', 'ಕಪೋತಾಖ್ಯಾನ-ವಿಶ್ಲೇಷಣೆ' ಮುಂತಾದ ಲೇಖನಗಳಲ್ಲಿ ಹಲವು ಒಳನೋಟಗಳನ್ನು ಕೊಡುವುದರ ಮೂಲಕ ಹೊಸ ವಿಶ್ಲೇಷಣೆಯ ಧಾಟಿಯನ್ನು ತೋರುತ್ತದೆ. ಜಾನಪದ ಅಧ್ಯಯನದ ತಾತ್ವಿಕ ಚರ್ಚೆಯಲ್ಲಿ ಇನ್ನೂ ವಿವರಣೆಗೆ ಗುರಿಯಾಗಬೇಕಾದ, ಒಳಗಾಗಬೇಕಾದ ಸಂಗತಿಗಳಿದ್ದರೂ ಮೂಲಭೂತವಾಗಿ ಅವರ ತಾತ್ವಿಕ ಚೌಕಟ್ಟು ತಾಂತ್ರಿಕವಾದ ಪಶ್ಚಿಮ ಮಾದರಿಗಳ ಕಡೆಗೆ ವಾಲುತ್ತಿದೆಯೇನೋ ಎನ್ನುವ ಅನುಮಾನಗಳು ಹುಟ್ಟುತ್ತವೆ. ನನ್ನ ಪ್ರಕಾರ ಜಾನಪದ ಸಂಸ್ಕೃತಿಯ ಅಧ್ಯಯನವನ್ನು ಮಾಡುತ್ತಲೇ ನಾವು ತಾತ್ವಿಕ, ಸಾಂಸ್ಕೃತಿಕ ಒಳವಿವರಗಳನ್ನೂ ಕಟ್ಟಬೇಕಾದದ್ದು ಇದೆ ಎಂದು ಅನ್ನಿಸುತ್ತದೆ. ಆದರೆ ಈ ಗ್ರಂಥವು ಅಧ್ಯಯನದ ಹೊಸ ಹಾದಿಗಳ ಕಡೆಗೆ ಹಾತೊರೆಯುತ್ತದೆ ಎನ್ನುವುದೇ ಇದರ ಗುಣಾತ್ಮಕವಾದ ಅಂಶವಾಗಿದೆ.

—ಡಾ॥ ಬಸವರಾಜ ಕಲ್ಗುಡಿ

ಸಿಂಧೂ ನದಿಯ ದಂಡೆಯ ಮೇಲೆ (ಕವನ ಸಂಕಲನ)

ಲೇಖಕರು: **ಚಂದ್ರಶೇಖರ ತಾಳ್ಯ**

ಪ್ರಕಾಶಕರು: ಸಂವಾದ ಪ್ರಕಾಶನ, ಮಲ್ಲಾಡಿಹಳ್ಳಿ, ಚಿತ್ರದುರ್ಗ ಜಿಲ್ಲೆ.

ಪುಟ 60; ಬೆಲೆ ರೂ. 12–00 ಹಾಗೂ ರೂ. 15–00.

ಇದು ಚಂದ್ರಶೇಖರ ತಾಳ್ಯರ ಎರಡನೇ ಕವನಸಂಕಲನ. ಸುಮಾರು ಒಂದು ದಶಕದ ಹಿಂದೆ 'ನನ್ನ ಕಣ್ಣಗಲಕ್ಕೆ' ಎಂಬ ಮೊದಲ ಸಂಕಲನದಲ್ಲೇ ಸಾಕಷ್ಟು ಭರವಸೆ ಮೂಡಿಸಿದ್ದ ತಾಳ್ಯರು ಈ ಹತ್ತು ವರ್ಷಗಳಲ್ಲಿ ಕ್ರಮಿಸಿರುವ ದಾರಿ ಏಕಮುಖವಾದದ್ದಲ್ಲ. ಅಲ್ಲಿ ಇಲ್ಲಿ ಸುತ್ತಿ ಅನೇಕ ಬಗೆಯ ಪ್ರಯೋಗ ಅನುಕರಣೆಗಳೆರಡಕ್ಕೂ ತಮ್ಮ ಕಾವ್ಯವನ್ನು ಈಡುಮಾಡಿ ಒಂದು ರೀತಿಯ ತಾತ್ಕಾಲಿಕ ಸ್ಥಿರತೆಗೆ ಬಂದವರಂತೆ ಎರಡನೆಯ ಕವನ ಸಂಕಲನವನ್ನು ತಲುಪಿದ್ದಾರೆ. ಅದಕ್ಕೇ ಮೊದಲ ಸಂಕಲನಕ್ಕೂ ಎರಡನೇ ಕವನ ಸಂಕಲನಕ್ಕೂ ಹತ್ತು ವರುಷಗಳ ಅಂತರ ಕಾಣುವುದಿಲ್ಲ. ಅದೇ ಮುಗ್ಧತೆ, ಅದೇ ಬೆರಗು, ಅದೇ ವಿಷಣ್ಣತೆ; ಜೊತೆಗೆ ಸ್ವಲ್ಪ ಹೆಚ್ಚು ಕಮ್ಮಿ ಅದೇ ಲಯ. ವ್ಯತ್ಯಾಸವೆಂದರೆ ವಸ್ತುವಿನಲ್ಲಿ ಕಾಣುವ ಮಹತ್ವಾಕಾಂಕ್ಷೆ. 'ಸಿಂಧೂ ನದಿಯ ದಂಡೆಯ ಮೇಲೆ', 'ಮಿರಾಂಡ', ಹಾಗೂ 'ಏಸೊಂದು ಗುಹೆಗಳು', ಈ

ಸಂಕಲನದ ಮಹತ್ವಾಕಾಂಕ್ಷೆಯ ಕವನಗಳು. ಹೀಗಾಗಿ ಈ ಮೂರು ಕವನಗಳನ್ನು ಸಂಕಲನದ ಮಿಕ್ಕೆಲ್ಲಾ ಕವನಗಳ ಜೊತೆ ಇಟ್ಟು ನೋಡಿದಾಗ ತಾಳ್ಯರ ಶಕ್ತಿ, ದೌರ್ಬಲ್ಯಗಳೆರಡೂ ಗೊತ್ತಾಗುತ್ತದೆ.

ಈ ಸಂಕಲನದ ಮೊದಲ ಕವನ 'ಕತ್ತಲೆ ಮತ್ತು ನಾನು' ತಾಳ್ಯರ ಕಾವ್ಯ ಪ್ರಣಾಳಿಕೆಯಂತಿದ್ದು ಅದು ಮುಗಿಯುವುದು ಹೀಗೆ–

ಸುತ್ತಲು ಕತ್ತಲು ಮುತ್ತಲು
ಬೆಟ್ಟ ಕಣಿವೆಗಳು, ಹಸಿರು, ಹಕ್ಕಿಗಳು
ಕತ್ತಲಾದುದ ಕಂಡವನು ನಾನು.

ಇಡೀ ಕವನಸಂಕಲನದ ಸ್ಥಾಯಿ ಧ್ವನಿ ಇದೇ–ಒಂದು ರೀತಿಯ ವಿಷಣ್ಣತೆ. ಇವರ ಕವನಗಳನ್ನು ಓದಿದಾಗ ಸುತ್ತಲು ಕವಿಯುವ ಈ ವಿಷಣ್ಣತೆ ನಮ್ಮ ಮನಸ್ಸನ್ನು ಕಾಡುವಷ್ಟು ಹಾಗೂ ಪ್ರಜ್ಞೆಯನ್ನು ಅರಳಿಸುವಷ್ಟು ದಟ್ಟ ಹಾಗೂ ಕ್ರಿಯಾಶೀಲ ವಾಗುವುದಿಲ್ಲ; ವಿಷಣ್ಣತೆಯ ಮಂಪರಿನಲ್ಲೇ ನಮ್ಮನ್ನು ಇಟ್ಟುಬಿಡುತ್ತದೆ. 'ಕನ್ನಡಿ ಯಲ್ಲಿ ಕಂಡವಳು ಕನ್ನಡಿಯಲೇ ಕಾಡಿದವಳು' ಎಂಬ ಇವರ ಒಂದು ಕವನದ ಸಾಲಿ ನಂತೆಯೇ ನಿಜದ ಒಂದು ಹಂತದ ಹಿಂದೆಯೇ ನಮ್ಮನ್ನು ನಿಲ್ಲಿಸಿಬಿಡುತ್ತದೆ. ಇದು ಕವಿಯ ವ್ಯಕ್ತಿತ್ವದ ಮಿತಿಯೂ ಆಗಿರಬಹುದು.

'ಎಲ್ಲಿ ಹೋದವು ಕನಸಿನ ಹಕ್ಕಿಗಳು ಜೀವ ರೆಕ್ಕೆಯ ಬಡಿದು ?' ಎಂದು ಜಗತ್ತನ್ನು ರೊಮ್ಯಾಂಟಿಕ್ ಆಗಿ ನೋಡುವ ತಾಳ್ಯರು ಕವನ ಕಟ್ಟುವ ತಂತ್ರವನ್ನು ಮಾತ್ರ ವಾಸ್ತವವಾದಿ ಪರಂಪರೆಯಿಂದ ಎರವಲು ಪಡೆದಿದ್ದಾರೆ. ಈ ಒಡಕೇ ಇವರ ಕವನಗಳ ಒಡಕೂ ಆಗಿದೆ. ಆದುದರಿಂದಲೇ ಈ ಮೊದಲು ಸೂಚಿಸಿದ ಮೂರು ಮಹತ್ವಾಕಾಂಕ್ಷೆಯ ಕವನಗಳು ಎಷ್ಟೆಲ್ಲಾ ಹೇಳಿ ಕೊನೆಗೆ ಏನೂ ಹೇಳದಂತಹ ವಿಷಣ್ಣತೆಗೆ ಈಡಾಗುತ್ತದೆ. ಉದಾಹರಣೆಗೆ 'ಸಿಂಧೂ ನದಿಯ ದಂಡೆ ಮೇಲೆ' ಕವನ ತನ್ನೆಲ್ಲಾ ಉತ್ಕೃಷ್ಟ ಕಲ್ಪನೆ, ರೋಚಕ ಶಬ್ದಗುಣ ಹಾಗೂ ಇತಿಹಾಸ ಪುಟಗಳ ಸೃಜನ ಶೀಲ ಮಾಂತೇಜ್‌ಗಳ ಹೊರತಾಗಿಯೂ ನಮ್ಮ ಒಳಗಿನ ತಂತಿಗಳನ್ನು ಮೀಟದಿರಲು ಕಾರಣ ಇದೆಲ್ಲವನ್ನೂ ವರ್ತಮಾನಕ್ಕೆ ಕೂಡಿಸಲು ಅಗತ್ಯವಾದ ಧ್ಯಾನಶೀಲತೆಯ ಕೊರತೆ. ನಿಜವಾದ ಕವಿಪ್ರತಿಭೆ ಇರುವುದು ಅವನು ಎಷ್ಟೇ ಆಕಾಶದೆತ್ತರಗಳನ್ನು ಮುಟ್ಟಬಲ್ಲವನಾದರೂ ಅಲ್ಲಿನ ಸ್ಪಂದನಗಳನ್ನು ಈ ಭೂಮಿಗೆ, ವಾಸ್ತವಕ್ಕೆ, ಇವತ್ತಿಗೆ ತನ್ನ ನೆರೆಹೊರೆಗೆ ತರುವಲ್ಲಿ, ಎಂಬುದೇ ನಿಜವಾದರೆ ತಾಳ್ಯರ 'ಮಿರಾಂಡ' ಹಾಗೂ 'ಏಸೊಂದು ಗುಹೆಗಳು' ಈ ಪ್ರತಿಭೆಯ ಕೊರತೆಯನ್ನು ಪ್ರದರ್ಶಿಸುತ್ತವೆ. ಈ ದೃಷ್ಟಿಯಿಂದ ಇವರ 'ದಂಡೆಯಿದೆ ಇಲ್ಲೆ ಎಲ್ಲೋ', 'ಪರೀಕ್ಷೆ ಹಾಲಲ್ಲಿ ಕುಂತ ಮೇಸ್ಟ್ರಿಗೆ ಕಂಡದ್ದು', 'ದಾವಣಗೆರೆಯೆಂಬ ದೇವನಗರಿಯ ಮಾಯೆ', 'ಬೆಂಗಳೂರಿಗೆ

ಹೋಗಲಾರೆ', 'ಗೆದ್ದಲು ಹುಳ' ಮುಂತಾದ ಅಲ್ಪಾಕಾಂಕ್ಷೆಯ ಕವನಗಳು ಸ್ವಯಂ ಪೂರ್ಣವೆನಿಸುತ್ತವೆ; ಸಾರ್ಥಕವೆನಿಸುತ್ತವೆ.

ಆದರೆ ತಾಳ್ಯರ ನಿಜವಾದ-ಅವರದ್ದೇ ಆದ ಪ್ರತಿಭೆ ಪ್ರಕಟಗೊಂಡಿರುವುದು ಈ ಮೊದಲು ನಾನು ಸೂಚಿಸಿದ ಅವರ ವ್ಯಕ್ತಿತ್ವದ ಮಿತಿಯಲ್ಲೇ ಅರಳಿಕೊಂಡಂತಿರುವ ಅವರ ಪ್ರೇಮ ಉರುಫ್ ವಿರಹ ಕವನಗಳಲ್ಲಿ. ವಿಪರೀತ ಕಲ್ಪನೆಗಳ ಆಡಂಬರವಿಲ್ಲದ, ಶಬ್ದಗಳ ಭಾರವಿಲ್ಲದ ಹಾಗೂ ಹೆಚ್ಚು ಅಲಂಕರಣದ ವಯ್ಯಾರವಿಲ್ಲದ ಇವರ 'ಸುಂದರಿಯರು', 'ಈಗವಳು ಏಕಾಂಗಿ'. 'ಶಿವಮೊಗ್ಗೆಯ ಹುಡುಗಿಯರು', 'ಒಂದು ವಿರಹಗೀತೆ' ಮುಂತಾದ ಕವನಗಳು ಯಾರಿಗಾದರೂ ಮುದಕೊಡುತ್ತವೆ. ಈ ದೃಷ್ಟಿಯಿಂದ ತಾಳ್ಯರು ಮುನ್ನುಡಿಯಲ್ಲಿ 'ನನ್ನ ಬೊಗಸೆ ತುಂಬಿದ ಕಣ್ಣೀರು ಕವನದ ಆಕಾರ ತಳೆಯುವುದರಲ್ಲಿ ಯಶಸ್ವಿಯಾಗಿದ್ದರೆ ಅದೇ ಒಂದು ಸಾರ್ಥಕತೆ' ಎಂದಿರುವ ಮಾತಿನ ಅರ್ಥ ಸ್ವಲ್ಪ ಸ್ಪಷ್ಟವಾದಂತಾಗುತ್ತದೆ. ಆದರೆ ತಮ್ಮ ಈ ಅಮೂಲ್ಯವಾದ ತುಂಬು ಬೊಗಸೆ ಕಣ್ಣೀರನ್ನು ಅರ್ಪಿಸಿರುವುದು ಯಾರಿಗಾಗಿ, ಎಂಬ ಪ್ರಶ್ನೆ ಮಾತ್ರ ನಿಗೂಢವಾಗಿ ಉಳಿಯುತ್ತದೆ !

–ಡಿ. ಎಸ್. ನಾಗಭೂಷಣ

ಹೊಸ ಪುಸ್ತಕಗಳು :

ನವಿಲು ಕಿನ್ನರಿ (ಕವನ ಸಂಕಲನ) ಲೇ: ಲಕ್ಷ್ಮೀಪತಿ,
ಪ್ರ: ಶುಭದ ಪ್ರಕಾಶನ, ಜರಗನಹಳ್ಳಿ, ಜೆ.ಪಿ. ನಗರ ಅಂಚೆ,
ಬೆಂಗಳೂರು–560 078. ಪುಟ: 54, ಬೆಲೆ: 8 ರೂ.

ಕವಿ ಮತ್ತು ಕರವಸ್ತ್ರ (ಕವನ ಸಂಕಲನ) ಲೇ: ಕುಮಾರ ಜೋಶಿ
ಪ್ರ: ಗೀತಾ ಬುಕ್ ಹೌಸ್, ಮೈಸೂರು.
ಪುಟ; 62, ಬೆಲೆ: 18 ರೂ.

ಸಿಕ್ಕಿದ್ದು (ಕಾದಂಬರಿ) ಲೇ: ಮೋಹನದಾಸ್ ಧಾವಸ್ಕರ್,
ಸ್ವಯಂ ಪ್ರಕಾಶನ, ಪುಟ: 206, ಬೆಲೆ: 22 ರೂ.

ಇನ್ನೊಬ್ಬಳು ಶಕುಂತಳೆ (ಕವನ ಸಂಕಲನ)
ಲೇ: ಕೆ. ಎಂ. ಮುನಿಕೃಷ್ಣಪ್ಪ,
ಪ್ರ: ಸುವಿದ್ಯಾ ಪ್ರಕಾಶನ, ನಂ. 7, ಸರ್ವೆಯರ್ ರಸ್ತೆ, ಬೆಂಗಳೂರು
ಪುಟ: 66, ಬೆಲೆ: 16 ರೂ.

('ಸಂವಾದ'ಕ್ಕೆ ವಿಮರ್ಶೆಗಾಗಿ ಪುಸ್ತಕ ಕಳುಹಿಸುವವರು ಎರಡು ಪ್ರತಿಗಳನ್ನು ಕಳುಹಿಸಬೇಕು)

ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗ,

ನಮ್ಮ ಮೂರನೆಯ ಸಂಪುಟದ ಎರಡನೇ ಸಂಚಿಕೆಯನ್ನು ಅನಿವಾರ್ಯವಾಗಿ ತಡವಾಗಿ ಕೊಡುತ್ತಿದ್ದೇವೆ. ಇದಕ್ಕೆ ನಮ್ಮ ಬೇಜವಾಬ್ದಾರಿತನಕ್ಕಿಂತ ಹೆಚ್ಚಾಗಿ ನಮ್ಮ ಚಂದಾದಾರ ಗೆಳೆಯರನೇಕರ ಆಲಸ್ಯ ಅಥವಾ ನಿರ್ಲಕ್ಷ್ಯ ಕಾರಣವಾಗಿದೆ ಎಂಬುದನ್ನು ನಿಮಗೆ ತಿಳಿಸಬಯಸುತ್ತೇವೆ. ಈ ಗೆಳೆಯರ ಆಲಸ್ಯ ಮತ್ತು ನಿರ್ಲಕ್ಷ್ಯ ದಿಂದ ನಾವು ಎಷ್ಟು ಜಿಗುಪ್ಸೆಗೊಂಡಿದ್ದೇವೆಂದರೆ, ಇಂತಹ ಒಂದು ಚಿಕ್ಕ ಸಾಹಿತ್ಯಿಕ–ಸಾಂಸ್ಕೃತಿಕ ನಿಯತಕಾಲಿಕವೊಂದು ಅನಗತ್ಯವೆಂದು ಕನ್ನಡ ಸಾರಸ್ವತ ಲೋಕವು ಭಾವಿಸುವುದಾದರೆ ನಾವಾದರೂ ಯಾಕೆ ವೃಥಾ ಆಯಾಸಗೊಂಡು ವ್ಯಥೆಗೊಂಡು ಅದನ್ನು ಮುಂದುವರೆಸಬೇಕು ಎಂಬ ಪ್ರಶ್ನೆಯನ್ನು ನಮ್ಮಷ್ಟಕ್ಕೆ ನಾವೇ ಅನೇಕ ಬಾರಿ ಕೇಳಿಕೊಂಡದ್ದುಂಟು. ಆದರೆ ನಾವು ಇಂತಹ ನಿಯತಕಾಲಿಕವೊಂದನ್ನು ಆರಂಭಿಸುವ ಸಲಹೆ ಮುಂದಿಟ್ಟಾಗ, ಸಾಹಿತ್ಯಕ್ಕಾಗಿ ಪ್ರಾಣ, ಮಾನಗಳನ್ನು ಒತ್ತೆಯಿಟ್ಟಂತೆ 'ವಾಗ್ದಾನ'ಗಳನ್ನು ಮಾಡುವ ನಮ್ಮ ಅನೇಕ ಸಾವಿರಾರು ರೂಪಾಯಿ ಸಂಬಳಗಳ ಸರದಾರರಷ್ಟೇ ಅಲ್ಲ, ಸಾಹಿತ್ಯದ ಬಗ್ಗೆ ಪ್ರದರ್ಶಕವಾಗಿ ಮಾತಾಡದೆ ಅದನ್ನು ಮೌನವಾಗಿ ಆಸ್ವಾದಿಸುವ ಮತ್ತು ಸಾಹಿತ್ಯ ಕ್ಷೇತ್ರದೊಂದಿಗೆ ತಮ್ಮನ್ನು ಗುರುತಿಸಿಕೊಳ್ಳದ ಅನೇಕ ಸಹೃದಯ ಗೆಳೆಯರೂ ನಮ್ಮನ್ನು ಹುರಿದುಂಬಿಸಿದ್ದರು. ಇವರಲ್ಲಿ ಎರಡನೇ ವರ್ಗದ ಬಹುತೇಕ ಜನರು ಒಮ್ಮೆಗೇ ಆಜೀವ ಚಂದಾಹಣ ನೀಡಿ ನಮಗೆ ಒಂದು ತರಹ ಆಶ್ಚರ್ಯ ಉಂಟುಮಾಡಿದರೆ, ಮೊದಲನೇ ವರ್ಗದ ಅನೇಕರು ಚಿಕ್ಕಾಸನ್ನೂ ಬಿಚ್ಚದೆ ಎರಡು ಸಂಪುಟಗಳನ್ನು–ಅಂದರೆ ಹನ್ನೆರಡು ಸಂಚಿಕೆಗಳನ್ನು–ನಿಸ್ಸಂಕೋಚವಾಗಿ ಪಡೆದುಕೊಂಡು ನಮಗೆ ಇನ್ನೊಂದು ತರಹ ಆಶ್ಚರ್ಯ ತಂದರು. ಇವರಲ್ಲಿ ಖ್ಯಾತ ಸಾಹಿತಿಗಳಲ್ಲದೆ, ಕನ್ನಡ ಪತ್ರಿಕೆಗಳನ್ನು ಕೊಂಡು ಓದಿ ಪ್ರೋತ್ಸಾಹಿಸಬೇಕೆಂದು ಶಾಲಾ ಕಾಲೇಜುಗಳಲ್ಲಿ ಮತ್ತು ಬಹಿರಂಗ ಸಭೆಗಳಲ್ಲಿ ಭಾಷಣ ಬಿಗಿಯುವ ಕನ್ನಡ ಧುರೀಣರೂ ಸೇರಿದ್ದಾರೆ! ಕನ್ನಡಕ್ಕೆ ವಂಚನೆ ಎಂದು ಕೂಗಾಡುವ ಈ ಧುರೀಣರಿಗೆ ತಮ್ಮಂತಹವರ ಇಂತಹ ಆತ್ಮವಂಚನೆಯಿಂದಲೇ ಕನ್ನಡಕ್ಕೆ ವಂಚನೆಯಾಗುತ್ತಿರುವುದು ಎಂಬುದು ಗೊತ್ತಾಗದಿರುವುದು ಕನ್ನಡ ಸಂಸ್ಕೃತಿಯ ದುರಂತವಷ್ಟೆ. ಇನ್ನು ಕೆಲವರು ಒಂದು ವರ್ಷದ ಚಂದಾ ಕೊಟ್ಟು ಸುಮ್ಮನಾದರು. ಎರಡನೇ ಸಂಪುಟದ ಪ್ರತಿ ಸಂಚಿಕೆಯಲ್ಲೂ ದಯವಿಟ್ಟು ಚಂದಾ ನವೀಕರಿಸಿ ಇಲ್ಲವೇ ಪತ್ರಿಕೆ ಬೇಡವೆಂದು ಒಂದು ಕಾರ್ಡನ್ನಾದರೂ ಹಾಕಿರೆಂದು ತಿಳಿಸಿದರೂ ನಮಗೆ

ಸಿಗೊಟ್ಟವರು ತೀರಾ ಅಲ್ಪ ಸಂಖ್ಯೆಯ ಗೆಳೆಯರು. ಇವತ್ತು ಹಲವಷ್ಟು ನಿಯತಕಾಲಿಕಗಳು ಚಂದಾ ಪಡೆದು ಒಂದು ಸಂಪುಟ ಕೂಡಾ ಪೂರ್ಣವಾಗಿ ಹೊರಬರದೆ ನಿಂತು ಹೋಗಿರುವ ಹಿನ್ನೆಲೆಯಲ್ಲಿ ಈ ಆಲಸ್ಯವೆಂದುಕೊಂಡರೆ ನಾವು ಎರಡು ಸಂಪುಟ ಪೂರ್ಣಗೊಟ್ಟರೂ ಜಗ್ಗದ ಈ ಚಂದಾದಾರರು ಮಹಾನ್ ಭಂಡರೆಂದೇ ನಾವು ತೀರ್ಮಾನಿಸಿ ಈಗ ಇವರೆನ್ನೆಲ್ಲಾ ನಮ್ಮ ಚಂದಾದಾರರ ಪಟ್ಟಿಯಿಂದ ಕೈಬಿಟ್ಟಿದ್ದೇವೆ. ಈ ಮಧ್ಯೆ ನಮ್ಮ ಕಡೆಯಿಂದಲೂ ಕೆಲವು ತಪ್ಪುಗಳಾಗಿವೆ. ಚಂದಾದಾರರ ಅಂಚೆ ವಿಳಾಸ ಪೂರ್ಣವಾಗಿ ಪಡೆಯದೆ ಅಥವಾ ಪಡೆದುಕೊಂಡರೂ ವಿಳಾಸ ಬರೆಯುವಾಗ ತಪ್ಪು ಬರೆದು ಸಂಚಿಕೆ ಓದುಗರ ಕೈ ಸೇರುವುದರಲ್ಲಿ ವ್ಯತ್ಯಯವಾಗಿದೆ. ಆದರೆ ಇವು ಬೆರಳೆಣಿಕೆಯಷ್ಟು ಮಾತ್ರ. ನಮ್ಮ ಗಮನಕ್ಕೆ ಬಾರದೆ ಹೋಗಿರುವ ಇಂತಹ ಪ್ರಮಾದಗಳೇನಿದ್ದರೂ, ನಮಗೆ ದಯಮಾಡಿ ಬರೆದರೆ, ತಕ್ಷಣವೇ ನಿಮಗೆ ಸಂಚಿಕೆ ಕಳಿಸಲಾಗುವುದು.

ಇಷ್ಟೆಲ್ಲಾ ಅಡೆ-ತಡೆಗಳ ನಡುವೆಯೂ ನಾವು ಪತ್ರಿಕೆಯನ್ನು ಹೆಚ್ಚು ಸುವ್ಯವಸ್ಥಿತವಾಗಿ, ಚೊಕ್ಕವಾಗಿ ಹಾಗೂ ನಿಯತವಾಗಿ ಹೊರತರಲು ನಮಗೆ ಪ್ರೇರಣೆ ದೊರೆತಿರುವುದು ಮೇಲೆ ಪ್ರಸ್ತಾಪಿಸಿದ, ಸಾಹಿತ್ಯ ಕ್ಷೇತ್ರದೊಂದಿಗೆ ಅಷ್ಟಾಗಿ ಗುರುತಿಸಿಕೊಳ್ಳದ, ಸಹೃದಯರಿಂದಲೇ. ಅವರು ಇನ್ನಷ್ಟು ಜನ ಆಜೀವ ಚಂದಾದಾರರನ್ನು ನಮಗೆ ಒದಗಿಸಲು ಮುಂದೆ ಬಂದಿರುವುದು ಹಾಗೂ ನಾವು ಈವರೆಗೆ ಭೇಟಿಯಾಗದಿದ್ದ ಅನೇಕ ಸಹೃದಯ ಗೆಳೆಯರು ನಮ್ಮಲ್ಲಿ ಭರವಸೆ ಮೂಡಿಸುವಷ್ಟು ಸಂಖ್ಯೆಯಲ್ಲಿ ವಾರ್ಷಿಕ ಚಂದಾದಾರರನ್ನು ನೋಂದಾಯಿಸಿಕೊಡುವ ಉತ್ಸಾಹ ತೋರಿರುವುದು ನಮ್ಮನ್ನು ಅಪ್ರತಿಭರನ್ನಾಗಿ ಮಾಡಿದೆ. ಜೊತೆಗೆ ರಾಜ್ಯ ಸಾಹಿತ್ಯ ಅಕಾಡೆಮಿ ಸಾಹಿತ್ಯ ನಿಯತಕಾಲಿಕಗಳಿಗೆ ಪ್ರೋತ್ಸಾಹ ನೀಡುವ ತನ್ನ ವಾರ್ಷಿಕ ಯೋಜನೆಯಡಿ 'ಸಂವಾದ'ವನ್ನು ಈ ಹಿಂದೆಯೇ ಆಯ್ಕೆ ಮಾಡಿಕೊಂಡು ನಮ್ಮ ವಿಶ್ವಾಸವನ್ನು ಹೆಚ್ಚಿಸಿದೆ. ಇದೇ ಸಂದರ್ಭದಲ್ಲಿ ನಾವು ಹೆಮ್ಮೆ, ಜೊತೆಗೆ ವಿಷಾದದಿಂದಲೂ ಹೇಳಬೇಕಾದ ಸಂಗತಿಯೊಂದಿದೆ: ಅಕಾಡೆಮಿ ಪ್ರತಿವರ್ಷ ವಿವಿಧ ಪ್ರಕಾರಗಳಲ್ಲಿ ಪ್ರಕಟಿಸುವ 'ವರ್ಷದ ಆಯ್ಕೆ' ಸಂಗ್ರಹಗಳಲ್ಲಿ ಸಂವಾದದಿಂದ ಹೆಕ್ಕಿದ ಅನೇಕ ಬರಹಗಳು ಪ್ರಕಟವಾಗುತ್ತಿವೆ. ನಿರ್ದಿಷ್ಟ ಉದಾಹರಣೆಯಾಗಿ ಹೇಳಬೇಕೆಂದರೆ 1988ರ 'ಸಾಹಿತ್ಯ ವಿಮರ್ಶೆ' ಸಂಗ್ರಹದ ಮೂರನೇ ಒಂದು ಭಾಗದಷ್ಟು ಲೇಖನಗಳನ್ನು ಆಯ್ದುಕೊಂಡಿರುವುದು 'ಸಂವಾದ'ದಿಂದ. ಆದರೆ ಸಂಪಾದಕ ಮಹಾಶಯರಿಂದ ಎಲ್ಲಿಯೂ ಅದರ ಉಲ್ಲೇಖವಿಲ್ಲ. ಇನ್ನು ಮುಂದೆಯಾದರೂ ಅಕಾಡೆಮಿ, ಈ ಸಂಗ್ರಹಗಳ ಸಂಪಾದಕರಿಗೆ ಸಂಪಾದನಾ ಕಾರ್ಯದ ಮೂಲಭೂತ ಸಂಗತಿಗಳಲ್ಲಿ ಒಂದಾದ ಸಭ್ಯತೆ ಮತ್ತು ವಿನಯಗಳ ಸೂಚನೆ ಕೊಟ್ಟರೆ ಒಳ್ಳೆಯದೆಂದು ನಾವು ಭಾವಿಸುತ್ತೇವೆ.

ಇದೇ ಸಂದರ್ಭದಲ್ಲಿ 'ಸಂವಾದ'ವನ್ನು ಸುವ್ಯವಸ್ಥಿತಗೊಳಿಸುವ ನಮ್ಮ ಕೆಲವು ಆಲೋಚನೆಗಳನ್ನು ನಿಮ್ಮ ಮುಂದೆ ಇಡಬಯಸುತ್ತೇವೆ. ಆರು ಜನರಿಂದೊಡಗೂಡಿ ತುಸು ಭಾರವೆನಿಸುತ್ತಿದ್ದ ಸಂಪಾದಕ ಮಂಡಳಿಯನ್ನು, ಹೆಚ್ಚು ಚುರುಕಾಗಿ, ದಕ್ಷವಾಗಿ ಹಾಗೂ ಸಮನ್ವಯದಿಂದ ಕೆಲಸವಾಗುವಂತೆ, ಮೂರಕ್ಕೆ ಇಳಿಸಿಕೊಂಡಿದ್ದೇವೆ. ಆರು ಜನರಲ್ಲಿ ಒಬ್ಬರು, ತಮ್ಮ ಇತರ ಕಾರ್ಯಭಾರಗಳನ್ನು ಸರಿಯಾಗಿ ನಿರ್ವಹಿಸಲಾಗುವಂತೆ 'ಸಂವಾದ'ದ ಸಂಪಾದಕತ್ವದ ಜವಾಬ್ದಾರಿಯನ್ನು ಸ್ವಇಚ್ಛೆಯಿಂದ ಬಿಟ್ಟು ಕೊಟ್ಟಿದ್ದಾರೆ. ಇನ್ನಿಬ್ಬರು ನಾವು ಹೊಸದಾಗಿ ಆರಂಭಿಸುವ 'ಸಂವಾದ' ಪುಸ್ತಕ ಪ್ರಕಾಶನದ ಜವಾಬ್ದಾರಿ ವಹಿಸಿಕೊಳ್ಳಲಿದ್ದಾರೆ. ಹೀಗಾಗಿ ಇನ್ನು ಮುಂದೆ, ಪ್ರತಿ ಸಂಚಿಕೆಯನ್ನೂ ಮೂವ್ವರು ಸಂಪಾದಕರೂ ಒಟ್ಟಿಗೆ ಸಂಪಾದಿಸಲಿದ್ದಾರೆ. ಇದರಿಂದಾಗಿ ಸಂಚಿಕೆ ಸಕಾಲದಲ್ಲಿ ಹೊರಬರಲು ಅನುಕೂಲವಾಗುವುದಲ್ಲದೆ, ಪ್ರತಿ ಸಂಚಿಕೆಯ ಗುಣಮಟ್ಟ ಹಾಗೂ ವೈವಿಧ್ಯ ಹೆಚ್ಚಲಿದೆ. ಜೊತೆಗೆ ಸಾಹಿತ್ಯ–ಸಂಸ್ಕೃತಿ ಪ್ರಿಯರಾದ ಮುದ್ರಣಾಲಯದವರೂ ನಮ್ಮ ನೆರವಿಗೆ ಬಂದಿದ್ದು, ಪತ್ರಿಕೆಯ ಸಕಾಲಿಕತೆಯ ಜೊತೆಗೆ ಅಂದಚೆಂದ ಹೆಚ್ಚುವ ನಿರೀಕ್ಷೆಯನ್ನು ನಾವಿಟ್ಟುಕೊಂಡಿದ್ದೇವೆ. ಹೀಗಾಗಿ ಸಾಹಿತ್ಯಾಸಕ್ತರು ತಾವು ಚಂದಾದಾರರಾಗುವ ಜೊತೆಗೆ ಚಂದಾದಾರರನ್ನು ಕೂಡಿಸಿ ಕೊಡಲೂ ನೆರವಾಗಬೇಕೆಂದು ಕೋರಿಕೊಳ್ಳುತ್ತೇವೆ. ನಾವೀಗ ಈ ಸಂಚಿಕೆಯನ್ನು ನಮ್ಮ ಚಂದಾದಾರರಲ್ಲದೆ, ಸಾಹಿತ್ಯಾಸಕ್ತರೆಂದು ಹಾಗೂ ಇಂತಹ ಪತ್ರಿಕೆಗಳು ಉಳಿದು ಬೆಳೆಯಬೇಕೆಂಬ ಆಸೆ ಇಟ್ಟುಕೊಂಡವರೆಂದು ನಾವು ಭಾವಿಸಿರುವ ಒಂದಷ್ಟು ಗೆಳೆಯರಿಗೆ ಕಳಿಸಿರುತ್ತೇವೆ. ಅಂತಹವರು ಈ ಸಂಚಿಕೆಯ ಬಗ್ಗೆ ತಮ್ಮ ಅಭಿಪ್ರಾಯವನ್ನಲ್ಲದೆ, ಕೂಡಲೇ ಚಂದಾ ಕಳಿಸುವ ಮನಸ್ಸು ಮಾಡಿದರೆ 'ಸಂವಾದ' ಇನ್ನಷ್ಟು ಸುಭದ್ರವಾಗಲು ಸಹಾಯವಾಗುತ್ತದೆ. ವಾರ್ಷಿಕ ಚಂದಾ ಪ್ರತಿ ವರ್ಷ ವಸೂಲಿ ಮಾಡಲು ನಮಗೆ ಮತ್ತು ಕಳಿಸಲು ನಿಮಗೆ ಅನೇಕ ಕಾರಣಗಳಿಂದ ತೊಂದರೆಯಾಗಬಹುದು. ಆದುದರಿಂದ ನಮ್ಮ ಚಂದಾದಾರರು ಹಾಗೂ ಶುಭಾಕಾಂಕ್ಷಿಗಳು ಆಜೀವ ಚಂದಾ ಹಣವನ್ನು–ಎರಡು ಕಂತುಗಳಲ್ಲಾದರೂ ಸರಿ–ಕಳಿಸಿದರೆ ನಮಗೆಷ್ಟೋ ಉಪಕಾರವಾದಂತಾಗುತ್ತದೆ. ನಮ್ಮ ಈ ಕೋರಿಕೆಗೆ ಆದಷ್ಟು ಬೇಗ ನಿಮ್ಮಿಂದ ಮನ್ನಣೆಯನ್ನು ನಿರೀಕ್ಷಿಸುತ್ತೇವೆ.

ನಮ್ಮ ಅನೇಕ ಲೇಖಕ ಗೆಳೆಯರು 'ಸಂವಾದ'ದಲ್ಲಿ ವಿಮರ್ಶೆಗೆಂದು ಪುಸ್ತಕಗಳನ್ನು ಕಳಿಸುತ್ತಿದ್ದಾರೆ. ಎಲ್ಲ ಪುಸ್ತಕಗಳ ಪೂರ್ಣ ಪ್ರಮಾಣದ ವಿಮರ್ಶೆ ಸಾಧ್ಯವಾಗದೆಂಬುದನ್ನು ನಾವು ಹೇಳಬೇಕಾಗಿಲ್ಲ. ಆದರೆ ವಿಶ್ವಾಸದಿಂದ ಕಳಿಸಿದ ಈ ಪುಸ್ತಕಗಳನ್ನು ನಾವು ಅಗೌರವದಿಂದ ಕಾಣಲೂ ಸಾಧ್ಯವಿಲ್ಲ. ಹೀಗಾಗಿ ನಾವು ಮುಂದಿನ ಸಂಚಿಕೆಯಿಂದ ನಮಗೆ ಬಂದ ಎಲ್ಲ ಪುಸ್ತಕಗಳ 'ಮೊದಲ ನೋಟ'ದ ಸಂಕ್ಷಿಪ್ತ ಪರಿಚಯ ನೀಡಲು ಉದ್ದೇಶಿಸಿದ್ದೇವೆ. ಪುಸ್ತಕ, ಚಂದಾ, ಲೇಖನ,

ಪತ್ರ–ಇವೆಲ್ಲವುಗಳನ್ನೂ ನಮ್ಮ ಮಲ್ಲಾಡಿಹಳ್ಳಿ ಕಾರ್ಯಾಲಯದ ವಿಳಾಸಕ್ಕೆ ಕಳುಹಿಸಿ.

ಪತ್ರಿಕೆಯ ಬಗ್ಗೆ ಹೇಳಿಕೊಳ್ಳಲೇ ಸಾಕಷ್ಟು ಸಾಮಗ್ರಿ ಇದ್ದುದರಿಂದ ಈ ಟಿಪ್ಪಣಿಗಳಲ್ಲಿ ಸಾಹಿತ್ಯಕ ವಿಷಯದ ಬಗ್ಗೆ ವಿವರವಾಗಿ ಬರೆಯುವುದು ಅಸಾಧ್ಯವಾಗಿದೆ. ಆದರೂ ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಜಾಗೃತ ಸಾಹಿತ್ಯ ಸಮ್ಮೇಳನದ ಬಗೆಗೆ ನಮ್ಮ ಓದುಗರ ಗಮನ ಸೆಳೆಯಬಯಸುತ್ತೇವೆ. ಈ ಜಾಗೃತ ಸಾಹಿತ್ಯ ಸಮ್ಮೇಳನದ ಉದ್ದೇಶವಾದರೂ ಏನಾಗಿತ್ತು ? ಆರ್. ಸಿ. ಹಿರೇಮಠರನ್ನು ವಿರೋಧಿಸುತ್ತಾ ಹುಟ್ಟಿಕೊಂಡ ಈ ವೇದಿಕೆ, ಮಧ್ಯಂತರದಲ್ಲಿ ಸಾಹಿತ್ಯ ಪರಿಷತ್ತನ್ನು ವಿರೋಧಿಸುತ್ತಾ, ಕೊನೆಗೆ ಸಾಹಿತ್ಯಕ ಪುಢಾರಿಕೆಯನ್ನು ವಿರೋಧಿಸುವುದಾಗಿ ತಿಳಿಸಿದೆ. ಆದರೆ ಈ ವೇದಿಕೆಯ ವಕ್ತಾರರ ಚರಿತ್ರೆಯನ್ನೊಮ್ಮೆ ನೋಡಿದರೆ ಸಾಹಿತ್ಯಕ ಪುಢಾರಿಕೆ ಹುಟ್ಟಿದುದೇ ಇವರಿಂದ ಎನ್ನುವಂತಿದೆ ! ಗುಂಪು, ವೇದಿಕೆ, ಸಿದ್ಧಾಂತಗಳನ್ನು ತಂತಮ್ಮ ಬೆದೆಗಾಲಗಳನ್ನನುಸರಿಸಿ ಬದಲಾಯಿಸುತ್ತಾ ಹೋಗುತ್ತಿರುವ ರಾಜಧಾನಿಯ ಈ ಮೂಲ ಪುಢಾರಿಗಳು ಈಗ ಸಾಹಿತ್ಯದ 'ಶ್ರೇಷ್ಠತೆ'ಯನ್ನು ಹಿಡಿದುಕೊಂಡಿದ್ದಾರೆ. ಇನ್ನು ರಾಜಧಾನಿ ಸಾಹಿತ್ಯದ ಮೌಲ್ಯಗಳನ್ನೇ ತಮ್ಮ ಆದರ್ಶವಾಗಿರಿಸಿಕೊಂಡಿರುವ ಗ್ರಾಮಾಂತರ ಪ್ರದೇಶಗಳ ಮರಿಪುಢಾರಿಗಳು ಈ ಮೂಲ ಪುಢಾರಿಗಳಿಗೆ ಚಾಮರ ಬೀಸಲು, ಕೊಡೆ ಹಿಡಿಯಲು, ಕಂಬಳಿ ಹಾಸಲು, ಸಿದ್ಧರಾಗಿ ನಿಂತಿದ್ದಾರೆ. ಏಕೆಂದರೆ ಇವರಿಗೂ ರಾಜಧಾನಿಯ ಸಾಹಿತ್ಯಕ ದರ್ಬಾರುಗಳಲ್ಲಿ ಸ್ಥಾನ ಬೇಕಿದೆ. ಆದರೆ ಈ ದರ್ಬಾರುಗಳಲ್ಲಿ ಶ್ರೇಷ್ಠತೆಯ ಬಗ್ಗೆ ಚರ್ಚೆ ನಡೆಯುತ್ತಿದ್ದಂತೆಯೇ, ತೀರ್ಪುಗಳು ಹೊಮ್ಮುತ್ತಿದ್ದಂತೆಯೇ ಹೊರಗೆ ಪ್ರಕೃತಿಯಲ್ಲಿ ಬೀಜಗಳು ನೆಲ ಸೇರುತ್ತಿರುತ್ತವೆ, ಮೊಳಕೆಯೊಡೆಯುತ್ತಿರುತ್ತವೆ, ಹಸಿರು ಉಕ್ಕುತ್ತಿರುತ್ತದೆ, ಹೂಗಳು ಅರಳುತ್ತಿರುತ್ತವೆ, ಬಣ್ಣ ಮತ್ತು ಕಂಪು ತಾನೇ ತಾನಾಗಿ ನಮ್ಮನ್ನು ಆವರಿಸುತ್ತಿರುತ್ತದೆ. ❃

ಪ್ರಿಯರೇ,

ನಿಮಗೆ ಈಗಾಗಲೇ ತಿಳಿದಿರುವಂತೆ 'ಸಂವಾದ' ಪುಸ್ತಕ ಪ್ರಕಾಶನವನ್ನೂ ಆರಂಭಿಸಿದ್ದು ಈಗಾಗಲೇ ಚಂದ್ರಶೇಖರ ತಾಳ್ಯರ 'ಸಿಂಧೂನದಿಯ ದಂಡೆಯ ಮೇಲೆ' ಕವನ ಸಂಕಲನವನ್ನು ಪ್ರಕಟಿಸಿಯಾಗಿದೆ. 1990ರಲ್ಲಿ ಪುಸ್ತಕ ಪ್ರಕಾಶನವನ್ನು ನಿಯಮಿತವಾಗಿ ಆರಂಭಿಸಲು ಯೋಜಿಸಲಾಗಿದ್ದು, ಮೊದಲಿಗೆ ಜೂನ್ ತಿಂಗಳಲ್ಲಿ ಸ. ಉಷಾ ಅವರ 'ಈ ನೆಲದ ಹಾಡು' ಕವನ ಸಂಕಲನವನ್ನು ಬಿಡುಗಡೆಗೊಳಿಸಲಿದೆ. ಈ ಸಂಕಲನವೂ ಸೇರಿದಂತೆ ಈ ವರ್ಷಾಂತ್ಯದೊಳಗೆ ಸುಮಾರು ಮೂರು ನೂರು ಪುಟಗಳ ಮೌಲಿಕ ಸಾಹಿತ್ಯ ಪ್ರಕಟಿಸುವ ಸಿದ್ಧತೆ ನಡೆದಿದೆ. ಇದರಲ್ಲಿ ವಿವಿಧ ಲೇಖಕ-ಲೇಖಕಿಯರ ಕಥನ, ವಿಚಾರ, ವಿಮರ್ಶೆ ಒಳಗೊಂಡಿರುತ್ತದೆ. 30 ರೂಪಾಯಿಗಳ ಪ್ರಕಾಶನ ಸದಸ್ಯತ್ವ ಪಡೆದು ಮೂರು ನೂರು ಪುಟಗಳ ಈ ಸಾಹಿತ್ಯವನ್ನು ಪಡೆದುಕೊಳ್ಳಬಹುದಾಗಿದೆ. ಮೂರು ವರ್ಷಗಳಿಂದ 'ಸಂವಾದ'ವನ್ನು ಓದುತ್ತಿರುವ ತಾವು ನಾವು ಕೊಡಬಯಸುವ ಸಾಹಿತ್ಯದ ಮೌಲಿಕತೆ ಬಗ್ಗೆ ನಂಬಿಕೆ ಇರಿಸುವಿರೆಂದು ಭಾವಿಸುತ್ತೇವೆ. ನೀವು ಮತ್ತು ನಿಮ್ಮ ಗೆಳೆಯರು ನಮ್ಮ ಈ ಪ್ರಯತ್ನಕ್ಕೆ ಬೆಂಬಲವಾಗಿ ನಿಲ್ಲುವಿರೆಂಬ ಆಶಯ ನಮ್ಮದು. ಬರೆಯಿರಿ.

ವಿಶ್ವಾಸದ,

ವೈ. ಮಂಜಪ್ಪ, ಜಿ.ಎಲ್. ರಾಮಪ್ಪ,
ಸಂವಾದ ಪುಸ್ತಕ ಪ್ರಕಾಶನದ ಪರವಾಗಿ

ನಮ್ಮ ವಿಳಾಸ:

ಜಿ. ಎಲ್. ರಾಮಪ್ಪ.
ಸಂವಾದ ಪುಸ್ತಕ ಪ್ರಕಾಶನ,
ಮಲ್ಲಾಡಿಹಳ್ಳಿ

ಈ ಸಂಕಲನದಲ್ಲಿ–